ಸಂಪುಟ: 04 ಸಂಚಿಕೆ: 241 ಪುಟಗಳು: 08 ಗುರುವಾರ 14 ನವೆಂಬರ್ 2024
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

ಮುಂಜಾನೆ ಮಾತು
ಹಡಗು ಎಷ್ಟೇ ಭಾರವಿದ್ದರೂ ಕಡಲ ಮೇಲೆ ತೇಲಲೇಬೇಕು ಹಾಗೇ ಮನಸ್ಸು ಎಷ್ಟೇ ಭಾರವಾದರೂ... ಬದುಕಿನ ಜೊತೆ ಸಾಗಲೇಬೇಕು...

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಶಿಗ್ಗಾಂವಿ	ಶೇ.80.48	ಚನ್ನಪಟ್ಟಣ	ಶೇ.88.80	ಸಂಡೂರು	ಶೇ.76.24

ಚನ್ನಪಟ್ಟಣ, ಶಿಗ್ಗಾಂವಿ, ಸಂಡೂರು ಉಪಚುನಾವಣೆ

ಶಾಂತಿಯುತ ಮತದಾನಕ್ಕೆ ಸಾಕ್ಷಿ

■ ಶಿಗ್ಗಾಂವಿ ಉಪ ಚುನಾವಣೆ: ಮತದಾನಕ್ಕೂ ಮುನ್ನ ಕಾಂಗ್ರೇಸ್ ಅಭ್ಯರ್ಥಿಗೆ ಬಿಗ್ ಶಾಕ್ ■ ಯುವಜನತೆ ಸೇರಿದಂತೆ ವಯೋವೃದ್ಧರೂ ಕೂಡಾ ಮತಗಟ್ಟೆಗೆ ಆಗಮಿಸಿ ಸರತಿ ಸಾಲಿನಲ್ಲಿ ನಿಂತು ಶಾಂತಿಯುತವಾಗಿ ವೋಟ್



ಶಿಗ್ಗಾಂವಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ, ಇವರ ತಂದೆ ಹಾಗು ಸಂಸದ ಬಸವರಾಜ ಬೊಮ್ಮಾಯಿ ಅವರು ಸರ್ಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆ ನಂ.1ರಲ್ಲಿ ಸರತಿ ಸಾಲಿನಲ್ಲಿ ನಿಂತು ಮತದಾನ ಮಾಡಿದರು.

ತಂದೆಗೆ ಓಟ್ ಮಾಡದಿರಲು ನಿಶಾ ಯೋಗೇಶ್ವರ್ ನಿರ್ಧಾರ ಮಾಡಿದ್ದಾರೆ. ಇಂದಿನ ಉಪ ಚುನಾವಣೆಗೆ ನಿಶಾ ಯೋಗೇಶ್ವರ್ ಓಟ್ ಮಾಡಲ್ಲ ಎಂದು ಕುಳಿತುಕೊಂಡಿದ್ದಾರೆ. ಇನ್ನು ಈ ಸಂದೇಶವನ್ನು ಸಾಮಾಜಿಕ ಜಾಲತಾಣದ ಮೂಲಕ ನಿಶಾ ನೀಡಿದ್ದು, ನನ್ನ ಮೂಲಭೂತ ಹಕ್ಕುಗಳನ್ನ ಕಿತ್ತುಕೊಂಡಿದ್ದಾರೆ. ಇನ್ನು ಯಾವ ಹಕ್ಕನ್ನ ಪಡೆಯಲು ಮತದಾನ ಮಾಡಬೇಕು? ಪ್ರತಿಬಾರಿ ಚಕ್ಕೆರೆಯಲ್ಲಿ ಮತದಾನ ಮಾಡುತ್ತಿದೆ. ಆದರೆ ಈ ಬಾರಿ ನಾನು ಮತದಾನ ಮಾಡಲ್ಲ ಎಂದು ನಿಶಾ ಯೋಗೇಶ್ವರ್ ಹೇಳಿದ್ದಾರೆ.

• ಉದಯವಾಹಿನಿ, ಬೆಂಗಳೂರು

1. 85 ವರ್ಷದ ವೃದ್ಧೆ ಗೌರಮ್ಮ ಅವರು ಚಕ್ಕರೆಯ ಮತಗಟ್ಟೆ ಸಂಖ್ಯೆ 167ನಲ್ಲಿ ಮತದಾನ ಮಾಡಲು ವೀಲ್ ಚೇರ್‌ನಲ್ಲಿ ಆಗಮಿಸಿ, ಮತದಾನ
2. ಅಮೆರಿಕದಿಂದ ಆಗಮಿಸಿ ಮತದಾನ ಮಾಡಿದ ಅನುಷಾ
3. ಕಾರ್ಯಕರ್ತರ ಮನೆಯಲ್ಲಿ ಒಬ್ಬಟ್ಟು ಸವಿದ ನಿಖಿಲ್ ಕುಮಾರಸ್ವಾಮಿ
4. ಕುಮಾರಸ್ವಾಮಿ ವಿರುದ್ಧ ಸಿಪಿ ಯೋಗೇಶ್ವರ್ ವಾಗ್ದಾಳಿ

ಆಡಳಿತಾರೂಢ ಕಾಂಗ್ರೇಸ್ ಮತ್ತು ಪ್ರತಿಪಕ್ಷಗಳ ನಡುವೆ ಜಿದ್ದಾಜಿದ್ದಿಗೆ ಕಾರಣವಾಗಿರುವ ಕರ್ನಾಟಕದ ಚನ್ನಪಟ್ಟಣ, ಶಿಗ್ಗಾಂವಿ, ಸಂಡೂರು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಿತು. ಬೆಳಗ್ಗೆ 7 ಗಂಟೆಯಿಂದ ಮತದಾನ ಮತದಾನ ಪ್ರಕ್ರಿಯೆ ನಡೆಯಿತು. ಮತದಾರರು ಉತ್ಸಾಹದಿಂದ ಮತಗಟ್ಟೆಗಳತ್ತ ಆಗಮಿಸಿ ತಮ್ಮ ಹಕ್ಕು ಚಲಾಯಿಸಿದರು.

ಮುಕ್ತ, ನ್ಯಾಯಸಮ್ಮತ ಮತದಾನಕ್ಕೆ ಕೇಂದ್ರ ಚುನಾವಣಾ ಆಯೋಗ ಸಕಲ ಸಿದ್ಧತೆ ಮಾಡಿತ್ತು. ಇದೇ ಮೊದಲ ಸಲ ಮತ ಹಾಕುವ ಯುವಜನತೆ ಸೇರಿದಂತೆ ವಯೋವೃದ್ಧರೂ ಕೂಡಾ ಮತಗಟ್ಟೆಗೆ ಆಗಮಿಸಿ ಸರತಿ ಸಾಲಿನಲ್ಲಿ ನಿಂತು ಶಾಂತಿಯುತವಾಗಿ ವೋಟ್ ಮಾಡಿದರು.

ಸಂಡೂರು ವಿಧಾನಸಭಾ ಉಪ ಚುನಾವಣೆಯಲ್ಲಿ ಸಂಜೆ 5 ಗಂಟೆ ವೇಳೆಗೆ ಶೇ 71.47ರಷ್ಟು ಮತದಾನ ನಡೆದಿದೆ ಎಂದು ತಿಳಿದು ಬಂದಿದೆ. ಹುಲಗೂರ ನಗರದ ಬಾಲಕರ ಮಾದರಿ ಪ್ರಾಥಮಿಕ ಮಾದರಿ ಶಾಲೆಯ ಮತಗಟ್ಟೆ ಸಂಖ್ಯೆ 33ರಲ್ಲಿ ಶಿಗ್ಗಾಂವಿ ವಿಧಾನಸಭಾ ಕ್ಷೇತ್ರದ ಕಾಂಗ್ರೇಸ್ ಅಭ್ಯರ್ಥಿ ಯಾಸೀರ್ ಖಾನ್ ಪಠಾಣ್ ಮತ್ತು ಕೈ ಮುಖಂಡ ಅಜ್ಜಂಫೀರ್ ಖಾದ್ರಿ ತಮ್ಮ ಮತದಾನದ ಹಕ್ಕು ಚಲಾಯಿಸಿದರು. ಬಳಿಕ ತಮ್ಮ ವಿಜಯದ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದರು.

90 ವರ್ಷದ ಜಯಮ್ಮ ಮತ್ತು ಮುದ್ದಮ್ಮ ಹಾಗೂ 85 ವರ್ಷದ ಚಿಕ್ಕಮ್ಮ ಎಂಬ ವೃದ್ಧೆಯರು ತಮ್ಮ ಮತದಾನ ಹಕ್ಕು ಚಲಾಯಿಸಲು ಕೊಡಂಬಳ್ಳಿಯ ಮತಗಟ್ಟೆ ಸಂಖ್ಯೆ 236ಗೆ ಆಗಮಿಸಿದ್ದರು. ಇನ್ನು ವಾರ್ಡ್ ನಂಬರ್ ಮೂರಕ್ಕೆ ಭೇಟಿ ನೀಡಿದ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಕಾರ್ಯಕರ್ತರೊಂದಿಗೆ ಕೆಲವು ಹೊತ್ತು ಮಾತುಕತೆ ನಡೆಸಿದರು. ಭೇಟಿಯ ವೇಳೆ ಕಾರ್ಯಕರ್ತರ ಮನೆಯಲ್ಲಿ ಒಬ್ಬಟ್ಟು ಸೇವಿಸಿದರು. ಚಕ್ಕರೆ ಗ್ರಾಮದಲ್ಲಿ ಕುಟುಂಬ ಸಮೇತರಾಗಿ ಮತದಾನ ಮಾಡಿ ಮಾತನಾಡಿದ ಚನ್ನಪಟ್ಟಣ ಕಾಂಗ್ರೇಸ್ ಅಭ್ಯರ್ಥಿ ಸಿಪಿ ಯೋಗೇಶ್ವರ್, ಈ ಚುನಾವಣೆಯಲ್ಲಿ ಕ್ಷೇತ್ರದ ಜನರು ನನ್ನನ್ನ ಕೈಹಿಡಿಯುತ್ತಾರೆ ಎಂಬ ವಿಶ್ವಾಸ ಇದೆ. ಇಲ್ಲಿ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ನೀರಾವರಿ ಅಭಿವೃದ್ಧಿಯಾದಾಗ ಕ್ರೆಡಿಟ್‌ಗಾಗಿ ಬಹಳ ಜನರು ಬರುತ್ತಾರೆ. ಹೆಚ್‌ಡಿ ಕುಮಾರಸ್ವಾಮಿ ಅವರು ಮೊದಲು ಸಿಎಂ ಆಗಿದ್ದಾಗ ನೀರಾವರಿ ವಿಚಾರವೇ ಇರಲಿಲ್ಲ, ಆದರೆ, ಯೋಜನೆ ಯಶಸ್ವಿಯಾದ ಬಳಿಕ ಎಲ್ಲಾರೂ ಬರುತ್ತಾರೆ ಎಂದು ಮಾಜಿ ಪ್ರಧಾನಿ ದೇವೇಗೌಡರು ಮತ್ತು ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ವಿರುದ್ಧ ಹರಿಹಾಯ್ದರು.

ಕುಟುಂಬಸಮೇತರಾಗಿ ಮತಗಟ್ಟೆಗೆ ಬಂದು ವೋಟ್ ಮಾಡಿದ ಕಾಂಗ್ರೇಸ್ ಅಭ್ಯರ್ಥಿ

ಬಳ್ಳಾರಿಯ ಸಂಡೂರು ಕ್ಷೇತ್ರದ ಕಾಂಗ್ರೇಸ್ ಅಭ್ಯರ್ಥಿ ಅನ್ನಪೂರ್ಣ ತುಕಾರಾಂ ಅವರು ಕುಟುಂಬಸಮೇತರಾಗಿ ಸಂಡೂರು ಪಟ್ಟಣದ 67ನೇ ಮತಗಟ್ಟೆಯಲ್ಲಿ ಮತದಾನ ಮಾಡಿದರು. ಬಳಿಕ ಮಾತನಾಡಿದ ಅವರು, ನಾನು ಮೊದಲ ಬಾರಿ ಅಭ್ಯರ್ಥಿಯಾಗಿ ಮತದಾನ ಮಾಡಿದ್ದು ಖುಷಿ ನೀಡಿತು. ಎಲ್ಲೆಡೆ ಮತದಾನ ಚೆನ್ನಾಗಿ ನಡೆಯುತ್ತಿದೆ. ಮೊದಲ ಬಾರಿಗೆ ಚುನಾವಣೆ ಎದುರಿಸುತ್ತಿದ್ದೇನೆ. ಇದೊಂದು ಹೊಸ ಅನುಭವ. ಮುಕ್ತ ಮತ್ತು ಶಾಂತಿಯುತ ಮತದಾನಕ್ಕೆ ಅವಕಾಶ ಮಾಡಿಕೊಡಬೇಕು. ಹಾಗೆಯೇ ಎಲ್ಲಾರೂ ತಮ್ಮ ಮತ ಹಕ್ಕು ಚಲಾಯಿಸಬೇಕು. ಸಂವಿಧಾನದ ಆಶಯದಂತೆ ವೋಟ್ ಮಾಡಿ ಎಂದು ಮನವಿ ಮಾಡಿದರು. ಸಂಸದ ತುಕಾರಾಂ ಮಾತನಾಡಿ, ನಾವು ಕುಟುಂಬಸಮೇತರಾಗಿ ಮತದಾನ ಮಾಡಿದ್ದು ಖುಷಿಯಾಯಿತು. ಸಂವಿಧಾನದ ಆಶಯದಂತೆ ಎಲ್ಲಾರೂ ಮತದಾನ ಮಾಡಬೇಕು. ಇದು ನನ್ನ 6ನೇ ಚುನಾವಣೆ. ಸತತ ನಾಲ್ಕೂ ಬಾರಿ ಗೆದ್ದಿದ್ದೇನೆ. ಸಂವಿಧಾನ ವ್ಯವಸ್ಥೆಯಲ್ಲಿ ಯಾರೂ ಮತದಾನದಿಂದ ಹೊರಗುಳಿಯಬಾರದು ಎಂದು ಹೇಳಿದರು.

ಮತದಾನ ಮಾಡಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ, ರಾಜ್ಯ ಸರ್ಕಾರ ಕಳೆದ 15 ದಿನದಿಂದ ವಿಧಾನಸೌಧಕ್ಕೆ ಕೀಲಿ ಹಾಕಿ ಹಣದ ಚೀಲ ತೆಗೆದುಕೊಂಡು ಬಂದು ಇಲ್ಲಿ ಚುನಾವಣೆ ಮಾಡಿದ್ದಾರೆ. ಅವರಿಗೆ ಜನ ಪಾಠ ಕಲಿಸುತ್ತಾರೆ ಎಂದರು. ಕ್ಷೇತ್ರದಲ್ಲಿ ಆರಂಭದಿಂದಲೂ ನಮಗೆ ನೂರಕ್ಕೆ ನೂರರಷ್ಟು ಸಾಮಾನ್ಯ ಮತದಾರರು ಬಹಿರಂಗವಾಗಿಯೇ ಬೆಂಬಲ ವ್ಯಕ್ತಪಡಿಸಿದ್ದಾರೆ. ಭರತ್ ಬೊಮ್ಮಾಯಿ ದೊಡ್ಡ ಅಂತರದಿಂದ ಗೆಲ್ಲುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಳ್ಳಾರಿಯ ಸಂಡೂರಿನಲ್ಲಿ ಸಚಿವ ಸಂತೋಷ್ ಲಾಡ್, ಸಹೋದರಿ ಹಾಗೂ ತಾಯಿ ಶೈಲಜಾ ಮತಗಟ್ಟೆ 67ರಲ್ಲಿ ಮತದಾನ ಮಾಡಿದರು. ಕಾಂಗ್ರೇಸ್ ಅಭ್ಯರ್ಥಿ ಅನ್ನಪೂರ್ಣ ತುಕಾರಾಂ ಅವರು ಶೈಲಜಾ ಲಾಡ್ ಅವರ ಆಶೀರ್ವಾದ ಪಡೆದರು.

ಚನ್ನಪಟ್ಟಣ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಮತದಾನಕ್ಕೂ ಮುನ್ನ ಕ್ಷೇತ್ರದ ಪ್ರಸಿದ್ಧ ಶ್ರೀಕೆಂಗಲ್ ಆಂಜನೇಯ ಸ್ವಾಮಿಯ ಸನ್ನಿಧಿಗೆ ಭೇಟಿ ನೀಡಿ ಸ್ವಾಮಿಯ ದರ್ಶನ ಪಡೆದು ಪೂಜೆ ಸಲ್ಲಿಸಿದರು.

ಅಮೆರಿಕದಿಂದ ಆಗಮಿಸಿ ಮತದಾನ ಮಾಡಿದ ಅನುಷಾ

ಶಿಗ್ಗಾಂವಿಯಲ್ಲಿ ಮತದಾನ ಬಿರುಸುಗೊಂಡಿದ್ದು, ಗೃಹಿಣಿಯೊಬ್ಬಳು ಅಮೆರಿಕದಿಂದ ಆಗಮಿಸಿ ಮತ ಹಾಕಿದರು. ಅನುಷಾ ತನ್ನ ತಾಯಿ ಜೊತೆಗೆ ಆಗಮಿಸಿ ಮತದಾನ ಮಾಡಿದ ಗೃಹಿಣಿ. ಮಮ್ಮೇದೇಸಾಯಿ ಶಾಲೆಯಲ್ಲಿನ ಮತಗಟ್ಟೆಗೆ ಆಗಮಿಸಿ ಅವರು ತಮ್ಮ ಮತದಾನದ ಹಕ್ಕು ಚಲಾಯಿಸಿದ್ದಾರೆ. ಬಳಿಕ ಮಾತನಾಡಿ, ಮತದಾನ ನಮ್ಮ ಹಕ್ಕು, ಎಲ್ಲಾರೂ ಕಡ್ಡಾಯ ಮತದಾನ ಮಾಡಬೇಕು. ಈ ಮೂಲಕ ಒಳ್ಳೆಯ ಜನಪ್ರತಿನಿಧಿಯನ್ನು ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದರು.

ಚುನಾವಣಾ ಆಯೋಗಕ್ಕೆ ದೂರು

ಕರ್ನಾಟಕದ ಮೂರು ಕ್ಷೇತ್ರಗಳ ವಿಧಾನಸಭೆ ಉಪ ಚುನಾವಣೆ ಮತದಾನಕ್ಕೆ ಕ್ಷಣಗಣನೆ ಆರಂಭವಾಗಿರುವಂತೆಯೇ ಇತ್ತ ಶಿಗ್ಗಾವಿಯಲ್ಲಿ ಕಾಂಗ್ರೇಸ್ ಅಭ್ಯರ್ಥಿ ಯಾಸೀರ್ ಖಾನ್ ಪಠಾಣ್ ವಿರುದ್ಧ ಚುನಾವಣಾ ಆಯೋಗಕ್ಕೆ ಬಿಜೆಪಿ ದೂರು ದಾಖಲಿಸಿದೆ. ಶಿಗ್ಗಾವಿ ವಿಧಾನಸಭೆ ಉಪ ಚುನಾವಣೆಗೆ ಮತದಾನಕ್ಕೆ ಸಕಲ ಸಿದ್ಧತೆ ಪೂರ್ಣಗೊಂಡಿರುವಂತೆಯೇ ಕಾಂಗ್ರೇಸ್ ಗೆ ಬಿಜೆಪಿ ಶಾಕ್ ನೀಡಿದ್ದು, ಕೈ ಅಭ್ಯರ್ಥಿ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಕಾಂಗ್ರೇಸ್ ಅಭ್ಯರ್ಥಿ ಯಾಸೀರ್ ಖಾನ್ ಪಠಾಣ್ ರೌಡಿ ಶೀಟ್ ಪ್ರಕರಣ ಇದ್ದು, ಆದರೆ ಅವರು ನಾಮಪತ್ರದ ಅಫಡವಿಟ್ ನಲ್ಲಿ ತಮ್ಮ ವಿರುದ್ಧ ಯಾವುದೇ ಕೇಸ್ ಗಳಿಲ್ಲ ಎಂದು ಘೋಷಿಸಿಕೊಂಡಿದ್ದಾರೆ. ಹೀಗಾಗಿ ಈ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಬಿಜೆಪಿ ಚುನಾವಣಾ ಏಜೆಂಟ್ ಎಸ್ ಕೆ ಅಕ್ಕಿ ಅವರು ಇ-ಮೇಲ್ ಮೂಲಕ ಮುಖ್ಯ ಚುನಾವಣಾ ಆಯುಕ್ತರಿಗೆ ದೂರು ನೀಡಿದ್ದಾರೆ ಎಂದು ತಿಳಿದುಬಂದಿದೆ.

ಮುಡಾ ಕೇಸ್ ದೂರುದಾರ ಸ್ನೇಹಮಯಿ ಕೃಷ್ಣ ವಿರುದ್ಧ ಎಫ್‌ಐಆರ್ ದಾಖಲು

• ಉದಯವಾಹಿನಿ, ಮೈಸೂರು

ಮುಡಾ ಕೇಸ್ ದೂರುದಾರರಾದಂತ ಸ್ನೇಹಮಯಿ ಕೃಷ್ಣ ವಿರುದ್ಧ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ನೀಡಿದಂತ ದೂರಿನ ಹಿನ್ನಲೆಯಲ್ಲಿ ಎಫ್‌ಐಆರ್ ದಾಖಲಾಗಿದೆ.ಮೈಸೂರಿನ ದೇವರಾಜ ಪೊಲೀಸ್ ಠಾಣೆಗೆ ತೆರಳಿದ್ದಂತ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಅವರು, ಸ್ನೇಹಮಯಿ ಕೃಷ್ಣ ಅವರು ಸಿಎಂ ಸಿದ್ಧರಾಮಯ್ಯ ವಿರುದ್ಧ ಪ್ರತಿದಿನ ಒಂದಲ್ಲ ಒಂದು ಆರೋಪ ಮಾಡುತ್ತಿದ್ದಾರೆ.ಈ ಮೂಲಕ ಬ್ಲಾಕ್ ಮೇಲ್ ಮಾಡುತ್ತಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂಬುದಾಗಿ ದೂರು ನೀಡಿದ್ದರು. ಲಕ್ಷ್ಮಣ್ ನೀಡಿದಂತ ದೂರು ಆಧರಿಸಿ ಸ್ನೇಹಮಯಿ ಕೃಷ್ಣ ವಿರುದ್ಧ ಬ್ಲಾಕ್ ಮೇಲ್ ಆರೋಪದಲ್ಲಿ ದೇವರಾಜ ಠಾಣೆಯ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಈ ಮೂಲಕ ಮುಡಾ ಕೇಸ್ ದೂರುದಾರ ಸ್ನೇಹಮಯಿ ಕೃಷ್ಣಗೆ ಬಿಗ್ ಶಾಕ್ ನೀಡಿದ್ದಾರೆ.

2 ವರ್ಷದಲ್ಲಿ ಗೌರಿಬಿದನೂರು ತಾಲ್ಲೂಕಿಗೆ ಎತ್ತಿನಹೊಳೆ ನೀರು

• ಉದಯವಾಹಿನಿ, ಗೌರಿಬಿದನೂರು

ಇನ್ನು ಎರಡು ವರ್ಷದಲ್ಲಿ ಎತ್ತಿನಹೊಳೆ ನೀರನ್ನು ತಾಲ್ಲೂಕಿನ ಕೆರೆಗಳಿಗೆ ಹರಿಸಲಾಗುವುದು ಎಂದು ಶಾಸಕ ಕೆ.ಎಚ್ ಪುಟ್ಟಸ್ವಾಮಿ ಗೌಡ ತಿಳಿಸಿದರು. ಬುಧವಾರ ಮಿನಿ ವಿಧಾನಸೌಧದಲ್ಲಿ ಹಮ್ಮಿಕೊಂಡಿದ್ದ ಜನಸ್ಪಂದನ ಕಾರ್ಯಕ್ರಮದಲ್ಲಿ ಮಾತನಾಡಿದರು. ಎತ್ತಿನಹೊಳೆ ಕಾಮಗಾರಿ ವೇಗವಾಗಿ ಸಾಗುತ್ತಿದ್ದು, ಎರಡು ವರ್ಷದ ಒಳಗೆ ನೀರು ಹರಿಸಿ, ತಾಲ್ಲೂಕಿನ ಜನರ ನೀರಿನ ಬವಣೆಯನ್ನು ತೀರಿ ಸುವುದಾಗಿ ತಿಳಿಸಿದರು. 'ಪ್ರತಿ ತಿಂಗಳು ತಾಲ್ಲೂಕು ಆಡಳಿತಕಚೇರಿ ಯಲ್ಲಿ ಜನಸ್ಪಂದನ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಕಾನೂನು ತೊಡಕು ಇರುವ ಸಮಸ್ಯೆಗಳನ್ನು ಬಿಟ್ಟು ಉಳಿದ ಶೇ 80ರಷ್ಟು ಸಮಸ್ಯೆಗಳನ್ನು ಹಂತ ಹಂತವಾಗಿ ಪರಿಷ್ಕರಿಸಲಾಗಿದೆ. ಅಧಿಕಾರಿಗಳು ಯಾವುದೇ ಕೆಲಸವನ್ನು ವಿಳಂಬ ಮಾಡಿದ್ದಲ್ಲಿ ನೇರವಾಗಿ ಗಮನಕ್ಕೆ ತಂದರೆ ಬಗೆಹರಿಸಿಕೊಡಲಾಗುವುದು' ಎಂದರು ತಹಶೀಲ್ದಾರ್ ಮಹೇಶ್ ಪತ್ರಿ ಮಾತನಾಡಿ, 'ತಾಲ್ಲೂಕಿನಲ್ಲಿರುವ ಕೃಷ್ಣರಾಜಾಪುರ, ಹುಣಸೆನಹಳ್ಳಿ, ಕೋಡಿಹಳ್ಳಿ ಜೋಡಿ ಗ್ರಾಮಗಳ ಸಮಸ್ಯೆಯನ್ನು ಕಾನೂನು ಪ್ರಕಾರ ಇತ್ಯರ್ಥ ಮಾಡಲು ಪ್ರಯತ್ನ ಮಾಡಲಾಗುತ್ತಿದೆ. ಎಲ್ಲಾ ದಾಖಲೆಗಳು ರೈತರ ಹೆಸರಿನಲ್ಲಿ ಇದ್ದರೂ ಸಹ ಅಧಿಕಾರಿಗಳ ವರ್ಗಾವಣೆಯಿಂದ ಜೋಡಿ ಗ್ರಾಮದ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ವಿಳಂಬವಾಗುತ್ತಿದೆ. ಆದಷ್ಟು ಬೇಗ ಸಮಸ್ಯೆ ಬಗೆಹರಿಸಲಾಗುವುದು' ಎಂದರು. ಕಾರ್ಯನಿರ್ವಾಹಕ ಅಧಿಕಾರಿ ಜೆ.ಕೆ ಹೊನ್ನಯ್ಯ, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀನಿವಾಸ್ ಮೂರ್ತಿ, ತಾಲ್ಲೂಕು ಮಟ್ಟದ ಅಧಿಕಾರಿಗಳು ಪಾಲ್ಗೊಂಡಿದ್ದರು.

ಕೃಷಿ ಸಾಲದ ಸಬ್ಸಿಡಿಗೆ ಮಿತಿ ಬೇಡ: ಕೇಂದ್ರ ಸರ್ಕಾರಕ್ಕೆ ಶಾಸಕ ಜಿ.ಟಿ.ದೇವೇಗೌಡ ಮನವಿ

• ಉದಯವಾಹಿನಿ, ಬೆಂಗಳೂರು

ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್(ನಬಾರ್ಡ್) ನಿಂದ ರಾಜ್ಯಕ್ಕೆ ಸಬ್ಸಿಡಿ ದರದಲ್ಲಿ ನೀಡಲಾಗುತ್ತಿದ್ದ ಸಾಲದ ಮಿತಿಯನ್ನು ಏಕಾಏಕಿ ಕಡಿತಗೊಳಿಸಿರುವುದು ಸರಿಯಲ್ಲ. ಇದರಿಂದಾಗಿ ರೈತರಿಗೆ ತೊಂದರೆಯಾಗುತ್ತದೆ ಎಂದು ಶಾಸಕ ಜಿ.ಟಿ.ದೇವೇಗೌಡ ಅಸಮಾಧಾನ ವ್ಯಕ್ತಪಡಿಸಿದರು. 2023-24ರಲ್ಲಿ ನಬಾರ್ಡ್‌ನಿಂದ ವಿವಿಧ ಸಹಕಾರಿ ಬ್ಯಾಂಕ್‌ಗಳಿಗೆ ಸಬ್ಸಿಡಿ ಆಧಾರದಲ್ಲಿ 5,400 ಕೋಟಿ ರೂ. ಸಾಲ ನೀಡಲಾಗಿತ್ತು. ಪ್ರಸಕ್ತ ವರ್ಷದಲ್ಲಿ 2,300 ಕೋಟಿ ರೂ. ಮಾತ್ರ ನೀಡಲಾಗಿದೆ. ಒಟ್ಟಾರೆ ಸಾಲದ ಮಿತಿಯಲ್ಲಿ ಏಕಾಏಕಿ ಶೇ.58ಕಡಿತ ಗೊಳಿಸಲಾಗಿದೆ. ಇದರಿಂದಾಗಿ ರೈತರ ಜೀವನಾಡಿಯಾದ ಸಹಕಾರಿ ಬ್ಯಾಂಕ್‌ಗಳು ಉಳಿಯಬೇಕೆಂದರೆ ನಬಾರ್ಡ್ ಪಾತ್ರ ಪ್ರಮುಖವಾದದ್ದು. ಈ ಸಮಸ್ಯೆಯನ್ನು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಹಕಾರ ಸಚಿವ ಅಮಿತ್ ಷಾ ಬಗೆಹರಿಸಬೇಕು. ಜತೆಗೆ, ರಾಜ್ಯದ ಸಂಸದರು ಧ್ವನಿಎತ್ತಬೇಕು ಎಂದು ಒತ್ತಾಯಿಸಿದರು.

ಜೆಡಿಎಸ್ ಬಿಡುಗಡೆ ಮಾಡಿದ್ದ 40 ಹೆಸರು ಒಳಗೊಂಡ ತಾರಾ ಪ್ರಚಾರಕ ಪಟ್ಟಿಯಲ್ಲಿ ನನ್ನ ಹೆಸರು ಇಲ್ಲದಿದ್ದಕ್ಕೆ ಚನ್ನಪಟ್ಟಣ ಉಪಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ಪರ ಪ್ರಚಾರಕ್ಕೆ ಹೋಗಲಿಲ್ಲ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಜಿ.ಟಿ.ದೇವೇಗೌಡ ಸ್ಪಷ್ಟಪಡಿಸಿದರು. ನನ್ನ ಅನುಪಸ್ಥಿತಿಯಲ್ಲಿ ಕೋರ್ ಕಮಿಟಿ ಸಭೆ ಮಾಡಿದ್ದರು. ಅಧ್ಯಕ್ಷನಾದ ಮೇಲೆ ರಾಜ್ಯ ಸುತ್ತಲಿಲ್ಲವೇ? ತಾರಾ ಪ್ರಚಾರಕರ ಪಟ್ಟಿ ಹೆಸರಿದ್ದರೆ ಮಾತ್ರ ಪ್ರಚಾರಕ್ಕೆ ಹೋಗಬೇಕಲ್ಲವೇ ಎಂದು ಪ್ರಶ್ನಿಸಿದರು. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಹಗರಣ ಕುರಿತು ಸಿಎಂ ಸಿದ್ದರಾಮಯ್ಯ ಅವರನ್ನು ರಾಜೀನಾಮೆಗೆ ಬಿಜೆಪಿ ಆಗ್ರಹಿಸುತ್ತಿದ್ದರೆ, ಇತ್ತ ಕಾಂಗ್ರೇಸ್‌ನವರು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ರಾಜೀನಾಮೆ ನೀಡುವಂತೆ ಒತ್ತಾಯಿಸುತ್ತಿದ್ದರು. ಎಲ್ಲಾ ರಾಜಕೀಯ ನಾಯಕರ ಮೇಲೆ ಎಫ್‌ಐಆರ್ ದಾಖಲಾಗಿದೆ. ಪ್ರತಿನಿತ್ಯ ರಾಜೀನಾಮೆ ನೀಡುವ ವಿಚಾರಗಳನ್ನು ನೋಡಿ ಬೇಸರವಾಗಿತ್ತು. ಹಾಗಾಗಿ, ಮೈಸೂರಿನಲ್ಲಿ ದಸರಾ ಕಾರ್ಯಕ್ರಮದಲ್ಲಿ ಎಫ್ ಐಆರ್ ದಾಖಲಾದರೆ ಎಲ್ಲಾರೂ ರಾಜೀನಾಮೆ ನೀಡಬೇಕಲ್ಲವೇ ಎಂಬುದಷ್ಟೇ ನಾನು ಹೇಳಿದ್ದು.

ಮತದಾರರ ಹೃದಯದಲ್ಲಿ ಅವಕಾಶ ಸಿಗುವ ವಿಶ್ವಾಸವಿದೆ

• ಉದಯವಾಹಿನಿ, ಚನ್ನಪಟ್ಟಣ

ಪ್ರಾರಂಭಿಕ ಹಂತದಲ್ಲಿ ನನಗೆ ಉಪ ಚುನಾವಣೆ ಅಭ್ಯರ್ಥಿಯಾಗುವ ಬಗ್ಗೆ ಭಾವನೆಗಳು ಇರಲಿಲ್ಲ. ಆದರೆ, ಕೆಲ ರಾಜಕೀಯ ಬೆಳವಣಿಗೆಗಳ ಹಿನ್ನ

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

ಭಿನ್ನಾಭಿನ್ನಾದಿರೂಪದೆ ಪೇಳಲರಿದು

ನಿಜಗುಣರ ಪರಮಾನುಭವ ಬೋಧೆಯ ಮಾತು. ಪರಬ್ರಹ್ಮದಲ್ಲಿ ತೋರುವ ಕಲ್ಪಿತ ಪುರುಷನನ್ನು ಬ್ರಹ್ಮಕ್ಕಿಂತ ಭಿನ್ನ ಎಂದೂ, ಅಭಿನ್ನ ಎಂದೂ ಹೇಳಲಾಗದು. ಹೇಗೆಂದರೆ ಬ್ರಹ್ಮವು ಪರ, ಅಪರ ಎಂದು ಎರಡು ವಿಧ. ಯಾವುದೇ ಉಪಾಧಿ ಆವರಣ ಲೇಪ ವಿವರ್ತವಿಲ್ಲದ ಕೇವಲ ಶುದ್ಧ ಬ್ರಹ್ಮ ಪರಬ್ರಹ್ಮ. ಸಮ್ಮಿಶ್ರವಿಲ್ಲದ ಶುದ್ಧ ಚಿನ್ನದ ಗಟ್ಟಿಯಂತೆ. ಉಪಾಧಿ ಆವರಣ ಲೇಪ ವಿವರ್ತ ಸಹಿತ ಬ್ರಹ್ಮ ಅಪರಬ್ರಹ್ಮ. ಲೋಹಮಿಶ್ರಿತ ಚಿನ್ನಾಭರಣದಂತೆ. ಪರಬ್ರಹ್ಮ ಸತ್ಯ, ಆದರದು ತೋರದು. ಅಪರಬ್ರಹ್ಮ ವಾಸ್ತವಸತ್ಯವಲ್ಲ, ಆದರೂ ನಿಜಸತ್ಯದಂತೆ ಕಂಗೊಳಿಸುವುದು! ತೋರುವ ಜಗತ್ತೇ ಅಪರಬ್ರಹ್ಮ = ಕಲ್ಪಿತ ಪುರುಷ. ಇದನ್ನು ಸುಳ್ಳು ಎಂದು ಹೇಳೋಣವೆಂದರೆ ತೋರುವುದನ್ನು ಅಲ್ಲಗಳೆಯಲಾಗದು. ಸತ್ಯ ಎನ್ನೋಣವೆಂದರೆ ಪ್ರತಿ ನಿತ್ಯ ಪ್ರತಿ ಕ್ಷಣ ಬದಲಾಗುವುದು. ಇದೇ ಪರಮಾಶ್ಚರ್ಯ. ಆದ್ದರಿಂದ ಇದು ಅನಿರ್ವಚನೀಯ. ಪರಬ್ರಹ್ಮದಲ್ಲಿನ ಚೈತನ್ಯಶಕ್ತಿ, ಲೀಲೆ ಲಿಂಗತನು ಲಿಂಗಾಕೃತಿ ನಾದ ಎಲ್ಲವೂ ಈ ಕಲ್ಪಿತ ಪುರುಷನೇ. ಬಹುಜನ ಕುರುಡರು ಒಂದು ಆನೆಯ ಬೇರೆ ಬೇರೆ ಭಾಗ ಮುಟ್ಟಿ, ಆನೆ ಎಂದರೆ ಮೊರ, ಕಂಭ, ನಗಾರಿ, ಒನಕೆ ಎಂಬಿತ್ಯಾದಿಯಾಗಿ ತಿಳಿದರೂ ಇವೆಲ್ಲ ಒಳಗೊಂಡ ಆನೆ ಒಂದೇ ಆಗಿರುವಂತೆ ಏನೇ ಹೇಳಿದರೂ ಏನೇ ತಿಳಿದರೂ ಇರುವ ಕಲ್ಪಿತ ಪುರುಷ ಒಬ್ಬನೇ.

ದಾಸವಾಣಿ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು

ಪವಮಾನಪುರದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ವಿಚಾರಣಾಕರ್ತರಾದ ಶ್ರೀ ಗಿರಿರಾಜಾಚಾರ್ಯರ ನೇತೃತ್ವದಲ್ಲಿ ನವೆಂಬರ್ 14, ಗುರುವಾರ ಸಂಜೆ 7-00ಕ್ಕೆ ಕು|| ವಾಣಿ ಶ್ರೀ ರಾಮಕೃಷ್ಣ ಇವರಿಂದ ದಾಸವಾಣಿ ಕಾರ್ಯಕ್ರಮ ಏರ್ಪಡಿಸಿದ್ದು, ಇವರ ಗಾಯನಕ್ಕೆ ಪಿಟೀಲು ವಾದನದಲ್ಲಿ ಶ್ರೀ ಅಭಯ್ ಸಂಪಿಗೆತಯ ಮತ್ತು ಮೃದಂಗ ವಾದನದಲ್ಲಿ ಶ್ರೀ ಆರ್. ಸುಧನ್ವಸಾಥ್ ನೀಡಲಿದ್ದಾರೆ ಎಂದು ಶ್ರೀ ಗೊಗ್ಗಿ ಕೃಷ್ಣಾಚಾರ್ ತಿಳಿಸಿದ್ದಾರೆ. ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಒಂದನೇ ಮುಖ್ಯರಸ್ತೆ, ಪವಮಾನಪುರ, ಬೆಂಗಳೂರು-560062

ಮಾಜಿ ಸಿಎಂ ಎಸ್.ನಿಜಲಿಂಗಪ್ಪ ಮನೆ ಖರೀದಿಸಲು ರಾಜ್ಯ ಸರ್ಕಾರ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ಮಾಜಿ ಸಿಎಂ ದಿವಂಗತ ಎಸ್.ನಿಜಲಿಂಗಪ್ಪ ಅವರ ಮನೆ ಮಾರಾಟಕ್ಕಿಟ್ಟಿರುವಂತ ಸುದ್ದಿ ವೈರಲ್ ಆಗಿತ್ತು. ಈಗ ಆ ಮನೆಯನ್ನು ರಾಜ್ಯ ಸರ್ಕಾರವೇ ಖರೀದಿಸಲು ನಿರ್ಧರಿಸಿದೆ. ರಾಜ್ಯ ಸರ್ಕಾರದಿಂದ ಇದಕ್ಕಾಗಿ 2020-21ನೇ ಸಾಲಿನ ಬಜೆಟ್ ನಲ್ಲಿ ಮಾಜಿ ಸಿಎಂ ಎಸ್ ನಿಜಲಿಂಗಪ್ಪ ಅವರ ಮನೆಯನ್ನು ಖರೀದಿಸಲು 5 ಕೋಟಿ ಅನುದಾನ ಘೋಷಿಸಿತ್ತು. ಆದರಂತೆ 5 ಕೋಟಿ ರೂಪಾಯಿಯನ್ನು ನೀಡಿ ಎಸ್.ನಿಜಲಿಂಗಪ್ಪ ಅವರ ಮನೆಯನ್ನು ಖರೀದಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಅಂದಹಾಗೇ ಚಿತ್ರದುರ್ಗದಲ್ಲಿರುವಂತ ಮಾಜಿ ಸಿಎಂ ದಿವಂಗತ ಎಸ್.ನಿಜಲಿಂಗಪ್ಪ ಅವರ ನಿವಾಸವನ್ನು ಮಾರಾಟಕ್ಕೆ ಇಟ್ಟಂತ ವಿಚಾರ ವೈರಲ್ ಆಗಿತ್ತು. ಅಲ್ಲದೇ ಸ್ಮಾರಕವಾಗಿ ಮಾಡಬೇಕಿದ್ದಂತ ರಾಜ್ಯ ಸರ್ಕಾರದ ನಿರ್ಲಕ್ಷ್ಯವನ್ನು ಸಾರ್ವಜನಿಕರು ಆಕ್ರೋಶದ ಮೂಲಕ ಹೊರ ಹಾಕಿದ್ರು. ಈ ಬೆನ್ನಲ್ಲೇ 5 ಕೋಟಿಯಲ್ಲಿ ಎಸ್.ನಿಜಲಿಂಗಪ್ಪ ಮನೆಯನ್ನು ಖರೀದಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಬೈಕ್ ಸ್ಕಿಡ್ ಆಗಿ ಬಿದ್ದ ಯುವಕನ ಮೇಲೆ ಹರಿದ ಕಾರು : ಕೊಲೆ ಯತ್ನದ ಶಂಕೆ!

• ಉದಯವಾಹಿನಿ, ಬೆಂಗಳೂರು

ನಿನ್ನೆ ತಡರಾತ್ರಿ ಬೆಂಗಳೂರಿನಲ್ಲಿ ಭೀಕರ ರಸ್ತೆ ಅಪಘಾತ ಒಂದು ನಡೆದಿದ್ದು ಬೈಕ್ ಸ್ಕಿಡ್ ಆಗಿ ಬಿದ್ದಂತಹ ಯುವಕನ ಮೇಲೆ ಕಾರೊಂದು ಬಂದು ಯುವಕನ ಮೇಲೆ ಹರಿದಿದೆ. ಕೂಡಲೇ ಸ್ಥಳದಲ್ಲೇ ಯುವಕ ಸಾವನ್ನಪ್ಪಿರುವ ಘಟನೆ ಬೆಂಗಳೂರಿನ ತಿಗಳರಪಾಳ್ಯದ ಮುಖ್ಯರಸ್ತೆಯಲ್ಲಿ ಈ ಅಪಘಾತ ನಡೆದಿದೆ. ಹೌದು ಬೈಕ್ ಸ್ಕಿಡ್ ಆಗಿ ಬಿದ್ದ ಯುವಕನ ಮೇಲೆ ಕಾರು ಹರಿದಪರಿಣಾಮ ಶಶಿಕುಮಾರ್ (20) ಎನ್ನುವ ಯುವಕ ಸ್ಥಳದಲ್ಲಿ ಸಾವನಪ್ಪಿದ್ದಾನೆ. ತಿಗಳರಪಾಳ್ಯದಲ್ಲಿ ಈ ಒಂದು ಘಟನೆ ನಡೆದಿದೆ. ರಾತ್ರಿ ಕೆಲಸ ಮುಗಿಸಿ ಮನೆಗೆ ಹೊರಟಿದ್ದ ಶಶಿಕುಮಾರ್, ಈ ವೇಳೆ ಬೈಕ್ ಸ್ಕಿಡ್ ಆಗಿದೆ. ಕೂಡಲೇ ಕಾರೊಂದು ಆತನ ಮೇಲೆ ಹರಿದಿದೆ. ಇದು ಪೂರ್ವ ನಿಯೋಜಿತ ಕೊಲೆ ಆಗಿರಬಹುದೆ ಎಂಬ ಅನುಮಾನ ಮೂಡುತ್ತಿದೆ.

ಎಲ್ಲಾ ರೈಲ್ವೆ ನಿಲ್ದಾಣಗಳಲ್ಲಿ ಡಿಜಿಟಲ್ ಲಗೇಜ್ ಲಾಕರ್ ಸೌಲಭ್ಯ

• ಉದಯವಾಹಿನಿ, ಬೆಂಗಳೂರು

ಬಸ್, ರೈಲ್ವೆ ನಿಲ್ದಾಣಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಲಗೇಜ್ ರೂಂಗಳ ವ್ಯವಸ್ಥೆ ಇದೆ. ಆದರೇ ಬೆಂಗಳೂರಿನ ನಮ್ಮ ಮೆಟ್ರೋ ನಿಲ್ದಾಣದಲ್ಲಿ ಇರಲಿಲ್ಲ. ಈಗ ನಮ್ಮ ಮೆಟ್ರೋ ರೈಲು ನಿಲ್ದಾಣದಲ್ಲೂ ಡಿಜಿಟಲ್ ಲಗೇಜ್ ಲಾಕರ್ ಸೌಲಭ್ಯವನ್ನು ಆರಂಭಿಸಲಾಗುತ್ತಿದೆ. ಈ ಬಗ್ಗೆ ಬಿಎಂಆರ್ ಸಿಎಲ್ ಮಾಹಿತಿ ಹಂಚಿಕೊಂಡಿದ್ದು, ನಮ್ಮ ಮೆಟ್ರೋ ಪ್ರಯಾಣಿಕರಿಗೆ ಸಿಹಿಸುದ್ದಿ! SafeCloakನ ಸ್ಮಾರ್ಟ್ ಡಿಜಿಟಲ್ ಲಗೇಜ್ ಲಾಕರ್ ಸೌಲಭ್ಯವು ಈಗ ಮೆಜೆಸ್ಟಿಕ್ ಮತ್ತು ಇತರ ಆಯ್ದ ನಿಲ್ದಾಣಗಳಲ್ಲಿ ಲಭ್ಯ. ನಿಮ್ಮ ಬ್ಯಾಗ್‌ಗಳನ್ನು 6 ಗಂಟೆಗಳಿಗೆ (ಮಧ್ಯಮ ಗಾತ್ರ) ಕೇವಲ ರೂ.70 ಮತ್ತು ದೊಡ್ಡ ಗಾತ್ರದ ಲಗೇಜ್‌ಗೆ ರೂ. 100 ನಿಗದಪಡಿಸಲಾಗಿದೆ ಎಂದಿದೆ. ಸೋ ಇನ್ಮುಂದೆ ನಮ್ಮ ಮೆಟ್ರೋ ರೈಲಿನಲ್ಲಿ ಪ್ರಯಾಣಿಸುವಂತ ಪ್ರಯಾಣಿಕರು ತಮ್ಮ ಲಗೇಜ್ ಗಳನ್ನು ಸೇಫ್ ಕ್ಲಾಕ್ ಸ್ಮಾರ್ಟ್ ಡಿಜಿಟಲ್ ಲಗೇಜ್ ಲಾಕರ್ ನಲ್ಲಿ ಇರಿಸಿ ತೆರಳಬಹುದು. ಆದರೇ ಇದಕ್ಕೆ ಹಣವನ್ನು ಪಾವತಿಸಬೇಕಾಗುತ್ತದೆ.

ನ.30 ರೊಳಗೆ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸದಿದ್ದರೆ ದಂಡ ಫಿಕ್ಸ್!

• ಉದಯವಾಹಿನಿ, ಬೆಂಗಳೂರು

ಸರ್ಕಾರದಿಂದ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆಗೆ ಗಡುವು ಮತ್ತೆ ವಿಸ್ತರಿಸಿ ಆದೇಶಿಸಿದೆ. ಈ ಮೂಲಕ ವಾಹನ ಮಾಲೀಕರಿಗೆ ಬಿಗ್ ರಿಲೀಫ್ ಅನ್ನು ನೀಡಿದೆ. ರಾಜ್ಯ ಸರ್ಕಾರದಿಂದ ಆದೇಶ ಹೊರಡಿಸಲಾಗಿದ್ದು, ಹೈ ಸೆಕ್ಯೂರಿಟಿ ರಿಜಿಸ್ಟ್ರೇಷನ್ ಪ್ಲೇಟ್‌ಯನ್ನು ವಾಹನಗಳಿಗೆ ಅಳವಡಿಸಿಕೊಳ್ಳಲು ದಿನಾಂಕ 17-08-2024ರವರೆಗೆ ಅವಕಾಶ ನೀಡಲಾಗಿತ್ತು. ಇಂತಹ ಅವಧಿಯನ್ನು ದಿನಾಂಕ 30-11-2024ರವರೆಗೆ ವಿಸ್ತರಿಸಿ ಆದೇಶಿಸಿರುವುದಾಗಿ ತಿಳಿಸಿದೆ. ಈ ಆದೇಶವು ದಿನಾಂಕ 17-08-2023ರಂದು ಹೊರಡಿಸಿದಂತ ಅಧಿಸೂಚನೆಯ ನಿಯಮಗಳಿಗೆ ಒಳಪಟ್ಟಿರುವುದಾಗಿ ಸಾರಿಗೆ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಅಧಿಸೂಚನೆಯಲ್ಲಿ ತಿಳಿಸಿದ್ದಾರೆ. ಸಾರ್ವಜನಿಕರು ಆನ್ ಲೈನ್ ಮೂಲಕ ಹೆಚ್.ಎಸ್.ಆರ್.ಪಿ ಪಡೆಯಲು ತೊಂದರೆಗಳಾದಲ್ಲಿ ಸಹಾಯವಾಣಿ ಸಂಖ್ಯೆ 94498 63429 / 94498 63426ಯನ್ನು ಕಚೇರಿ ಕೆಲಸದ ಸಮಯ ಬೆಳಿಗ್ಗೆ 10 ರಿಂದ ಸಂಜೆ 5.30ರೊಳಗೆ ಸಂಪರ್ಕಿಸಬಹುದು. ಸಾರ್ವಜನಿಕರು https://transport.karnataka.gov.in ಅಥವಾ www.siam.inಗೆ ಭೇಟಿ ನೀಡಬಹುದು ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಧಾರ್ ಮಾದರಿಯಲ್ಲಿ ಅಪಾರ್ ಕಾರ್ಡ್ ವಿತರಣೆ!

ಕೇಂದ್ರ ಶಾಲಾ ಶಿಕ್ಷಣ ಸಚಿವಾಲಯದ ರಾಷ್ಟ್ರೀಯ ಶಿಕ್ಷಣ ನೀತಿ 2020 (ಎನ್‌ಇಪಿ) ಯೋಜನೆ

• ಉದಯವಾಹಿನಿ, ಬೆಂಗಳೂರು

ರಾಜ್ಯದ ವಿದ್ಯಾರ್ಥಿಗಳಿಗೆ ಸಿಹಿಸುದ್ದಿಯೊಂದು ಸಿಕ್ಕಿದ್ದು, ರಾಜ್ಯದ ಎಲ್ಲಾ ಪ್ರಾಥಮಿಕ, ಪ್ರೌಢ ಮತ್ತು ಹೈಯರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ 'ಆಧಾರ್' ಸಂಖ್ಯೆಯ ಮಾದರಿಯಲ್ಲಿ 12 ಅಂಕಿಯ 'ಅಪಾರ್' ವಿಶಿಷ್ಟ ಗುರುತಿನ ಚೀಟಿ ವಿತರಿಸಲು ಸಿದ್ಧತೆ ನಡೆಸಲಾಗಿದೆ. ಕೇಂದ್ರ ಶಾಲಾ ಶಿಕ್ಷಣ ಸಚಿವಾಲಯದ ರಾಷ್ಟ್ರೀಯ ಶಿಕ್ಷಣ ನೀತಿ 2020 (ಎನ್‌ಇಪಿ) ಯೋಜನೆ ಅಡಿ ವಿದ್ಯಾರ್ಥಿಗಳಿಗೆ ದೇಶದಾದ್ಯಂತ ಏಕರೂಪದ ಗುರುತಿನ ಚೀಟಿ ನೀಡಲು ಒಂದು ದೇಶ, ಏಕರೂಪದ ವಿದ್ಯಾರ್ಥಿ ಗುರುತಿನ ಚೀಟಿ' ಶಿಫಾರಸು ಮಾಡಲಾಗಿದ್ದು, ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೂ 'ಅಪಾರ್' ವಿಶಿಷ್ಟ ಗುರುತಿನ ಚೀಟಿ ನೀಡಲಾಗುತ್ತದೆ. ಅಪಾರ್ ಗುರುತಿನ ಚೀಟಿಗೆ ವಿದ್ಯಾರ್ಥಿಗಳ ಹೆಸರು ನೋಂದಣಿಗೂ ಮುಂಚೆ ಪೋಷಕರ ಒಪ್ಪಿಗೆ ಕಡ್ಡಾಯ.

ವಿದ್ಯಾರ್ಥಿಗಳ ನೋಂದಣಿಗೂ ಪೋಷಕರ ಒಪ್ಪಿಗೆ ಕಡ್ಡಾಯ

ಪೋಷಕರ ಆಧಾರ್, ಚುನಾವಣಾ ಆಯೋಗ ನೀಡಿದ ವೋಟರ್ಸ್ ಐ.ಡಿ, ಚಾಲನಾ ಪರವಾನಗಿ ನಂಬರ್ (ಡ್ರೈವಿಂಗ್ ಲೈಸನ್ಸ್) ಲಿಂಕ್ ಮಾಡಿ ವಿದ್ಯಾರ್ಥಿಗಳ ಐ.ಡಿ ಸೃಷ್ಟಿಸಲಾಗುತ್ತದೆ. ವಿದ್ಯಾರ್ಥಿಗಳ ಹೆಸರು ನೋಂದಾಯಿಸಲು ಶಿಕ್ಷಣ ಇಲಾಖೆ ಆದೇಶ ಹೊರಡಿಸಿದ್ದು, ಮುಖ್ಯ ಶಿಕ್ಷಕರು ಪೋಷಕರ ಸಭೆ ಕರೆದು ಅವರ ಒಪ್ಪಿಗೆ ಪಡೆಯುವಂತೆ ಸೂಚಿಸಿದೆ.

ಈಗಾಗಲೇ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಪೋಷಕರ ಒಪ್ಪಿಗೆ ಪಡೆಯುವ ಪ್ರಕ್ರಿಯೆ ಆರಂಭಗೊಂಡಿದೆ. ಶಿಕ್ಷಣ ಸಚಿವಾಲಯ ಮತ್ತು ಭಾರತ ಸರ್ಕಾರವು APAAR ID ಕಾರ್ಡ್ ಅನ್ನು ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಪ್ರಕಾರ ಭಾರತದಾದ್ಯಂತ ಶಾಲಾ ವಿದ್ಯಾರ್ಥಿಗಳಿಗೆ ಅನನ್ಯ ID ಸಂಖ್ಯೆಗಳನ್ನು ರಚಿಸಲು ಪ್ರಾರಂಭಿಸಿದೆ. 'ಒನ್ ನೇಷನ್ ಒನ್ ಸ್ಟೂಡೆಂಟ್ ಐಡಿ ಕಾರ್ಡ್' ಎಂದೂ ಕರೆಯಲ್ಪಡುವ ಂಕಂಂಖ ಐಡಿಯು ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಿದೆ, ಏಕೆಂದರೆ ಅವರ ಸಂಪೂರ್ಣ ಶೈಕ್ಷಣಿಕ ಡೇಟಾವನ್ನು ಪ್ರತಿಫಲಗಳು, ಪದವಿಗಳು, ವಿದ್ಯಾರ್ಥಿವೇತನಗಳು, ಇತರ ಕ್ರೆಡಿಟ್‌ಗಳನ್ನು ಡಿಜಿಟಲ್ ಆಗಿ ವರ್ಗಾಯಿಸಲಾಗುತ್ತದೆ. ಕಾರ್ಡ್ ನೋಂದಣಿ ಮಾಡಿದ ನಂತರ ವಿದ್ಯಾರ್ಥಿಗಳು ಕಾರ್ಡ್ ಅನ್ನು ಡೌನ್‌ಲೋಡ್ ಮಾಡಬಹುದು. ಕಾರ್ಡ್ ವಿಶಿಷ್ಟವಾದ 12-ಅಂಕಿಯ APAAR ಸಂಖ್ಯೆಯನ್ನು ಒಳಗೊಂಡಿರುತ್ತದೆ, ಒಂದು ಅನನ್ಯ ಗುರುತಿನ ಸಂಖ್ಯೆ, ಇದನ್ನು ಬಳಸಿಕೊಂಡು ವಿದ್ಯಾರ್ಥಿಗಳು ಎಲ್ಲಾ ಪ್ರಯೋಜನಗಳನ್ನು ಪಡೆಯಬಹುದು ಮತ್ತು ಶೈಕ್ಷಣಿಕ ದಾಖಲೆಗಳನ್ನು ಅನುಕೂಲಕರವಾಗಿ ಸಂಗ್ರಹಿಸಬಹುದು. ಒನ್ ನೇಷನ್ ಒನ್ ಸ್ಟೂಡೆಂಟ್ ಐಡಿ ಕಾರ್ಡ್ ಅನ್ನು ಮಕ್ಕಳ ಆಧಾರ್ ಕಾರ್ಡ್ ಸಂಖ್ಯೆಗೆ ಕೂಡ ಲಿಂಕ್ ಮಾಡಲಾಗುತ್ತದೆ. ವಿದ್ಯಾರ್ಥಿಗಳಿಗೆ ಸಂಘಟಿತ ಮತ್ತು ಪ್ರವೇಶಿಸಬಹುದಾದ ಶೈಕ್ಷಣಿಕ ಅನುಭವದ ಕಡೆಗೆ ಮಹತ್ವದ ಹೆಜ್ಜೆಯಾಗಿದೆ.

APAAR ID ಕಾರ್ಡ್ ಜೀವಮಾನದ ID ಸಂಖ್ಯೆಯಾಗಿದ್ದು ಅದು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಯಾಣ ಮತ್ತು ಸಾಧನೆಗಳನ್ನು ಟ್ರ್ಯಾಕ್ ಮಾಡುತ್ತದೆ ಮತ್ತು ಒಂದು ಶಾಲೆಯಿಂದ ಇನ್ನೊಂದಕ್ಕೆ ವರ್ಗಾವಣೆಯನ್ನು ಸುಲಭಗೊಳಿಸುತ್ತದೆ. ಶಾಲಾ-ಕಾಲೇಜುಗಳು ಪೂರ್ವ ಪ್ರಾಥಮಿಕದಿಂದ ಉನ್ನತ ಶಿಕ್ಷಣದವರೆಗೆ ದಾಖಲಾದ ಪ್ರತಿಯೊಬ್ಬ ವಿದ್ಯಾರ್ಥಿಗೆ ಈ ಕಾರ್ಡ್ ಅನ್ನು ನೀಡುತ್ತವೆ. APAAR ಕಾರ್ಡ್ ಈಗಾಗಲೇ ಅಸ್ತಿತ್ವದಲ್ಲಿರುವ ವಿದ್ಯಾರ್ಥಿಗಳ ಆಧಾರ್ ಐಡಿಗೆ ಹೆಚ್ಚುವರಿಯಾಗಿರುತ್ತದೆ.

ಪದವಿಗಳು, ಇತರ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಸಂಗ್ರಹ

APAAR ID ಕಾರ್ಡ್ ಅನ್ನು ಶಿಕ್ಷಣ ಸಚಿವಾಲಯವು ಪ್ರಾರಂಭಿಸಿದೆ, ಇದು ಭಾರತದಾದ್ಯಂತ ಖಾಸಗಿ ಮತ್ತು ಸರ್ಕಾರಿ ಶಾಲೆಗಳು ಅಥವಾ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಡಿಜಿಟಲ್ ಐಡಿ ಕಾರ್ಡ್ ಆಗಿದೆ. APAAR ID ಕಾರ್ಡ್ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಸಾಲಗಳು, ಪದವಿಗಳು ಮತ್ತು ಇತರ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಸಂಗ್ರಹಿಸಲು ಸಕ್ರಿಯಗೊಳಿಸುವ ಗುರಿಯನ್ನು ಹೊಂದಿದೆ.

ಖರೀದಿ ಆದೇಶವಿಲ್ಲದೆ ಸರಬರಾಜು ಮಾಡುವ ಹಕ್ಕು ಇಲ್ಲ: ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ಅಧಿಸೂಚನೆ ಹೊರಡಿಸುವುದರಿಂದ ಸರಬರಾಜು ಆದೇಶವಿಲ್ಲದೆ ಯಂತ್ರಗಳನ್ನು ಪೂರೈಸುವ ಹಕ್ಕನ್ನು ಸೃಷ್ಟಿಸಲಾಗುವುದಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಇತ್ತೀಚಿನ ತೀರ್ಪಿನಲ್ಲಿ ಅಭಿಪ್ರಾಯಪಟ್ಟಿದೆ. ಕೋವಿಡ್ -19 ರೋಗಿಗಳಿಗೆ ಚಿಕಿತ್ಸೆ ನೀಡುವ ವೆಂಟಿಲೇಟರ್‌ಗಳನ್ನು ಬೆಂಬಲಿಸಲು ಪೋರ್ಟಬಲ್ ಎಕ್ಸ್-ರೇ ಯಂತ್ರಗಳ 2021 ರ ಟೆಂಡರ್‌ಗೆ ಸಂಬಂಧಿಸಿದಂತೆ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ಸಲ್ಲಿಸಿದ್ದ ಮೇಲ್ಮನವಿಗೆ ಅನುಮತಿ ನೀಡುವಾಗ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅವರನ್ನೊಳಗೊಂಡ ವಿಭಾಗೀಯ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ಅಕ್ಟೋಬರ್ 27, 2021 ರಂದು, ನಿಗಮವು ಮರು ಟೆಂಡರ್ ಹೊರಡಿಸಿ, 100 ಎಂಎ ಪೋರ್ಟಬಲ್ ಎಕ್ಸ್-ರೇ ಯಂತ್ರಗಳು ಮತ್ತು ಸಂಬಂಧಿತ ಉಪಕರಣಗಳಿಗೆ ಬಿಡ್ಗಳನ್ನು ಆಹ್ವಾನಿಸಿತು. ಅಲೆಂಜರ್ಸ್ ಮೆಡಿಕಲ್ ಸಿಸ್ಟಮ್ಸ್ ಲಿಮಿಟೆಡ್ ಅನ್ನು ತಾಂತ್ರಿಕವಾಗಿ ಅರ್ಹ ಮತ್ತು ಯಶಸ್ವಿ ಬಿಡ್ದಾರ ಎಂದು ಘೋಷಿಸಲಾಯಿತು,

ಇದು ಮಾರ್ಚ್ 2, 2022 ರಂದು ಗುತ್ತಿಗೆ ಪ್ರಶಸ್ತಿ ಅಧಿಸೂಚನೆಗೆ ಕಾರಣವಾಯಿತು. ಖರೀದಿ ಆದೇಶ ಹೊರಡಿಸಲು ನಿರ್ದೇಶನ ನೀಡುವಂತೆ ಕೋರಿ ಅಲೆಂಗರ್ಸ್ ಮೆಡಿಕಲ್ ಸಿಸ್ಟಮ್ಸ್ ಏಕಸದಸ್ಯ ಪೀಠಕ್ಕೆ ಅರ್ಜಿ ಸಲ್ಲಿಸಿತು.

ಜನವರಿ 25, 2023 ರಂದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳು, 2000 ರ ನಿಯಮ 14 ಅಧಿಸೂಚನೆ ಹಂತದವರೆಗೆ ಮಾತ್ರ ಬದಲಾವಣೆಗಳನ್ನು ಅನುಮತಿಸುತ್ತದೆ ಎಂದು ತರ್ಕಿಸಿ ಸರಬರಾಜು ಆದೇಶವನ್ನು ಹೊರಡಿಸಲು ಏಕಸದಸ್ಯ ಪೀಠವು ಅಧಿಕಾರಿಗಳಿಗೆ ಆದೇಶಿಸಿತು

ವಾಲ್ಮೀಕಿ ನಿಗಮದ ಹಗರಣ ಕೇಸ್

• ಉದಯವಾಹಿನಿ, ಬೆಂಗಳೂರು

ಹೈಕೋರ್ಟ್ ನಕಾರ, ಅರ್ಜಿ ವಜಾ

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಪ್ರಕರಣವನ್ನು ತನಿಖೆ ನಡೆಸಲು ಸಿಬಿಐಗೆ ವಹಿಸಲು ಹೈಕೋರ್ಟ್‌ನಕಾರ ವ್ಯಕ್ತಪಡಿಸಿದೆ. ಅಲ್ಲದೇ ಈ ಸಂಬಂಧ ಸಲ್ಲಿಸಲಾಗಿದ್ದಂತ ರಿಟ್ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾಗಿರುವಂತ ಹಗರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ಕೋರಿದ್ದಂತ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ. ಅಲ್ಲದೇ ಸಿಬಿಐ ತನಿಖೆಗೆ ವಹಿಸಲು ನಿರಾಕರಿಸ

ಮಹಿಳಾ ಸಬಲೀಕರಣಕ್ಕೆ ರಾಜ್ಯ ಸರ್ಕಾರ ಬದ್ಧ: ಮುಖ್ಯಮಂತ್ರಿ ಸಿದ್ದರಾಮಯ್ಯ

ಹಿಂದುಳಿದವರು, ದುರ್ಬಲರು ಎಂಬ ಹಣೆಪಟ್ಟಿ ಹೋಗಬೇಕಾದರೆ ಮಹಿಳೆಯರು ಸ್ವಾವಲಂಬಿಯಾಗಿ ಬದುಕಬೇಕಾಗುತ್ತದೆ

• ಉದಯವಾಹಿನಿ, ಮೈಸೂರು

ಮಹಿಳಾ ಸಬಲೀಕರಣಕ್ಕೆ ನಮ್ಮ ಸರ್ಕಾರ ಬದ್ಧವಾಗಿದ್ದು, ಗ್ಯಾರಂಟಿ ಯೋಜನೆಗಳ ಜಾರಿ ಸೇರಿದಂತೆ ಹಲವು ಕ್ರಮಗಳನ್ನು ಕೈಗೊಂಡಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಉನ್ನತ ಶಿಕ್ಷಣ ಇಲಾಖೆಯಿಂದ 170 ಕೋಟಿ ವೆಚ್ಚದಲ್ಲಿ ಮಹಾರಾಣಿ ಮಹಿಳಾ ವಿಜ್ಞಾನ ಮತ್ತು ಕಲಾ ಕಾಲೇಜಿನ ನೂತನ ಹಾಸ್ಟೆಲ್ ಹಾಗೂ ವಿಜ್ಞಾನ ಕಾಲೇಜಿನ ನೂತನ ಕಟ್ಟಡ, 49 ಕೋಟಿ ವೆಚ್ಚದಲ್ಲಿ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ 3, 4ನೇ ಅಂತಸ್ತು ಹಾಗೂ ಹಾಸ್ಟೆಲ್‌ನ 3ನೇ ಅಂತಸ್ತಿನ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಬುಧವಾರ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಹಿಂದುಳಿದವರು, ದುರ್ಬಲರು ಎಂಬ ಹಣೆಪಟ್ಟಿ ಹೋಗಬೇಕಾದರೆ ಮಹಿಳೆಯರು ಸ್ವಾವಲಂಬಿಯಾಗಿ ಆಗಬೇಕಾಗುತ್ತದೆ. ಇದಕ್ಕಾಗಿ ಶಿಕ್ಷಣ ಪಡೆದುಕೊಳ್ಳಬೇಕು. ಸಂವಿಧಾನವನ್ನು ಅರ್ಥ ಮಾಡಿಕೊಳ್ಳಬೇಕು. ವೈಚಾರಿಕ ಪ್ರಜ್ಞೆ ಬೆಳೆಸಿಕೊಳ್ಳಬೇಕು ಹಾಗೂ ವೈಜ್ಞಾನಿಕವಾಗಿ ವಿಚಾರ ಮಾಡುವುದನ್ನು ಕಲಿಯಬೇಕು' ಎಂದು ಸಲಹೆ ನೀಡಿದರು. ಮಹಾರಾಣಿ ಕಾಲೇಜು ಮೈಸೂರಿನ ಪ್ರತಿಷ್ಠಿತ ಕಾಲೇಜು. ಇಲ್ಲಿ ಒಟ್ಟು 11ಸಾವಿರ ವಿದ್ಯಾರ್ಥಿನಿಯರು ಶಿಕ್ಷಣ ಪಡೆಯುತ್ತಿದ್ದಾರೆ. ಬಹುತೇಕರು ಸಾಮಾನ್ಯ ಕುಟುಂಬದಿಂದ ಬಂದವರೇ ಆಗಿದ್ದಾರೆ. ಅವರ ಅನುಕೂಲಕ್ಕಾಗಿ ಒಟ್ಟು 219 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾರ್ಯವನ್ನು ಕೈಗೊಂಡಿದ್ದೇವೆ. ನೂತನ ಹಾಸ್ಟೆಲ್‌ನಿಂದ 1,700 ವಿದ್ಯಾರ್ಥಿನಿಯರಿಗೆ ಅವಕಾಶ ಸಿಗಲಿದೆ' ಎಂದು ತಿಳಿಸಿದರು.

'ಹೆಣ್ಣು ಕಲಿತರೆ ಶಾಲೆಯೊಂದು ತೆರೆದಂತೆಯೇ. ಹೀಗಾಗಿಯೇ, ಎಲ್ಲಾ ಹೆಣ್ಣುಮಕ್ಕಳಿಗೂ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬುದು ನಮ್ಮ ಉದ್ದೇಶ. ಶತಮಾನಗಳಿಂದಲೂ ಶೂದ್ರರಂತೆಯೇ ಮಹಿಳೆಯರನ್ನೂ ಶಿಕ್ಷಣದಿಂದ ವಂಚಿತರನ್ನಾಗಿ ಮಾಡಲಾಗಿತ್ತು. ಇದರಿಂದಾಗಿ ಇಂದಿಗೂ ಅಸಮಾನತೆಯನ್ನು ಕಾಣುತ್ತಿದ್ದೇವೆ' ಎಂದರು. ಮೈಸೂರಿಗೆ ಮಹಾರಾಜರು ನೀಡಿದ ಕೊಡುಗೆಯನ್ನು ಸ್ಮರಿಸಿದ ಅವರು, 'ಈಗ ಶಂಕುಸ್ಥಾಪನೆ ಆಗಿರುವ ಹಾಸ್ಟೆಲ್ ಸೇರಿದಂತೆ ಎಲ್ಲಾ ಕಾಮಗಾರಿಗಳನ್ನು 24 ತಿಂಗಳಲ್ಲಿ ಪೂರ್ಣಗೊಳಿಸುವಂತೆ ಸೂಚಿಸಿದ್ದೇನೆ' ಎಂದರು. ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಮಾತನಾಡಿ, 'ಪುರಾತತ್ವ ಇಲಾಖೆಯವರು ಒಪ್ಪಿದ ವಿನ್ಯಾಸದಲ್ಲಿ ಇಲ್ಲಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ವಿದ್ಯಾರ್ಥಿನಿಯರಿಗೆ ಅತ್ಯಾಧುನಿಕ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಮೈಸೂರು ಮಹಾರಾಜರ ಹೆಸರಿನಂತೆ ಸಿದ್ದರಾಮಯ್ಯ ಅವರ ಹೆಸರೂ ಅಜರಾಮರವಾಗಿ ಉಳಿಯುತ್ತದೆ.

ಇಂತಹ ಅಭಿವೃದ್ಧಿ ಕೆಲಸಗಳು ದೂರದೃಷ್ಟಿ ಇರುವಂತಹ ನಾಯಕನಿಂದ ಮಾತ್ರ ಸಾಧ್ಯ' ಎಂದು ಹೇಳಿದರು.

ಶಾಸಕ ಕೆ.ಎಂ.ಶಿವಲಿಂಗೇಗೌಡ ಮಾತನಾಡಿ,ಮೈಸೂರಿನಲ್ಲಿ ಅಭಿವೃದ್ಧಿ ಆಗಿರುವುದೇ ಸಿದ್ದರಾಮಯ್ಯ ಬಂದ ಮೇಲೆ.

ಹಿಂದಿನ ಸರ್ಕಾರ 1.50 ಲಕ್ಷ ಕೋಟಿ ಸಾಲ ಉಳಿಸಿ ಹೋಗಿತ್ತು. ನಮ್ಮ ಸರ್ಕಾರವನ್ನು ಟೀಕಿಸುವವರು ಅಂಕಿ-ಅಂಶಗಳನ್ನು ಇಟ್ಟುಕೊಂಡು ಚರ್ಚೆಗೆ ಬರಲಿ. ನಾವೇನೂ ದಡ್ಡರಲ್ಲ. ಟೀಕಿಸುತ್ತಿರುವವರು ಬಜೆಟ್ ಬಗ್ಗೆ ತಿಳಿದುಕೊಳ್ಳಲಿ. ಗ್ಯಾರಂಟಿ ಯೋಜನೆಗಳನ್ನೂ ನೀಡಿ, ಯಾವುದೇ ಅಭಿವೃದ್ಧಿ ಕಾರ್ಯ ನಿಲ್ಲದಂತೆ ಸಿದ್ದರಾಮಯ್ಯ ನೋಡಿಕೊಂಡಿದ್ದಾರೆ' ಎಂದರು.

> ಮೈಸೂರಿನಲ್ಲಿ ಉಳಿಯಲು ಆಗದೇ ಇರುವ ವಿದ್ಯಾರ್ಥಿನಿಯರು ಉನ್ನತ ಶಿಕ್ಷಣ ಮೊಟಕುಗೊಳಿಸುತ್ತಿದ್ದುದು ಕಂಡುಬಂದಿತ್ತು. ಆದ್ದರಿಂದ ಈಗ, ಹಾಸ್ಟೆಲ್ ಕಟ್ಟಿಸಲಾಗುತ್ತಿದೆ -ಕೆ.ಹರೀಶ್ ಗೌಡ, ಚಾಮರಾಜ ಕ್ಷೇತ್ರದ ಶಾಸಕ


ಉದಯವಾಹಿನಿ ಚಿತ್ರ

> ಹಲವು ಆಸ್ಪತ್ರೆಗಳನ್ನು ನಿರ್ಮಿಸುವ ಕೆಲಸವನ್ನು ಸಿದ್ದರಾಮಯ್ಯ ಮಾಡಿದ್ದಾರೆ. ಆಸ್ಪತ್ರೆಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಕೆಆರ್‌ಎಸ್ ರಸ್ತೆಗೆ ಸಿದ್ದರಾಮಯ್ಯ ಅವರ ಹೆಸರಿಡಲು ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರು ಕ್ರಮ ಕೈಗೊಳ್ಳಬೇಕು -ಡಾ.ಎಚ್.ಸಿ. ಮಹದೇವಪ್ಪ

> ಹೆಣ್ಣು ಕಲಿತರೆ ಶಾಲೆಯೊಂದು ತೆರೆದಂತೆಯೇ

ವಿದ್ಯಾಭ್ಯಾಸಕ್ಕೆ ಆದ್ಯತೆ

ಅಂದು ದೇವರಾಜ ಅರಸು ಮಕ್ಕಳ ವಿದ್ಯಾಭ್ಯಾಸಕ್ಕೆ ಆದ್ಯತೆ ನೀಡಿದಂತೆ, ಸಿದ್ದರಾಮಯ್ಯ ಅವರು ಈಗ ಎಲ್ಲಾ ಕ್ಷೇತ್ರದಲ್ಲೂ ಅಭಿವೃದ್ಧಿ ಮಾಡುತ್ತಿದ್ದಾರೆ. ಟೀಕಿಸುವವರು ಕಾಮಾಲೆ ಕಣ್ಣಿನವರು, ಅವರಿಗೆ ಏನೂ ಮಾಡಲಾಗದು. ಮುಖ್ಯಮಂತ್ರಿ ಉತ್ತಮ ಹಾಗೂ ದಕ್ಷ ಆಡಳಿತ ನಡೆಸುತ್ತಿದ್ದಾರೆ. ಶೋಷಿತ ವರ್ಗಗಳ ದನಿಯಾಗಿ ಕೆಲಸ ಮಾಡುತ್ತಿದ್ದಾರೆ' ಎಂದು ಶ್ಲಾಘಿಸಿದರು.

ಕನಕಪುರ ಸುತ್ತಮುತ್ತ ಗುಡ್ಡಗಳ ಬುಡ ಸಡಿಲು

• ಉದಯವಾಹಿನಿ, ಕನಕಪುರ

ನೈಸರ್ಗಿಕ ಬೆಟ್ಟ ಗುಡ್ಡಗಳ ಮಣ್ಣನ್ನು ಅಕ್ರಮವಾಗಿ ತೆಗೆಯುವುದರಿಂದ ಬೆಟ್ಟ-ಗುಡ್ಡಗಳು ಕುಸಿತವಾಗಿ ಅಪಾರ ಸಾವು-ನೋವು ಸಂಭವಿಸುತ್ತವೆ ಎಂದು ಗೊತ್ತಿದ್ದರೂ ಅಕ್ರಮವಾಗಿ ಬೆಟ್ಟ-ಗುಡ್ಡಗಳ ಮಣ್ಣು ತೆಗೆಯುವ ಪ್ರಕ್ರಿಯೆ ಮಾತ್ರ ನಿಂತಿಲ್ಲ.ಇಂತಹ ಅಕ್ರಮ ಚಟುವಟಿಕೆ ಕಣ್ಣು ಮುಂದೆ ನಡೆಯುತ್ತಿದ್ದರೂ ಸಂಬಂಧಪಟ್ಟವರು ಕಿಂಚಿತ್ತು ಅದನ್ನು ತಡೆಯುವ ಪ್ರಯತ್ನ ಮಾಡುತ್ತಿಲ್ಲ. ಇದಕ್ಕೂ ನಮಗೂ ಸಂಬಂಧವಿಲ್ಲವೇನು ಎಂಬಂತೆ ಮೌನ ವಹಿಸಿದ್ದಾರೆ.ಮತ್ತೊಂದು ಕಡೆ ರಸ್ತೆ ವಿಸ್ತರಣೆ ಮತ್ತು ಅಭಿವೃದ್ಧಿ ಕಾರಣಕ್ಕೆ ಗುತ್ತಿಗೆದಾರರು ಸ್ಥಳೀಯ ಪ್ರಭಾವಿಗಳ ಸಹಕಾರ ಪಡೆದು ರಸ್ತೆ ಬದಿಯಲ್ಲಿನ ಗುಡ್ಡಗಳ ಮಣ್ಣು ತೆಗೆದು ನೆಲಸಮಗೊಳಿಸುತ್ತಿದ್ದಾರೆ.

ಪ್ರಾಕೃತಿಕವಾಗಿ ಸಾವಿರಾರು ವರ್ಷಗಳಿಂದ ಕಲ್ಲು ಬಂಡೆ ಸಮೇತ ಗುಡ್ಡ ಮತ್ತು ಬೆಟ್ಟಗಳು ಬೆಳೆದುಕೊಂಡಿವೆ. ಅಂತಹ ಗುಡ್ಡಗಳ ಬುಡದಲ್ಲಿ ಇರುವ ಮಣ್ಣನ್ನು ಕಾನೂನು ಬಾಹಿರವಾಗಿ ಹಿಟಾಚಿ, ಜೆಸಿಬಿ ಬಳಸಿ 50 ಅಡಿಗಳಿಗೂ ಹೆಚ್ಚು ಆಳವಾಗಿ ಮಣ್ಣು ತೆಗೆಯುತ್ತಿದ್ದಾರೆ.

ಈ ರೀತಿ ಮಣ್ಣು ತೆಗೆಯುವುದರಿಂದ ಬೆಟ್ಟ ಗುಡ್ಡದ ಬುಡ ಸಡಿಲವಾಗುತ್ತಿವೆ. ಅಲ್ಲದೆ, ಗುಡ್ಡದಲ್ಲಿ ಸಿಗುವ ದಪ್ಪ ದಪ್ಪ ಬಂಡೆಗಳನ್ನು ಅಸ್ಥಿರಗೊಳಿಸಿ ಅಲ್ಲಿಯೇ ಬಿಡಲಾಗುತ್ತಿದೆ. ಈ ರೀತಿಯ ಬಂಡೆ ಕಲ್ಲುಗಳು ಯಾವ ಸಂದರ್ಭದಲ್ಲಿ ಬೇಕಾದರೂ ಉರುಳಿ ಬೀಳಬಹುದು. ಗುಡ್ಡ ಬುಡ ಸಡಿಲವಾಗಿರುವುದರಿಂದ ಹೆಚ್ಚು ಮಳೆ ಆದಾಗ ಕುಸಿಯಬಹುದು. ಇಂತಹ ಅನಾಹುತ ಮಡಿಕೇರಿ, ಕೊಡಗು, ಮಲೆನಾಡು ಪ್ರದೇಶಗಳಲ್ಲಿ ಆಗಿ ಸಾಕಷ್ಟು ಸಾವು ನೋವು ಕಣ್ಮುಂದೆ ಸಂಭವಿಸಿದೆ

ಅಂತಹ ಅವಘಡಗಳು ಆದಾಗ ಮಾತ್ರ ಸರ್ಕಾರ ಎಚ್ಚೆತ್ತುಕೊಂಡು ಕುಸಿತಕ್ಕೆ ಕಾರಣ ಹುಡುಕುತ್ತದೆ. ಬೆಟ್ಟಗುಡ್ಡಗಳ ಮಣ್ಣು ತೆಗೆಯದಂತೆ ಕ್ರಮ ವಹಿಸಲು ಮುಂದಾಗುತ್ತದೆ. ಆದರೆ, ತಾಲ್ಲೂಕಿನಲ್ಲಿ ತಮ್ಮ ಕಣ್ಮುಂದೆ ಗುಡ್ಡಗಳ ಮಣ್ಣು ತೆಗೆಯುತ್ತಿದ್ದರೂ ಸಂಬಂಧಪಟ್ಟವರು ಜಾಣ ಕುರುಡು ಪ್ರದರ್ಶಿಸುತ್ತಿದ್ದಾರೆ.

ಅರಣ್ಯ ಭೂಮಿ ಗೋಮಾಳ ಪ್ರದೇಶವನ್ನು ಕಬಳಿಸಿ ಒತ್ತುವರಿ ಮಾಡುವವರು ಹೆಚ್ಚಾಗಿ, ಗುಡ್ಡಗಳ ಮಣ್ಣು ಬಸಿದು ಸಮತಟ್ಟು ಮಾಡುತ್ತಿದ್ದಾರೆ. ಸರ್ಕಾರ ಸಾಗುವಳಿಗೆ ಕೊಡಬೇಕಾದರೆ ಸಮತಟ್ಟಾದ ಭೂಮಿಯಲ್ಲಿ ಹತ್ತಾರು ವರ್ಷಗಳಿಂದ ಕೃಷಿ ಮಾಡಿರಬೇಕು. ಆದರೆ, ಇದನ್ನು ಪಾಲಿಸುತ್ತಿಲ್ಲ.

ಸಂಬಂಧಪಟ್ಟ ಅಧಿಕಾರಿಗಳು ಇಂತಹ ಅಕ್ರಮಗಳು ಕಂಡು ಬಂದಾಗ ಅಥವಾ ಯಾರಾದರೂ ಗಮನಕ್ಕೆ ತಂದಾಗ ಪ್ರಾಮಾಣಿಕವಾಗಿ ದಿಟ್ಟತನದಿಂದ ಅಕ್ರಮ ತಡೆಗಟ್ಟಬೇಕು. ಕಾನೂನಿನಡಿ ಅಕ್ರಮ ಎಸಗುವವರನ್ನು ಶಿಕ್ಷಿಸಬೇಕು. ಆಗ ಮಾತ್ರ ಪರಿಸರ ಉಳಿಸಬಹುದು.

ಮುಂದಾಗುವ ಅನಾಹುತ ತಡೆಗಟ್ಟಬಹುದು ಎನ್ನುವುದು ಸ್ಥಳೀಯರ ಅಭಿಮತ.

ಉದಯವಾಹಿನಿ ಚಿತ್ರ

> ಭೂಮಿ ಮೇಲಿನ ಪ್ರಕೃತಿ, ನೈಸರ್ಗಿಕ ಸಂಪತ್ತು, ಬೆಟ್ಟಗುಡ್ಡಗಳು ಎಲ್ಲರಿಗೂ ಸೇರಬೇಕಾದದ್ದು. ಆದರೆ, ಕೆಲವರು ತಮ್ಮ ಸ್ವಾರ್ಥಕ್ಕಾಗಿ ಬೆಟ್ಟ-ಗುಡ್ಡಗಳನ್ನು ಕರಗಿಸಿ ಪರಿಸರ ಅಸಮತೋಲನ ಮಾಡುತ್ತಿದ್ದಾರೆ. ವಿಪತ್ತುಗಳು ಸಂಭವಿಸಿದಾಗ ಎಲ್ಲರೂ ಅದನ್ನು ಅನುಭವಿಸಬೇಕಾಗುತ್ತದೆ ಎನ್ನುತ್ತಾರೆ ಸ್ಥಳೀಯರು.

ಭಾರತೀಯ ಕಿಸಾನ್ ಸಂಘದಿಂದ ಪ್ರತಿಭಟನೆ

• ಉದಯವಾಹಿನಿ, ತುಮಕೂರು

ವಕ್ಫ್ ಕಾಯ್ದೆ ರದ್ದತಿ, ದೇವಾಲಯ, ಸರ್ಕಾರಿ ಆಸ್ತಿಯನ್ನು ವಕ್ಫ್ ಮಂಡಳಿಯಿಂದ ಮುಕ್ತಗೊಳಿಸುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಗರದಲ್ಲಿ ಭಾರತೀಯ ಕಿಸಾನ್ ಸಂಘ-ಕರ್ನಾಟಕ ಪ್ರದೇಶ ಸಂಘಟನೆಯಿಂದ ಪ್ರತಿಭಟನೆ ನಡೆಯಿತು.ವಿವಿಧ ಮಠಗಳ ಸ್ವಾಮೀಜಿಗಳು ಪ್ರತಿಭಟನೆಗೆ ಬೆಂಬಲ ಸೂಚಿಸಿ ಭಾಗವಹಿಸಿದ್ದರು. ನಗರದ ಜೂನಿಯರ್ ಕಾಲೇಜು ಮೈದಾನದಿಂದ ಪ್ರತಿಭಟನಾ ಮೆರವಣಿಗೆ ಆರಂಭವಾಯಿತು. ಬಿ.ಎಚ್.ರಸ್ತೆಯಲ್ಲಿ ಸಾಗಿ ಬಿಜಿಎಸ್ ವೃತ್ತದ ಬಳಿ ಮಾನವ ಸರಪಳಿ ನಿರ್ಮಿಸಿ ಆಕ್ರೋಶ ವ್ಯಕ್ತಪಡಿಸಿದರು. ಅಶೋಕ ರಸ್ತೆಯ ಮೂಲಕ ಜಿಲ್ಲಾಧಿಕಾರಿ ಕಚೇರಿ ಬಳಿ ಕೊನೆಗೊಂಡಿತು.

'ವಕ್ಫ್ ವಿವಾದ ಇಂದು, ನಿನ್ನೆಯದಲ್ಲ. ಹಲವಾರು ವರ್ಷಗಳಿಂದ ಜನರನ್ನು ಕಾಡುತ್ತಿದೆ. ಇದು ಕೇವಲ ಹಿಂದುಗಳಿಗಷ್ಟೇ ಅಲ್ಲದೆ, ಮುಸ್ಲಿಂ ಸಮುದಾಯದವರಿಗೆ ಕಂಟಕಪ್ರಾಯವಾಗಿದೆ. ಸರ್ಕಾರ ನೋಟಿಸ್ ವಾಪಸ್ ಪಡೆಯುವುದಕ್ಕಿಂತ ವಕ್ಫ್ ಮಂಡಳಿ ಕಾಯ್ದೆ ರದ್ದು ಪಡಿಸಬೇಕು' ಎಂದು ಭಾರತೀಯ ಕಿಸಾನ್ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಗಂಗಾಧರ್ ಕಾಸರಘಟ್ಟ ಆಗ್ರಹಿಸಿದರು. ವಕ್ಫ್ ಆಸ್ತಿಗಳಿಗೂ ಮೇಲ್ಮನವಿ ಸಲ್ಲಿಸುವ ಅವಕಾಶ ಕಲ್ಪಿಸಬೇಕು. ಇದುವರೆಗೆ ಆಡಳಿತ ನಡೆಸಿದ ಎಲ್ಲಾ ಪಕ್ಷಗಳು ಜನರಿಗೆ ಅನ್ಯಾಯ ಮಾಡಿವೆ. ಮತಕ್ಕಾಗಿ ಇನ್ನಿಲ್ಲದ ಹೀನ ಕೃತ್ಯಕ್ಕೆ ಕೈ ಹಾಕಿವೆ. ರೈತರು ಎಚ್ಚೆತ್ತುಕೊಂಡಿದ್ದು, ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಿಸಿರುವುದನ್ನು ರದ್ದುಪಡಿಸಬೇಕು. ಜನರ ಗಮನಕ್ಕೆ ತಾರದೆ ಪಹಣಿಯಲ್ಲಿ ವಕ್ಫ್ ಎಂದು ನಮೂದಿಸಿದವರನ್ನು ಶಿಕ್ಷೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದರು.

ಮುಖಂಡ ಹೊಸಳ್ಳಯ್ಯ, ನಮ್ಮ ಕುಟುಂಬಕ್ಕೆ ಸೇರಿದ 3.10 ಎಕರೆ ಸೇರಿ ಒಟ್ಟು 56.06 ಎಕರೆ ಜಮೀನಿನ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಾಗಿದೆ.

ಉದಯವಾಹಿನಿ ಚಿತ್ರ

ನಿಖಿಲ್‌ಗೆ ಗೆಲುವಿನ ಅಗ್ನಿಪರೀಕ್ಷೆ ಆರಂಭ

• ಉದಯವಾಹಿನಿ, ಚನ್ನಪಟ್ಟಣ

ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಅವರ ಮಗ ಹಾಗೂ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಮೊಮ್ಮಗ ನಿಖಿಲ್ ಕುಮಾರಸ್ವಾಮಿ ಅವರಿಗೆ ಚನ್ನಪಟ್ಟಣ ಉಪಚುನಾವಣೆಯ ಅಖಾಡ ಮಾಡು ಇಲ್ಲವೆ ಮಡಿ ಹೋರಾಟವಾಗಿದೆ.

ಯಾಕಂದ್ರೆ ನಿಖಿಲ್ ಕುಮಾರಸ್ವಾಮಿಗೆ ಸಾಲು ಸಾಲು ಸೋಲುಗಳು ಎದುರಾಗಿದ್ದವು. ಈ ಸೋಲುಗಳಿಂದಾಗಿ ನಿಖಿಲ್ ಕುಮಾರಸ್ವಾಮಿ ಅವರು ಸಾಕಷ್ಟು ನೋವಿನಲ್ಲಿ ಪರದಾಡಿದ್ದರು. ಹೀಗಿದ್ದಾಗಲೇ ಚನ್ನಪಟ್ಟಣ ಉಪ ಚುನಾವಣೆ ಎದುರಾಗಿದೆ.

ಹೌದು, 2019ರ ಲೋಕಸಭಾ ಚುನಾವಣೆಯ ಅಖಾಡದಲ್ಲಿ ಸುಮಲತಾ ಅಂಬರೀಶ್ ಅವರ ಎದುರು ಸೋತಿದ್ದ ನಿಖಿಲ್ ಅವರು ಮೊದಲ ಹಿನ್ನಡೆಯನ್ನ ಅನುಭವಿಸಿದ್ದರು. ಈ ಸೋಲಿನ ನಂತರ ರಾಮನಗರ ವಿಧಾನಸಭೆ ಚುನಾವಣೆ 2023 ರಲ್ಲಿ ಕೂಡ ಸೋತಿದ್ದರು. ಹೀಗಿದ್ದಾಗ ಚನ್ನಪಟ್ಟಣ ಕ್ಷೇತ್ರ ಇದೀಗ ನಿಖಿಲ್ ಅವರ ಭವಿಷ್ಯ ನಿರ್ಧಾರ ಮಾಡಲಿದೆ. ಹಾಗಾದ್ರೆ ಈಗ ನಿಖಿಲ್ ಅವರ ರಾಜಕೀಯ ಭವಿಷ್ಯ ನಿರ್ಧಾರ ಮಾಡುವುದು ಯಾರು? ಹೇಗಿದೆ ಮತದಾರರ ಒಲವು? ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಮತದಾನ ಬೆಳಗ್ಗೆಯೇ ಆರಂಭವಾಗಿದೆ. 2.2 ಲಕ್ಷಕ್ಕೂ ಹೆಚ್ಚು ಮತದಾರರು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಇದ್ದಾರೆ. ಚನ್ನಪಟ್ಟಣ ಕ್ಷೇತ್ರದ ಮತದಾರರ ಪೈಕಿ ಒಕ್ಕಲಿಗ ಸಮುದಾಯ ಪ್ರಬಲವಾಗಿದ್ದು, ಈ ಕ್ಷೇತ್ರದಲ್ಲಿ ಬರೋಬ್ಬರಿ 1.05 ಲಕ್ಷ ಒಕ್ಕಲಿಗ ಮತದಾರರು ಇದ್ದಾರೆ.

ಮತ್ತೊಂದು ಕಡೆ ಬಿಜೆಪಿ ಜೆಡಿಎಸ್ ಮೈತ್ರಿ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರು ಕೂಡ ಒಕ್ಕಲಿಗ ಸಮುದಾಯಕ್ಕೆ ಸೇರಿದವರೇ ಆಗಿದ್ದು, ಹೀಗೆ ಕಾಂಗ್ರೇಸ್ ಪಕ್ಷದ ಅಭ್ಯರ್ಥಿಯಾದ ಸಿ.ಪಿ. ಯೋಗೇಶ್ವರ್ ಕೂಡ ಒಕ್ಕಲಿಗ ಸಮುದಾಯಕ್ಕೆ ಸೇರಿದ್ದಾರೆ.

ಹೇಗಿದೆ ಮತದಾರರ ಒಲವು

ಉದಯವಾಹಿನಿ ಚಿತ್ರ

ವಿದ್ಯಾರ್ಥಿ ನಿಲಯಗಳಲ್ಲಿ ಶುಚಿತ್ವಕ್ಕೆ, ಸ್ವಚ್ಛತೆಗೆ ನೀಡಿ ಮೊದಲ ಆದ್ಯತೆ: ಅನಿಲ್

• ಉದಯವಾಹಿನಿ, ಮಡಿಕೇರಿ

ವಿದ್ಯಾರ್ಥಿ ನಿಲಯಗಳ ಅಡುಗೆ ಕೋಣೆಯಲ್ಲಿ ಸ್ವಚ್ಛತೆಗೆ ಪ್ರಥಮ ಆದ್ಯತೆ ನೀಡಬೇಕು ಎಂದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ವಿಭಾಗದ ಅಂಕಿತ ಅಧಿಕಾರಿ ಅನಿಲ್ ಧಾವನ್ ಸೂಚಿಸಿದರು.ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ವತಿಯಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ನಿಲಯ ಪಾಲಕರು, ನಿಲಯ ಮೇಲ್ವಿಚಾರಕರು ಹಾಗೂ ಸಿಬ್ಬಂದಿಗಳಿಗೆ ನಗರದ ಗಾಂಧಿ ಭವನದಲ್ಲಿ ಮಂಗಳವಾರ ನಡೆದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಪಾಡುವ ಕುರಿತ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಆಹಾರ ದಾಸ್ತಾನು ಉಗ್ರಾಣದಲ್ಲಿ ಇಲಿ, ಹೆಗ್ಗಣ ಸೇರದಂತೆ ಗಮನ ಹರಿಸಬೇಕು. ವೈಯಕ್ತಿಕ ಪರಿಸರ ಶುಚಿತ್ವ ಕಾಪಾಡುವುದು ಹಾಗೂ ಶುದ್ಧ ಕುಡಿಯುವ ನೀರು ಪೂರೈಸುವುದು, ಆಹಾರ ತಯಾರಿಕೆ ವಿಧಾನ, ನೈರ್ಮಲ್ಯಕ್ಕೆ ಆದ್ಯತೆ ನೀಡುವುದು ಹೀಗೆ ಶುಚಿತ್ವಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದು ಹೇಳಿದರು.

ವಿದ್ಯಾರ್ಥಿ ನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುವವರು ದೈಹಿಕ ಶುಚಿತ್ವ ಮತ್ತು ಆರೋಗ್ಯದ ಕಡೆಗೆ ಗಮನ ನಹರಿಸಬೇಕು. ತಯಾರಿಸಿದ ಆಹಾರವನ್ನು ಮುಚ್ಚಿಡುವುದು, ಕ್ರಿಮಿಕೀಟಗಳಿಂದ ಆಹಾರ ಕಲುಷಿತ ವಾಗದಂತೆ ಗಮನ ಹರಿಸುವುದು. ತಯಾರಿಸಿದ ಆಹಾರವನ್ನು ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಬಳಸುವುದು, ಪ್ಯಾಕ್ ಮಾಡಿದ ಆಹಾರ ವಸ್ತುಗಳ ಲೇಬಲ್‌ಗಳಲ್ಲಿ ಗ್ರಾಹಕರಿಗೆ ಅಗತ್ಯವಾಗಿ ನೀಡಲೇಬೇಕಾದ ಮಾಹಿತಿ ಬಗ್ಗೆ ಖಾತರಿಪಡಿಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು. ಕಚ್ಚಾ ವಸ್ತುಗಳು ಹಾಗೂ ಸಿದ್ಧಪಡಿಸಿದ ಆಹಾರವನ್ನು ಪ್ರತ್ಯೇಕವಾಗಿ ಶೇಖರಿಸಬೇಕು, ತ್ಯಾಜ್ಯ ವಸ್ತುಗಳನ್ನು ಸೂಕ್ತವಾಗಿ ಸಂಗ್ರಹಿಸಿ ಸಮರ್ಪಕವಾಗಿ ವಿಲೇವಾರಿ ಮಾಡಬೇಕು, ಶುದ್ಧ ಮತ್ತು ಸುರಕ್ಷಿತ ಗುಣಮಟ್ಟದ ಆಹಾರ ನೀಡಲು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಅವರು ವಿವರಿಸಿದರು.

ಹಿಂದುಳಿದ ವರ್ಗಗಳ ಇಲಾಖೆಯ

ಅಂತರಾಳದಿಂದ... EDITORIAL

ಪಟಾಕಿ ಸ್ಫೋಟಿಸಿದ ಸುಪ್ರೀಂಕೋರ್ಟ್

ಪಟಾಕಿಗೆ ಸಂಬಂಧಿಸಿ ಸುಪ್ರೀಂಕೋರ್ಟ್ ಅತ್ಯಂತ ಮಹತ್ವದ ಆದೇಶವೊಂದನ್ನು ನೀಡಿದೆ. ದಿಲ್ಲಿಯಲ್ಲಿ ಹೆಚ್ಚುತ್ತಿರುವ ಪರಿಸರ ಮಾಲಿನ್ಯಕ್ಕಾಗಿ ಪೊಲೀಸರನ್ನು ತೀವ್ರ ತರಾಟೆಗೆ ತೆಗೆದುಕೊಂಡಿರುವ ನ್ಯಾಯಾಲಯ, ನಗರದಲ್ಲಿ ಪಟಾಕಿಗಳ ಮಾರಾಟ ಮತ್ತು ಸಿಡಿಸುವುದನ್ನು ನಿಲ್ಲಿಸಲು ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ. ದಿಲ್ಲಿಯ ವಾಯುಗುಣಮಟ್ಟ ಬಿಕ್ಕಟ್ಟು ಕುರಿತ ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಾಧೀಶರು 'ಯಾವುದೇ ಧರ್ಮವು ಮಾಲಿನ್ಯವನ್ನು ಪ್ರೋತ್ಸಾಹಿಸುವುದಿಲ್ಲ. ಈ ರೀತಿಯಲ್ಲಿ ಪಟಾಕಿಗಳನ್ನು ಸಿಡಿಸಿದರೆ ಅದು ನಾಗರಿಕರ ಆರೋಗ್ಯದ ಮೂಲಭೂತ ಹಕ್ಕಿನ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ ಎಂದು ಹೇಳಿದ್ದಾರೆ. ಹಾಗೆಯೇ ನಗರದಲ್ಲಿ ಪಟಾಕಿಗಳನ್ನು ಶಾಶ್ವತವಾಗಿ ನಿಷೇಧಿಸುವ ಕುರಿತಂತೆ ನವೆಂಬರ್ 25ರ ಒಳಗೆ ನಿರ್ಧಾರವೊಂದನ್ನು ತೆಗೆದುಕೊಳ್ಳುವಂತೆ ನ್ಯಾಯಾಲಯವು ದಿಲ್ಲಿ ಸರಕಾರವನ್ನು ಆಗ್ರಹಿಸಿದೆ.

ಇದರ ಜೊತೆ ಜೊತೆಗೆ ಹಬ್ಬಗಳ ಹೆಸರಿನಲ್ಲಿ ಹಗಲು ರಾತ್ರಿ ಪಟಾಕಿಗಳನ್ನು ಸುಡುತ್ತಾ ಈ ಮಾಲಿನ್ಯಕ್ಕೆ ಇನ್ನಷ್ಟು ಕೊಡುಗೆಗಳನ್ನು ನೀಡುತ್ತಾ ಬರುತ್ತಿದ್ದಾರೆ. ಪಟಾಕಿಯ ವಿರುದ್ಧ ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳುವಾಗಲೂ ಅದಕ್ಕೆ ಧರ್ಮದ ಬಣ್ಣ ಕೊಟ್ಟು ತಮ್ಮ ರಾಜಕೀಯಕ್ಕೆ ಬಳಸುತ್ತಿದ್ದಾರೆ. ಈ ಕಾರಣದಿಂದಲೇ, ದಿಲ್ಲಿಯ ಮಾತ್ರವಲ್ಲ ದೇಶದ ಪರಿಸರ ದಿನದಿಂದ ದಿನಕ್ಕೆ ಕಡುತ್ತಿದೆ. ಭಾರತದಲ್ಲಿ ಹೆಚ್ಚುತ್ತಿರುವ ಪರಿಸರ ಮಾಲಿನ್ಯದ ಬಗ್ಗೆ ಈಗಾಗಲೇ ವಿಶ್ವಸಂಸ್ಥೆ ತನ್ನ ಕಳವಳವನ್ನು ವ್ಯಕ್ತಪಡಿಸಿದೆ.

ಕಳೆದ ಕೆಲವು ವರ್ಷಗಳಿಂದ ದಿಲ್ಲಿಯ ವಾಯು ಮಾಲಿನ್ಯ ಉಸಿರಾಡುವುದಕ್ಕೇ ಕಷ್ಟ ಎನ್ನುವಷ್ಟು ಕೆಟ್ಟು ಹೋಗಿದೆ. ಇದಕ್ಕಾಗಿ ನೆರೆ ರಾಜ್ಯಗಳ ಗಡಿಭಾಗದಲ್ಲಿರುವ ರೈತರನ್ನು ಹೊಣೆ ಮಾಡುತ್ತಾ ಬರಲಾಗಿದೆ. ರೈತರು ತಮ್ಮಗದ್ದೆಯ ಕಳೆಗಳನ್ನು ಸುಟ್ಟು ಹಾಕುವುದರ ಕಾರಣದಿಂದಾಗಿ ದಿಲ್ಲಿಯ ವಾಯುಮಾಲಿನ್ಯ ಹೆಚ್ಚುತ್ತಿದೆ ಎನ್ನುವುದು ಸರಕಾರದ ಆರೋಪ. ಆದರೆ ರೈತ ವರ್ಗ ಈ ಆರೋಪ ಪೂರ್ಣ ಸತ್ಯವಲ್ಲ ಎಂದು ಸ್ಪಷ್ಟಿಕರಣ ನೀಡುತ್ತಲೇ ಬರುತ್ತಿದೆ. ನಗರಗಳಲ್ಲಿ ಪರಿಸರ ಮಾಲಿನ್ಯ ಉಂಟಾದರೆ, ದೂರದ ಹಳ್ಳಿಯಲ್ಲಿರುವ ರೈತರ ತಲೆಗೆ ಕಟ್ಟಲು ಹಿಂಜರಿಯದ ಅವರ ಮೇಲೆ ಮೊಕದ್ದಮೆಗಳನ್ನು ದಾಖಲಿಸುವ ಇದೇ ರಾಜಕಾರಣಿಗಳು ನಗರದಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆಯ ಬಗ್ಗೆ ಜಾಣ ಮೌನ ತಾಳುತ್ತಾರೆ. ಪಟಾಕಿಗೆ ಸಂಬಂಧಿಸಿ ಸುಪ್ರೀಂಕೋರ್ಟ್ನ ನಿರ್ದೇಶನ ಬರೇ ದಿಲ್ಲಿಗೆ ಮಾತ್ರವಲ್ಲ, ಇಡೀ ದೇಶಕ್ಕೆ ಅನ್ವಯವಾಗಬೇಕಾಗಿದೆ. ಯಾವುದೇ ಧರ್ಮದ ಯಾವುದೇ ಹಬ್ಬಗಳು ಪರಿಸರ ಮಾಲಿನ್ಯವನ್ನು ಉತ್ತೇಜಿಸುವುದಿಲ್ಲ ಹಬ್ಬಗಳು ಜಗತ್ತಿಗೆ, ಮಾನವ ಕುಲಕ್ಕೆ ಒಳಿತನ್ನು ಹರಡುವ ಉದ್ದೇಶದೊಂದಿಗೆ ಬರುತ್ತದೆ. ಆದರೆ ಮನುಷ್ಯನ ತಪ್ಪು ನಡೆಗಳು ಹಬ್ಬಗಳ ಮೌಲ್ಯಗಳಿಗೆ ಧಕ್ಕೆ ತರುತ್ತಿವೆ. ಪರಿಣಾಮವಾಗಿ ಬೆಳಕನ್ನು ಹೊತ್ತು ತರುವ ದೀಪಾವಳಿ ಹಲವು ಬಾರಿ ಇನ್ನಷ್ಟು ಕತ್ತಲನ್ನು ತುಂಬಿ ಹೋಗುತ್ತದೆ. ಭಾರತದ ಎಲ್ಲಾ ಹಬ್ಬಗಳು ಪ್ರಕೃತಿಯ ಜೊತೆಗೆ ನೇರ ಸಂಬಂಧವನ್ನು ಹೊಂದಿವೆ. ಕೃಷಿ, ಮರ ಗಿಡಗಳು, ನೆಲ ಜಲದೊಂದಿಗೆ ಈ ಹಬ್ಬಗಳು ಬೆಸೆದುಕೊಂಡಿವೆ. ವಿಪರ್ಯಾಸವೆಂದರೆ, ಈ ಹಬ್ಬಗಳ ಹೆಸರಿನಲ್ಲೇ ನಾವು ಮರಗಿಡಗಳಿಗೆ, ಪರಿಸರಕ್ಕೆ ಧಕ್ಕೆಯನ್ನು ತರುತ್ತೇವೆ. ಪಟಾಕಿಯನ್ನು ದೀಪಾವಳಿಯ ಸಂದರ್ಭದಲ್ಲಿ ಅನಿವಾರ್ಯ ಮಾಡಿರುವುದು ಯಾವುದೇ ಧರ್ಮವಲ್ಲ ಇದರ ಹಿಂದಿರುವ ಉದ್ಯಮ ಪತಿಗಳು ಪಟಾಕಿಗೂ ಬೆಳಕಿಗೂ ಯಾವ ಸಂಬಂಧವೂ ಇಲ್ಲ ದೀಪಾವಳಿಗೆ ಸಂಬಂಧವಿರುವುದು ಹಣತೆಯ ಜೊತೆಗೆ. ಪಟಾಕಿ ಸದ್ದು ಮಾಡುತ್ತಾ ಉರಿದು ಬೂದಿಯಾಗುತ್ತದೆ. ಗಂಧಕದ ವಾಸನೆಯನ್ನು ಮಾಲಿನ್ಯವನ್ನು ಹೊಗೆಯನ್ನು ಬಿಟ್ಟು ಹೋಗುತ್ತದೆ. ಬಳಿಕ ಉಳಿಯುವುದು ಗಾಢ ಕತ್ತಲೆ. ಆದರೆ ಹಣತೆ, ರಾತ್ರಿಯಿಡೀ ಬೆಳಗುತ್ತಾ ಬದುಕಿಗೆ ಸಂದೇಶವನ್ನು ಭರವಸೆಯನ್ನು ನೀಡುತ್ತದೆ. ವಿಪರ್ಯಾಸವೆಂದರೆ, ರಾಜಕೀಯ ಕಾರಣಕ್ಕಾಗಿ ಕೆಲವರು ಹಬ್ಬಗಳ ಮೇಲೆ ಬಲವಂತವಾಗಿ ಪಟಾಕಿಗಳನ್ನು ಹೇರುತ್ತಾ ಬಂದಿದ್ದಾರೆ. ಹಬ್ಬಗಳು ಪಟಾಕಿಗಳಿಲ್ಲದೆ ನಡೆಯುವುದಿಲ್ಲ ಎನ್ನುವುದನ್ನು ನಂಬಿಸಿದ್ದಾರೆ. ಪಟಾಕಿಗಳಿಂದ ಕೇವಲ ಪರಿಸರ ಮಾಲಿನ್ಯ ಮಾತ್ರ ಆಗುತ್ತಾ ಬಂದಿರುವುದಲ್ಲ, ಪ್ರತಿ ವರ್ಷ ಸಾವಿರಾರು ಮಂದಿ ಈ ಪಟಾಕಿ ದುರಂತಗಳಿಂದ ಸಂತ್ರಸ್ತರಾಗುತ್ತಾ ಬರುತ್ತಿದ್ದಾರೆ ಇತ್ತೀಚೆಗಷ್ಟೇ ಕೇರಳದಲ್ಲಿ ಪಟಾಕಿ ದುರಂತದಲ್ಲಿ 200ಕ್ಕೂ ಅಧಿಕ ಮಂದಿ ಗಾಯಗೊಂಡರು. ಇವರಲ್ಲಿ 10 ಜನರ ಸ್ಥಿತಿ ಗಂಭೀರವಾಗಿದೆ. ಪಟಾಕಿ ಸ್ಫೋಟಗಳಿಗಾಗಿ ಕೇರಳ, ತಮಿಳುನಾಡು ಕುಖ್ಯಾತಿಯನ್ನು ಪಡೆದಿವೆ. ಹಬ್ಬದ ಸಂದರ್ಭದಲ್ಲಿ ಪಟಾಕಿ ಸಿಡಿಸಿ ಕಣ್ಣುಗಳನ್ನು ಕಳೆದುಕೊಳ್ಳುತ್ತಿರುವ ಮಕ್ಕಳ ಸಂಖ್ಯೆಯೂ ಹೆಚ್ಚುತ್ತಿವೆ. ಪ್ರಾಣಿ,ಪಕ್ಷಿಗಳು, ಆಸ್ಪತ್ರೆಗಳಲ್ಲಿರುವ ರೋಗಿಗಳು ಈ ಪಟಾಕಿಗಳಿಂದ ಅನುಭವಿಸುತ್ತಿರುವ ತೊಂದರೆ ಬೇರೆಯೇ ಇದೆ. ಇದೇ ಸಂದರ್ಭದಲ್ಲಿ ಪಟಾಕಿಗಳನ್ನು ಸಿಡಿಸುವ ವಿಷಯದಲ್ಲೇ ಜಗಳಗಳು ನಡೆದು ಅಂತಿಮವಾಗಿ ಅದು ಸಾವುನೋವುಗಳಿಗೆ ಕಾರಣವಾಗುವುದಿದೆ. ಇಷ್ಟಾದರೂ, ಕೆಲವು ರಾಜಕಾರಣಿಗಳು ಯಾವುದೇ ನಾಚಿಕೆಯಿಲ್ಲದೆ ವೇದಿಕೆಯ ಮೇಲೆ ನಿಂತು ಪಟಾಕಿಗಳನ್ನು ಸುಡಲು ಕರೆ ನೀಡುತ್ತಿದ್ದಾರೆ. ಇತ್ತೀಚೆಗೆ ತಮಿಳು ನಾಡಿನ ಬಿಜೆಪಿ ನಾಯಕರೊಬ್ಬರು ಪಟಾಕಿಗಳನ್ನು ಹಬ್ಬದ ಸಂದರ್ಭದಲ್ಲಿ ಸುಡಬೇಕು ಎಂದು ಬಹಿರಂಗವಾಗಿ ಕರೆ ನೀಡಿದರು. ಹೀಗೆ ಕರೆ ನೀಡಿದ ಮರುದಿನವೇ ಕೇರಳದಲ್ಲಿ ಪಟಾಕಿ ಗೋದಾಮು ಸ್ಫೋಟಗೊಂಡು ನೂರಾರು ಜನರು ಗಾಯಗೊಂಡರು. ಪಟಾಕಿ ಸುಡಲು ವೇದಿಕೆಗಳಲ್ಲಿ ನಿಂತು ಬಹಿರಂಗವಾಗಿ ಕರೆ ನೀಡುವ ಈ ರಾಜಕಾರಣಿಗಳು ಪಟಾಕಿ ಸುಡುವ ಸಂದರ್ಭದಲ್ಲಿ ನಡೆಯುವ ದುರಂತಗಳ ಹೊಣೆ ಹೊತ್ತುಕೊಳ್ಳಲು ಸಿದ್ಧರಿದ್ದಾರೆಯೆ? ಪಟಾಕಿಗಳಿಗೆ ಬೆಂಬಲ ನೀಡುವ ರಾಜಕಾರಣಿಗಳನ್ನೇ ಇಂತಹ ಪಟಾಕಿ ದುರಂತಗಳಿಗೆ ನೇರವಾಗಿ ಹೊಣೆ ಮಾಡಬೇಕಾಗಿದೆ. ಮುಖ್ಯವಾಗಿ ಇವರು ಪಟಾಕಿಗಳನ್ನು ಬೆಂಬಲಿಸುವುದು ಧರ್ಮಗಳ ಮೇಲಿನ ಪ್ರೀತಿಯಿಂದ ಅಲ್ಲ. ಯಾಕೆಂದರೆ ಪಟಾಕಿಗಳು ಹುಟ್ಟುವ ಮೊದಲೇ ಈ ಹಬ್ಬಗಳು ಹುಟ್ಟಿವೆ. ಇವರು ಬೆಂಬಲಿಸುತ್ತಿರುವುದು ಪಟಾಕಿಗಳ ಹಿಂದಿರುವ ಮಾಫಿಯಾವನ್ನು ಈ ಪಟಾಕಿ ಉದ್ಯಮದೊಂದಿಗೆ ಭಾರೀ ಅಕ್ರಮಗಳು ತಳಕು ಹಾಕಿಕೊಂಡಿವೆ. ಮುಖ್ಯವಾಗಿ, ಮಹಿಳೆಯರು ಮತ್ತು ಮಕ್ಕಳನ್ನು ಪೋಷಿಸುವುದರಲ್ಲಿ ಈ ಪಟಾಕಿ ಉದ್ಯಮ ಕುಖ್ಯಾತವಾಗಿವೆ. ಇದೇ ಸಂದರ್ಭದಲ್ಲಿ ಪಟಾಕಿಗಳ ಹೆಸರಿನಲ್ಲಿಯೇ ಅಕ್ರಮ ಸ್ಫೋಟಕಗಳನ್ನು ತಯಾರಿಸುವುದು, ಅವುಗಳನ್ನು ದಾಸ್ತಾನು ಮಾಡುವ ಕೆಲಸಗಳೂ ವ್ಯಾಪಕವಾಗಿ ನಡೆಯುತ್ತಿವೆ. ಬೃಹತ್ ಕಲ್ಲುಕೋರೆ ಗಣಿಗಾರಿಕೆಗಳು ಮತ್ತು ಪಟಾಕಿ ಉದ್ಯಮಗಳ ನಡುವೆ ಅನೈತಿಕ ಸಂಬಂಧಗಳಿವೆ. ಈ ಸಂಬಂಧಗಳ ಮಧ್ಯವರ್ತಿಗಳಾಗಿ ರಾಜಕಾರಣಿಗಳು ಕೆಲಸ ಮಾಡುತ್ತಿರುವ ಕಾರಣದಿಂದ ಪಟಾಕಿ ಉದ್ಯಮವನ್ನು ಇವರು ಜೀವಂತವಾಗಿದಲು ಬಯಸಿದ್ದಾರೆ. ನೆಪಕ್ಕೆ ಧರ್ಮದ ಹೆಸರನ್ನು ಹಬ್ಬಗಳ ಹೆಸರುಗಳನ್ನು ಬಳಸುತ್ತಿದ್ದಾರೆ.

ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ
ಹಾಗೂ
ವಿಮರ್ಶಕರು

ಭಾರತರತ್ನ ಪಂಡಿತ್ ಜವಾಹರ್ ಲಾಲ್ ನೆಹರುರವರ 135ನೇ ವರ್ಷದ ಜನ್ಮಜಯಂತಿ

• ಉದಯವಾಹಿನಿ, ವಿಶೇಷ



ಪಂಡಿತ್ ಜವಾಹರ್ ಲಾಲ್ ನೆಹರೂಜಿಯವರು 1889 ನವಂಬರ್ 14 ರಂದು ತಂದೆ ಮೋತಿಲಾಲ್ ನೆಹರು ಮತ್ತು ತಾಯಿ ಸ್ವರೂಪರಾಣಿರವರ ಮಗನಾಗಿ ಜನಿಸುತ್ತಾರೆ.

ಚಿಕ್ಕವಯಸ್ಸಿನಿಂದ ಸಂಸ್ಕಾರಗಳ ಜೊತೆಗೆ ಉನ್ನತ-ಗುಣಮಟ್ಟದ ಶಿಕ್ಷಣವನ್ನು ದೇಶ-ವಿದೇಶಗಳಲ್ಲಿ ಪಡೆದರು. ತಂದೆ ಜೊತೆಯಲ್ಲಿ ವಕೀಲ ವೃತ್ತಿಯನ್ನು ಮಾಡುತ್ತಿರುವಾಗ, 1919ರಲ್ಲಿ ಪಂಜಾಬಿನ ಜಲಿಯನ್ ವಾಲ್ ಬಾಗ್ ನಲ್ಲಿ ಬ್ರಿಟೀಷರು ನಡೆಸಿದ ಪೈಶಾಚಿಕ ಹತ್ಯಾಕಾಂಡವನ್ನು ವಿರೋಧಿಸಿ, ಅದರಿಂದ ಪ್ರಭಾವಿತರಾಗಿ ಗಾಂಧೀಜಿ ಮೊದಲುಗೊಂಡು ಇತರೆ ನಾಯಕರೊಂದಿಗೆ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಅನೇಕ ಸಲ ಸೆರೆಮನೆವಾಸ ಅನುಭವಿಸಿದರು. ನಂತರ ಸಕ್ರಿಯವಾಗಿ ಸ್ವಾತಂತ್ರ್ಯ ಹೋರಾಟದ ಚಳುವಳಿಯಲ್ಲಿ ಭಾಗವಹಿಸಿದರು. ನೆಹರುರವರು ಕಮಲ ರೊಂದಿಗೆ ವಿವಾಹ ವಾಗುತ್ತಾರೆ ಇವರಿಗೆ ಏಕೈಕ ಪುತ್ರಿ ಇಂದಿರಾ ಗಾಂಧಿ. ಕಮಲಾರವರ ಆರೋಗ್ಯ ಹದಗೆಟ್ಟು ಗುಣಮುಖರಾಗದೇ 1936 ರಲ್ಲಿ ತೀರಿಕೊಂಡರು. ಆಗ ನೆಹರುರವರಿಗೆ 47 ವರ್ಷ ವಯಸ್ಸಾಗಿತ್ತು. 1929 ರಲ್ಲಿ ಕಾಂಗ್ರೇಸ್ಸಿನ ಅಧ್ಯಕ್ಷರಾಗಿ ಆಯ್ಕೆಯಾದರು. 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರಿಯವಾಗಿ ಎಲ್ಲಾ ಮುಖಂಡರ ಜೊತೆಯಲ್ಲಿ ಭಾಗವಹಿಸಿದರು. ಸ್ವಾತಂತ್ರ್ಯ ಹೋರಾಟದ ಫಲದಿಂದಾಗಿ, 1947 ಆಗಸ್ಟ್ 15 ರಂದು ಭಾರತ ಸ್ವಾತಂತ್ರ್ಯ ಪಡೆಯಿತು. ಸ್ವಾತಂತ್ರ ಭಾರತದ ಪ್ರಥಮ ಪ್ರಧಾನಮಂತ್ರಿಯಾಗಿ ತನ್ನ 58 ನೇ ವಯಸ್ಸಿನಲ್ಲಿ ಆಯ್ಕೆಯಾಗಿ ಪ್ರಮಾಣವಚನ ಸ್ವೀಕರಿಸಿದರು. ಇವರು ಒಬ್ಬ ದಕ್ಷ ಆಡಳಿತಗಾರರು, ಬುದ್ಧಿಶಾಲಿ, ಕ್ರಿಯಾಶಾಲಿ, ತೀಕ್ಷ್ಣ ವಿಚಾರಮತಿಗಳಾಗಿದ್ದು, ವೈಜ್ಞಾನಿಕ, ಸೈದ್ಧಾಂತಿಕ, ವೈಚಾರಿಕ, ಇತಿಹಾಸ ಪ್ರಜ್ಞೆ ಉಳ್ಳವರಾಗಿ ಜಾಗತಿಕ ದೃಷ್ಟಿಕೋನ ಹೊಂದಿದ್ದ ಪ್ರತಿಭಾವಂತ ರಾಜಕಾರಣಿಯಾಗಿದ್ದರು.

1955 ರಲ್ಲಿ ನೆಹರುರವರಿಗೆ ಭಾರತ ಸರ್ಕಾರಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು. ನೆಹರೂರವರು 1964 ಮೇ 27 ರಂದು ತನ್ನ 75ನೇ ವಯಸ್ಸಿನಲ್ಲಿ ವಯೋಸಹಜದಿಂದ ನಿಧನರಾದರು. ನೆಹರೂರವರು ಭಾರತದ ಮಕ್ಕಳನ್ನು ಬಹುವಾಗಿ ಪ್ರೀತಿಸುತ್ತಿದ್ದರು. ಅವರ ಹುಟ್ಟುಹಬ್ಬದ ದಿನವನ್ನು ಮಕ್ಕಳ ದಿನಾಚರಣೆಯಾಗಿ ಆಚರಿಸಬೇಕೆಂದು ಅವರ ಆತ್ಮಕಥೆಯಲ್ಲಿ ಪ್ರತಿ ಬಿಂಬಿಸಿರುತ್ತಾರೆ.

ನೆಹರು ಅವರು ತಮ್ಮ ನೇರನುಡಿ, ದೂರದೃಷ್ಟಿ, ದಿಟ್ಟತನ, ಅಪಾರ ದೇಶಭಕ್ತಿ, ಜನ ಸಾಮಾನ್ಯರ ಕಲ್ಯಾಣಕ್ಕಾಗಿ ಕೈಗೊಂಡ ರಚನಾತ್ಮಕ ಕಾರ್ಯಗಳಿಂದಾಗಿ ಭಾರತೀಯ ಜನಮಾನಸದಲ್ಲಿ ಶಾಶ್ವತವಾಗಿ ಸ್ಥಾನಗಳಿಸಿದ್ದಾರೆ.

ಭಾರತದ ಪ್ರಧಾನಮಂತ್ರಿಯಾಗಿ 17 ವರ್ಷಗಳ ಕಾಲ ರಾಷ್ಟ್ರವನ್ನು ಪ್ರಗತಿ ಪಥದಲ್ಲಿ ಮುನ್ನೆಡೆಸಿದರು. ಆದ್ದರಿಂದ ರಾಷ್ಟ್ರಾದ್ಯಂತ ಇಂದು ನೆಹರುರವರ 135ನೇ ವರ್ಷದ ಜನ್ಮ ದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಆಚರಿಸುವುದು ನಮ್ಮೆಲ್ಲರ ಸೌಭಾಗ್ಯ.

ಇಂದಿನ ಮಕ್ಕಳು ಮುಂದಿನ ಭವಿಷ್ಯದ ಪ್ರಜೆಗಳು. ಮಕ್ಕಳ ಭವಿಷ್ಯ ಉಜ್ವಲವಾಗಲಿ, ಪ್ರಕಾಶಮಾನವಾಗಲಿ ಹಾಗೂ ರಾಷ್ಟ್ರದ ಶಕ್ತಿಯಾಗಿ ಬೆಳಗಲಿ ಎಂದು ಆಶಿಕೋಣ.

ಸಾಮಾಜಿಕ ಕಳಕಳಿ

ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

• ಉದಯವಾಹಿನಿ, ವಿಶೇಷ

ಮಹಿಳೆಯರು ಮಾಡುವರು ಕೆಲಸವನು ಹೆದರದಲೆ
ಸಹಿಸುತಲಿ ಬಹಳಷ್ಟು ನೋವುಗಳನು
ಕಹಿಯನ್ನು ಮರೆಯುತ್ತ ಸಾಗುವರು ಜೀವನದ
ದಹಿಸುತಲಿ ದ್ವೇಷವನು ಲಕ್ಷ್ಮಿದೇವಿ.....
ನಮ್ಮ ಸಮಾಜದಲ್ಲಿ ಮಹಿಳಾಪರ ಕಾರ್ಯಗಳು ಶ್ಲಾಘನೀಯವಾದದ್ದು. ಯಾವುದೇ ಕೆಲಸದಲ್ಲೂ ಯಾವುದೇ ಕ್ಷೇತ್ರದಲ್ಲೂ ಯಾರಿಗೂ ಹೆದರದಂತೆ ಸರಿ ಸಮಾನರಾಗಿ ಎಲ್ಲರಂತೆ ಕಾರ್ಯನಿರ್ವಹಿಸುವಲ್ಲಿ ಯಶಸ್ವಿಯನ್ನು ಪಡೆದವರು ನಮ್ಮ ಮಹಿಳಾ ಸಂಘ, ಸಂಸ್ಥೆಯವರು. ಪ್ರತಿಯೊಂದರಲ್ಲೂ ಸಮಾನತೆಯನ್ನು ಬೇಡುತ್ತಲೇ ಎಲ್ಲರೊಂದಿಗೆ ಕೆಲಸವನ್ನು ಮಾಡಿ ಕಾರ್ಯಗಳಲ್ಲಿ ಯಶಸ್ವಿಯನ್ನು ಪಡೆದು ಸೈ ಎಂದು

ದಿನಕ್ಕೊಂದು ಮುಕ್ತಕ -24

ತೋರಿಸಿಕೊಂಡಿದ್ದಾರೆ.
ಮಹಿಳೆ ಎಂದು ಜರಿಯದಲೇ
ಜೀವನದಿ ಬೆಲೆ ನೀಡಿ
ಸಾಧನೆಯ ಮಾಡುವಳು
ಯಾವುದಕ್ಕೂ ಹೆದರದಲೇ
ಪ್ರೋತ್ಸಾಹ ನೀಡುತಲಿ
ನಡೆದರದು ಶಕ್ತಿಯಲ್ಲಿ
ಬೇಡುವೆನು ಜಗದಲ್ಲಿ
ಸಹಕಾರ ನೀಡೆಂದು ಮಹಿಳೆಯು ಎಲ್ಲರಂತೆ ಕಾರ್ಯವನ್ನು ನಿರ್ವಹಿಸ ಬಲ್ಲಳು ಎಂಬುದನ್ನು ಪ್ರಸ್ತುತ ದಿನಮಾನದಲ್ಲಿ ತೋರಿಸಿಕೊಟ್ಟಿದ್ದಾಳೆ. ಸ್ತ್ರೀಶಕ್ತಿ ಎಷ್ಟರಮಟ್ಟಿಗೆ ಇದೆ ಎಂಬುದನ್ನು ಕಾರ್ಯಗಳಲ್ಲಿ ಸಾಬೀತು ಮಾಡಿ ತೋರಿಸಿದ್ದಾರೆ.
ಮಹಿಳೆಯರ ಸಬಲೀಕರಣ ಧ್ಯೇಯದೊಂದಿಗೆ ಸೇವೆಯಲ್ಲಿ ಮಹಿಳಾ ಸಾಧಕೀಯರ ಕಾರ್ಯ ಅಪಾರವಾದದ್ದು. ತನ್ನದೇ ಆದಂತಹ ಚಾಪನ್ನು ಎಲ್ಲಡೆಯೂ ಮೂಡಿಸುತ ಹೆಣ್ಣು ಮಕ್ಕಳಿಗೆ ಪ್ರೋತ್ಸಾಹದಕರಾಗಿದ್ದಾರೆ. ಇಂತಹ ಕಾರ್ಯಗಳನ್ನು ಗಮನಿಸಿ ಅವರನ್ನು ಪ್ರೋತ್ಸಾಹಿಸಬೇಕಾದದ್ದು ನಮ್ಮ ಸರ್ಕಾರದ ಕೆಲಸ. ಒಟ್ಟಾರೆ ಕಹಿಯನ್ನು ಮರೆಸಿ ಜೀವನದಲ್ಲಿ ದ್ವೇಷವನ್ನು ದಹಿಸುತ್ತ ಸಾಗಬೇಕು.

ಗ್ರಾಹಕರಿಗೆ ಉತ್ತಮ ಸೇವೆ ನೀಡುತ್ತಿರುವ ಮಾರುತಿ ಸುಜುಕಿ ಅರೇನಾ ವರುಣ್ ಮೋಟಾರ್ಸ್

• ಉದಯವಾಹಿನಿ,ಮಲ್ಲೇಶ್ವರ

ಮಾರುತಿ ಸುಜುಕಿ ಅರೇನಾದ ನಮ್ಮ ವರುಣ್ ಮೋಟಾರ್ಸ್ ಸಂಸ್ಥೆ ಅಖಿಲ ಭಾರತ ನಂಬರ್ ಒನ್ ಡೀಲರ್ ಎಂಬ ಹೆಗ್ಗಳಿಕೆ ಪಾತ್ರವಾಗಿದೆ. ಮಾರುತಿ ಸುಜುಕಿ ಅರೇನಾ ಡಿಜೈರ್ ಹೊಸ ಕಾರು ಸಾರ್ವಜನಿಕರಿಗೆ ಬುಕ್ಕಿಂಗ್ ಮಾಡಲು ಅಧಿಕೃತವಾಗಿ ಉದ್ಘಾಟನೆ ಕಾರ್ಯಕ್ರಮ. ಮಹಾನಟಿ ರನ್ನರ್ ಅಪ್ ವಿಜೇತರಾದ ಧನ್ಯ ಶ್ರೀ ಸುಜಿತ್ ವರುಣಾ ಮೋಟಾರ್ಸ್ ಸಂಸ್ಥೆಯ ಸಿ.ಇ.ಓ.ಕಲೀಮ್ ಶೇಕ್, ಮುಖ್ಯ ವ್ಯವಸ್ಥಾಪಕರು ದೀಲಿಪ್, ಎ.ಜಿ.ಎಮ್. ಯಜುರ್ವೇದ, ಬ್ರಾಂಚ್ ಮ್ಯಾನೇಜರ್ ಶಿವಪ್ರಸಾದ್ ಗ್ರೂಪ್ ಕ್ವಾಲಿಟಿ ಮ್ಯಾನೇಜರ್ ವಿಜಯಲಕ್ಷ್ಮಿ ಎಂ.ಜಿ. ಉದ್ಘಾಟನೆ ಮಾಡಿದರು.

ಭಾರತದ ಅತಿಡೊಡ್ಡ ಕಾರು ತಯಾರಿಕೆ ಕಂಪನಿಯಾದ ಮಾರುತಿ ಸುಜುಕಿ ಸಂಸ್ಥೆಯ ಅಧಿಕೃತ ಬೆಂಗಳೂರಿನ ಡೀಲರ್ ಆದ ನಮ್ಮ ವರುಣ್ ಮೋಟಾರ್ಸ್ ಸಂಸ್ಥೆಯು ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸುತ್ತಿದೆ.

• ಉದಯವಾಹಿನಿ ಚಿತ್ರ

ನಮ್ಮ ವರುಣ್ ಮೋಟಾರ್ಸ್ ಸಂಸ್ಥೆ ಗ್ರಾಹಕರು ಉತ್ತಮ ಸೇವೆ ನೀಡುತ್ತಾ ನಗರದಲ್ಲಿ 18 ಶೋರೂಮ್ ಗಳು ಇದೆ. ಇಲ್ಲಿ ಬರುವ ಗ್ರಾಹಕರಿಗೆ ಅಧಿಕಾರಿ ಮತ್ತು ಸಿಬ್ಬಂದಿಗಳು ಸಮರ್ಪಕ ಮಾಹಿತಿ ಕಾರಿನ ವೈಶಿಷ್ಟ ಮತ್ತು ಬಾಳಿಕೆ ಹಾಗೂ ವಿಶೇಷತೆಗಳನ್ನು ಮಾಹಿತಿಯನ್ನು ಗ್ರಾಹಕರಿಗೆ ಬೇಕಾದ ವಿವಿಧ ಶೈಲಿಯ ಕಾರನ್ನು ತಿಳಿಸಲು ಖರೀದಿಸಲು ಮಾಹಿತಿ ನೀಡುತ್ತಾರೆ. ಕಾರಿನ ಸರ್ವಿಸ್ ಉತ್ತಮವಾಗಿದೆ ಮತ್ತು ಕಾರಿನ ಕುರಿತು ಮಾಹಿತಿ ತತಕ್ಷಣ ಮಾಹಿತಿ ನೀಡುತ್ತಾರೆ.

ನಮ್ಮ ವರುಣ್ ಮೋಟಾರ್ಸ್ ಸೇವೆ ಪಡೆದ ಸಾವಿರಾರು ಕಾರು ಮಾಲೀಕರು ಸಂತೃಪ್ತಿ ಹೊಂದಿದ್ದಾರೆ, ಹೊಸ ಕಾರು ಖರೀದಿಸಲು, ಕಾರು ಖರೀದಿಸುವವರಿಗೆ ವರುಣ್ ಮೋಟಾರ್ಸ್

ಕನ್ನಡ ಉಳಿದದ್ದೇ ಉತ್ತರ ಕರ್ನಾಟಕ ಭಾಗದಿಂದ: ಬಸವರಾಜ ಹೊರಟ್ಟಿ

ಬೆಂಗಳೂರಿನಲ್ಲಿ ತಮಿಳು, ತೆಲುಗು ಭಾಷೆಯೇ ಹೆಚ್ಚಾಗಿದ್ದು, ಅಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಕಡಿಮೆ

• ಉದಯವಾಹಿನಿ, ಹುಬ್ಬಳ್ಳಿ

ಉದಯವಾಹಿನಿ ಚಿತ್ರ

ಸಾಂಸ್ಕೃತಿಕ, ಧೀಮಂತ ಪ್ರಶಸ್ತಿ ಪ್ರದಾನ

ಕರ್ನಾಟಕದಲ್ಲಿ ಕನ್ನಡ ಉಳಿದಿದೆ ಎಂದರೆ, ಅದು ಉತ್ತರ ಕರ್ನಾಟಕ ಭಾಗದ ಜನರಿಂದ ಮಾತ್ರ' ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು. ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ನಗರದ ಇಂದಿರಾ ಗಾಜಿನಮನೆ ಉದ್ಯಾನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸಾಂಸ್ಕೃತಿಕ, ಧೀಮಂತ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಬೆಂಗಳೂರಿನಲ್ಲಿ ತಮಿಳು, ತೆಲುಗು ಭಾಷೆಯೇ ಹೆಚ್ಚಾಗಿದ್ದು, ಅಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಆದರೆ, ಉತ್ತರ ಕರ್ನಾಟಕ ಭಾಗದ ಜನರು ಮಾತ್ರ ಕನ್ನಡ ಮಾತನಾಡುತ್ತ ಉಳಿಸಿ ಬೆಳೆಸುವಲ್ಲಿ ನಿರತರಾಗಿದ್ದಾರೆ. ಕರ್ನಾಟಕದಲ್ಲಿ ಕನ್ನಡ ಉಳಿದದ್ದೇ ಈ ಭಾಗದ ಜನರಿಂದ. ಇವರು ಮೂಲ ಕನ್ನಡಿಗರು ಎಂದು ಹೆಮ್ಮೆಯಿಂದ ಹೇಳುತ್ತೇನೆ' ಎಂದರು. ನವೆಂಬರ್ ಬಂದಾಗ ಮಾತ್ರ ಕನ್ನಡ ಅಭಿಮಾನ ಬೇಡ, ಅದು ವರ್ಷಪೂರ್ತಿ ಇರಬೇಕು. ರಾಜ್ಯದಲ್ಲಿರುವ ಕನ್ನಡ ಶಾಲೆಗಳನ್ನು ಮುಚ್ಚುವ ಪರಿಸ್ಥಿತಿ ಬಂದಿರುವುದು ನೋವಿನ ಸಂಗತಿ. ಕನ್ನಡ ಉಳಿಸಬೇಕಾದರೆ ಇಡೀ ವರ್ಷ ಕನ್ನಡದ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಈ ನಿಟ್ಟಿನಲ್ಲಿ ಪಾಲಿಕೆ ತಿಂಗಳಿಗೊಂದು ಕಾರ್ಯಕ್ರಮ ಹಮ್ಮಿಕೊಳ್ಳುವ ಯೋಜನೆ ರೂಪಿಸಲಿ' ಎಂದು ಹೊರಟ್ಟಿ ಸಲಹೆ ನೀಡಿದರು. ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, ಪ್ರಶಸ್ತಿಗೆ ಸಾಕಷ್ಟು ಮಂದಿ ಅರ್ಜಿ ಸಲ್ಲಿಸಿದ್ದು, ಅವರಲ್ಲಿ 69 ಮಂದಿಯನ್ನು ಧೀಮಂತ ಪ್ರಶಸ್ತಿಗೆ, 24 ಮಂದಿಯನ್ನು ಬಾಲಪುರಸ್ಕಾರ ಮತ್ತು ವಿಶೇಷ ಸಾಧನೆ ಪ್ರಶಸ್ತಿಗೆ ಪಾಲಿಕೆ ಆಯ್ಕೆ ಮಾಡಿದೆ. ಅರ್ಜಿ ಸಲ್ಲಿಸಿದವರೆಲ್ಲ ಉತ್ತಮ ಸಾಧನೆ ಮಾಡಿದವರೆ. ಆದರೆ, ನಿರ್ದಿಷ್ಟ ಸಂಖ್ಯೆಯಲ್ಲಿ ಮಾತ್ರ ಪ್ರಶಸ್ತಿ ನೀಡಬೇಕಿರುವುದರಿಂದ ಅವರಲ್ಲಿಯೇ ಅತ್ಯುತ್ತಮ ಎನ್ನುವವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಗೆ ಆಯ್ಕೆಯಾದವರೆಲ್ಲ ಸಮಾಜಕ್ಕೆ ಮಾದರಿ ವ್ಯಕ್ತಿಯಾಗಬೇಕು ಎಂದರು.

ಮೇಯರ್ ರಾಮಪ್ಪ ಬಡಿಗೇರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 69 ಸಾಧಕರಿಗೆ ಧೀಮಂತ ಪ್ರಶಸ್ತಿ ಹಾಗೂ ಆರು ಮಂದಿಗೆ ಬಾಲಪುರಸ್ಕಾರ, 18 ಮಂದಿಗೆ ವಿಶೇಷ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

> ಮಹಾನಗರ ಪಾಲಿಕೆ ವ್ಯಾಪ್ತಿಯ ಅಂಗಡಿಗಳ ಬೋರ್ಡ್‌ನಲ್ಲಿ ಶೇ 60 ಕನ್ನಡ ಭಾಷೆ ಇರಬೇಕೆನ್ನುವ ಆದೇಶವನ್ನು ಜಾರಿಗೆ ತರಲಾಗುತ್ತಿದೆ. ಕನ್ನಡ ಬೆಳೆಸಲು ಪ್ರೋತ್ಸಾಹಿಸಲು ವಿವಿಧ ಸಂಘಟನೆಗಳ ಜೊತೆ ಪಾಲಿಕೆ ಕೆಲಸ ಮಾಡುತ್ತಿದೆ. ಮನೆ-ಮನೆ ಕಸ ಸಂಗ್ರಹ ಕಾರ್ಯ ಅಚ್ಚುಕಟ್ಟಾಗಿ ಎಲ್ಲಾ ವಾರ್ಡ್‌ಗಳಲ್ಲಿ ನಡೆಯುತ್ತಿದೆ. ಅವಳಿನಗರದಲ್ಲಿ ಎಲ್ ಇಡಿ ಅಳವಡಿಕೆಗೆ ಸರ್ಕಾರ 94 ಕೋಟಿ ಅನುದಾನ ನೀಡಿದ್ದು ಶೀಘ್ರ ಟೆಂಡರ್ ಕರೆದು ಯೋಜನೆ ಅನುಷ್ಠಾನಕ್ಕೆ ಚಾಲನೆ ನೀಡಲಾಗುವುದು. ಪಾಲಿಕೆ ವ್ಯಾಪ್ತಿಯಲ್ಲಿ 400 ಕೋಟಿಯಷ್ಟು ಅನುದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ
-ಈಶ್ವರ ಉಳ್ಳಾಗಡ್ಡಿ, ಪಾಲಿಕೆ ಆಯುಕ್ತ

ತೇರು ಎಳೆಯುವ ಉತ್ಸವ

ರಾಜ್ಯದ ಎಲ್ಲಾ ಸ್ಥಾನಿಕ ಸಂಸ್ಥೆಗಳಿಗಿಂತ ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆ ಕನ್ನಡದ ತೇರು ಎಳೆಯುವ ಉತ್ಸವವನ್ನು ಸಮರ್ಥವಾಗಿ ಆಚರಿಸುತ್ತ ಬಂದಿದೆ. 1983ರ ಹಿಂದಿನ ಒಂಬತ್ತು ವರ್ಷ ಪಾಲಿಕೆಯಲ್ಲಿ ಜನಪ್ರತಿನಿಧಿಗಳ ಆಡಳಿತ ಇರಲಿಲ್ಲ. ಆಗ ಅಧಿಕಾರಿಗಳು ರಾಜ್ಯೋತ್ಸವವನ್ನು ಅಚ್ಚುಕಟ್ಟಾಗಿ ವಿಜೃಂಭಣೆಯಿಂದ ನಿರ್ವಹಿಸಿದ್ದರು' ಎಂದು ಮಾಜಿ ಮೇಯರ್ ಡಾ. ಪಾಂಡುರಂಗ ಪಾಟೀಲ ಸ್ಮರಿಸಿದರು.

ಭಾಗ್ಯ ಶ್ರೀ ಕಲಾತಂಡ 'ಹೊತ್ತಿತೋ ಹೊತ್ತಿತೋ ಕನ್ನಡದ ದೀಪ', ನೇತ್ರಾವತಿ ಕಲಾತಂಡ 'ಕನ್ನಡ ತಾಯಿಯ ಪಾದಕೆ ಶರಣು ನೃತ್ಯ ಪ್ರದರ್ಶಿಸಿದವು. ಉಪಮೇಯರ್ ದುರ್ಗಮ್ಮ ಬಿಜವಾಡ, ರಾಜಣ್ಣ ಕೊರವಿ, ಶಿವು ಹಿರೇಮಠ, ವೀರಣ್ಣ ಸವಡಿ, ರಾಜಶೇಖರ ಕಮತಿ, ತಿಪ್ಪಣ್ಣ ಮಜ್ಜಗಿ, ಆರೋಗ್ಯಾಧಿಕಾರಿ ಡಾ. ಶ್ರೀಧರ ದಂಡಪ್ಪನವರ ಇದ್ದರು.

ಶ್ರೀ ಜಡೆ ಶಂಕರ ಲಿಂಗ ದೇವಸ್ಥಾನದ ಮೂರ್ತಿಗಳ ಮೆರವಣಿಗೆ

• ಉದಯವಾಹಿನಿ, ಸಿಂಧನೂರು

ಉದಯವಾಹಿನಿ ಚಿತ್ರ

ನಾಗಲೀಕರ ಸಮಾಜದ ಕುಲದೈವ ಶ್ರೀ ಜಡೆ ಶಂಕರ ಲಿಂಗ ದೇವಸ್ಥಾನದ ಮೂರ್ತಿಗಳ ಮೆರವಣಿಗೆ ನಗರದ ಕೋಟೆ ಈರಣ್ಣ ದೇವಸ್ಥಾನದಿಂದ ಶ್ರೀ ಜಡೆ ಶಂಕರಲಿಂಗ ದೇವಸ್ಥಾನದವರೆಗೆ ಬುಧುವಾರ ಬೆಳಗ್ಗೆ ಅದ್ದೂರಿಯಾಗಿ ಜರುಗಿತು. ನಗರದ ಕೋಟೆ ಈರಣ್ಣ ದೇವಸ್ಥಾನದಿಂದ ಪ್ರಾರಂಭವಾದ ಮೆರವಣಿಗೆ ಚನ್ನಮ್ಮ ವೃತ್ತ, ಹಳೇ ಬಜಾರ್, ಟಿಪ್ಪು ಸುಲ್ತಾನ್ ವೃತ್ತ ಮೂಲಕ ಬಪ್ಪೂರ ರಸ್ತೆಯಲ್ಲಿರುವ ಶ್ರೀ ಜಡೆ ಶಂಕರಲಿಂಗ ದೇವಸ್ಥಾನದವರೆಗೆ ಮಹಿಳೆಯರ ಪೂರ್ಣ ಕುಂಭ, ಕಳಸ, ವೇದ ಘೋಷಗಳು ಮತ್ತು ವೀರಗಾಸೆ ಹಾಗೂ ವಾದ್ಯ-ಬಾಜಾ ಭಜಂತ್ರಿಗಳೊಂದಿಗೆ ಶ್ರೀ ಜಡೆ ಶಂಕರಲಿಂಗ, ನಂದಿ ಮತ್ತು ಗಣೇಶ ಮೂರ್ತಿಗಳು ಮೆರವಣಿಗೆ ಅದ್ದೂರಿಯಾಗಿ ನಡೆಯಿತು.

ಮೆರವಣಿಗೆಯಲ್ಲಿ ಪುರವಂತ ಸೇವೆ ಆಕರ್ಷಣಿಯವಾಗಿದ್ದರೆ. ಮಹಿಳೆಯರ ನೃತ್ಯ ನೋಡಗರ ಗಮನಸೆಳೆಯಿತು. ನಾಗಲೀಕರ ಸಮಾಜದ ತಾಲ್ಲೂಕಾಧ್ಯಕ್ಷ ಎಲ್. ಅಮರೇಶಪ್ಪ ನಾಗಲೀಕರ, ಮಾಜಿ ಅಧ್ಯಕ್ಷ ಶಿವರಾಜ, ಮುಖಂಡರಾದ ಅನೀಲ್ ಕವಿಶೆಟ್ಟಿ ಹುಬ್ಬಳ್ಳಿ, ಮಹಾಂತಪ್ಪ ಚನ್ನಿ ಇಲಕಲ್, ಲಕ್ಷಯ್ಯ ಸ್ವಾಮಿ, (ಪತ್ರಿಸ್ವಾಮಿ) ಚನ್ನಯ್ಯ ಸ್ವಾಮಿ ಕಲ್ಮಠ, ಬಸವರಾಜ ಗದಗ ಖಾನಾವಳಿ, ಶಿವಪುತ್ರ ಧನಶೆಟ್ಟಿ, ಪ್ರಶಾಂತ್ ನಾಗಲೀಕರ, ಶರಣಪ್ಪ ಹಾರಾಪೂರ, ಸಂಗಪ್ಪ ಗಿಡದ, ಅಂದಾನಪ್ಪ ನಾಗಲೀಕರ, ರವಿ ಕಂದುಕೂರು, ರಮೇಶ ಟೀಲರ್, ವಿರೇಶ ಗಬ್ಬೂರು, ಸಂಘದ ಸುರೇಶ ಸೇರಿದಂತೆ ವೀರಶೈವ ನಾಗಲೀಕರ ಸಮಾಜದ ನೂರಾರು ಬಾಂಧವರು ಪಾಲ್ಗೊಂಡಿದ್ದರು.

ಪಟ್ಟಣದಲ್ಲಿ ಸಾಹಿತ್ಯ ವಾತಾವರಣ ನಿರ್ಮಾಣ: ಕೊಟ್ರೇಶ ಅಂಗಡಿ

• ಉದಯವಾಹಿನಿ, ಮುಂಡರಗಿ

ಉದಯವಾಹಿನಿ ಚಿತ್ರ

ಹಿಂದೆ ಧಾರವಾಡದಲ್ಲಿ ನಿಂತು ಎಲ್ಲಿಯಾದರೂ ಕಲ್ಲೆಸೆದರೆ ಅದು ಒಬ್ಬ ಕವಿಯ ಮನೆಯ ಮೇಲೆ ಬೀಳುತ್ತಿತ್ತು. ಅಂತಹ ಸಾಹಿತ್ಯ ವಾತಾವರಣ ಈಗ ನಮ್ಮ ಪಟ್ಟಣದಲ್ಲಿ ನಿರ್ಮಾಣಗೊಂಡಿರುವುದು ಸಂತಸದ ಸಂಗತಿಯಾಗಿದೆ' ಎಂದು ವ್ಯಾಪಾರಿ ಕೊಟ್ರೇಶ ಅಂಗಡಿ ಹೇಳಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆಗಳು ಪಟ್ಟಣದ ಚೈತನ್ಯ ಶಿಕ್ಷಣ ಸಂಸ್ಥೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಶರಣ ಚಿಂತನ ಮಾಲೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ತಾಲ್ಲೂಕಿನ ವಿವಿಧ ಕನ್ನಡ ಸಂಘಟನೆಗಳು ಕೂಡಿಕೊಂಡು ಉಪೇಕ್ಷಿತ ವಚನಕಾರರ ಕುರಿತು ಪ್ರತಿ 15 ದಿನಗಳಿಗೊಮ್ಮೆ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಸುತ್ತಿರುವುದು ಸಂತಸದ ಸಂಗತಿಯಾಗಿದೆ. ಇಂತಹ ಕಾರ್ಯಕ್ರಮಗಳ ಮೂಲಕ ತೆರೆಮರೆಯ ವಚನಕಾರರನ್ನು ಪರಿಚಯಿಸುತ್ತಿರುವುದು ಸ್ವಾಗತಾರ್ಹ ಎಂದು ತಿಳಿಸಿದರು. ಮುಖ್ಯೋಪಾಧ್ಯಾಯ ಯುವರಾಜ ಮುಂಡರಗಿ ಮಾತನಾಡಿ, 12ನೇ ಶತಮಾನ ಸೇರಿದಂತೆ ಹಲವಾರು ಕಾಲಘಟ್ಟಗಳಲ್ಲಿ ಹಲವಾರು ಶರಣರು ವಚನ ಹಾಗೂ ಮತ್ತಿತರ ಸಾಹಿತ್ಯವನ್ನು ರಚಿಸಿದ್ದಾರೆ. ಅವರೆಲ್ಲ ಸಾಹಿತ್ಯ ಕ್ಷೇತ್ರಕ್ಕೆ ಅಪರಿಚಿತರಾಗಿದ್ದು, ಅಂತಹ ಉಪೇಕ್ಷಿತ ವಚನಕಾರರ ಮೇಲೆ ಬೆಳಕು ಚೆಲ್ಲಬೇಕಿದೆ. ಮುಕ್ತಾಯಕ್ಕನಂತಹ ಶರಣೆಯರ ಜೀವನಾದರ್ಶಗಳನ್ನು ನಾವೆಲ್ಲ ಅರಿತುಕೊಳ್ಳಬೇಕಿದೆ ಎಂದರು.

ಶಕುಂತಲಾ ಮುಂಡರಗಿ ಅವರು ಕನ್ನಡ ನಾಡು ನುಡಿಯ ಕುರಿತಾದ ಸ್ವರಚಿತ ಕವನವನ್ನು ವಾಚಿಸಿದರು.

> ಶರಣ ಚಿಂತನ ಮಾಲಿಕೆ ಕಾರ್ಯಕ್ರಮದಲ್ಲಿ ಉಪೇಕ್ಷಿತ ವಚನಕಾರರ ಕುರಿತು ನಿಯಮಿತವಾಗಿ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಅಪರಿಚಿತ ವಚನಕಾರ ಬದುಕು ಹಾಗೂ ಬರಹಗಳ ಕುರಿತು ಚಿಂತನ-ಮಂಥನ ನಡೆಸುತ್ತಿರುವುದು ಶ್ಲಾಘನೀಯ. ಸಾಹಿತ್ಯಾಸಕ್ತರು ಇದರ ಸದುಪಯೋಗ ಪಡೆದುಕೊಳ್ಳಬೇಕು
- ಎಂ.ಜಿ.ಗಚ್ಚಣ್ಣವರ
ತಾಲ್ಲೂಕು ಕಸಾಪ ಅಧ್ಯಕ್ಷ

ಹುಲಿಗೆಮ್ಮ ಭಜಂತ್ರಿ ಪ್ರಾರ್ಥಿಸಿದರು. ಚೈತನ್ಯ ಶಿಕ್ಷಣ ಸಂಸ್ಥೆಯ ನಿರ್ದೇಶಕಿ ವೀಣಾ ಪಾಟೀಲ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಸಾಪ ಕಾರ್ಯದರ್ಶಿ ಮಂಜುನಾಥ ಮುಧೋಳ ನಿರೂಪಿಸಿ, ವಂದಿಸಿದರು.

• ಉದಯವಾಹಿನಿ, ಕೊಪ್ಪಳ

ಮತ ಗಳಿಕೆಗೆ ಅಭ್ಯರ್ಥಿಗಳ ಕಸರತ್ತು

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಗೆ 44 ನೌಕರರು ಅವಿರೋಧವಾಗಿ ಕಾರ್ಯಕಾರಿ ನಿರ್ದೇಶಕರಾಗಿ ಆಯ್ಕೆಯಾದರೆ, ಇನ್ನುಳಿದ 21 ಸ್ಥಾನಗಳಲ್ಲಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ನಡುವೆ ಮತ ಗಳಿಕೆಗೆ ಕಸರತ್ತು ಜೋರಾಗಿದೆ. ಒಟ್ಟು 65 ಕಾರ್ಯಕಾರಿ ನಿರ್ದೇಶಕರನ್ನು ಆಯ್ಕೆ ಮಾಡಲಾಗುತ್ತಿದ್ದು, ಈಗ ಉಳಿದ 21 ಸ್ಥಾನಗಳಿಗೆ 14 ಇಲಾಖೆಗಳಿಂದ 46 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ನವೆಂಬರ್ 16ರಂದು ಮತದಾನ ನಡೆಯಲಿದೆ. ನಿರ್ದೇಶಕರ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಕಾರ್ಯಕಾರಿ ಸಮಿತಿಯ ನೂತನ ನಿರ್ದೇಶಕರು ಹಾಗೂ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ನೂತನ ಅಧ್ಯಕ್ಷರು ಸೇರಿ ಜಿಲ್ಲಾಧ್ಯಕ್ಷರನ್ನು ಆಯ್ಕೆ ಮಾಡಲು ಮತ ಚಲಾಯಿಸುತ್ತಾರೆ. ಶತಾಯು ಗತಾಯು ಈ ಬಾರಿ ಗೆಲ್ಲಲೇಬೇಕು ಎಂದು ಜಿದ್ದಿಗೆ ಬಿದ್ದಿರುವ ಸ್ಪರ್ಧೆಯಲ್ಲಿರುವ ನೌಕರರಲ್ಲಿ ಬಹಳಷ್ಟು ಜನ ತಮ್ಮ ಕರ್ತವ್ಯಕ್ಕೆ ರಜೆ ಹಾಕಿ ತಮ್ಮ ಇಲಾಖೆಯ ಮತದಾರರನ್ನು ಮನವೊಲಿಸುವ ಪ್ರಯತ್ನ ಮಾಡುತ್ತಿದ್ದಾರೆ. ಕೆಲವರು ಮನೆಮನೆಗೆ ಹೋಗಿ ಮತ ಕೇಳಿದರೆ, ಇನ್ನೂ ಕೆಲವರು ಕಚೇರಿಗೆ ತೆರಳಿ ನಮಗೇ ಮತ ನೀಡುವಂತೆ ಮನವಿ ಮಾಡುತ್ತಿದ್ದಾರೆ. ಒಟ್ಟು 3,174 ಮತದಾರರು ಇದ್ದಾರೆ. ಶಿಕ್ಷಣ ಇಲಾಖೆಯಲ್ಲಿ ಏಳು ಸ್ಥಾನಗಳು ಇರುವ ಕಾರಣ ಅಲ್ಲಿ ಸ್ಪರ್ಧಿಗಳ ನಡುವೆ ಪೈಪೋಟಿಯೂ ಹೆಚ್ಚಿದೆ.

ಚುನಾವಣೆ ಘೋಷಣೆಯಾದ ದಿನದಿಂದಲೂ ವಿವಿಧ ಇಲಾಖೆಗಳ ನೌಕರರು ತಮ್ಮ ಆಪ್ತ ವಲಯದ ಸಹದ್ಯೋಗಿಗಳ ಸಹಕಾರದಿಂದಾಗಿ 44 ಸ್ಥಾನಗಳಲ್ಲಿ ಅವಿರೋಧ ಆಯ್ಕೆ ಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಕೆಲವು ಸ್ಥಾನಗಳಲ್ಲಿ ಅವಿರೋಧ ಆಯ್ಕೆ ಆಗುವುದು ನಿಶ್ಚಿತವೇ ಆಗಿತ್ತು. ಉಳಿದ ಸ್ಥಾನಗಳಿಗೆ ಸ್ಪರ್ಧೆ ಎದುರಾಗುವುದು ಮೊದಲೇ ತಿಳಿದಿದ್ದರಿಂದ ಆ ಸ್ಪರ್ಧೆ ಚುರುಕು ಪಡೆದುಕೊಂಡಿದೆ.

ತಮ್ಮ ಎದುರಾಳಿ ಯಾರು ಎನ್ನುವ ಮಾಹಿತಿಯೂ ನಿಚ್ಚಳವಾಗಿದೆ. ಮನೆಮನೆಗೆ ತೆರಳಿ ಮತ ಕೇಳುವ ಜೊತೆಗೆ ಕಷ್ಟಸುಖ ವಿಚಾರಿಸುವುದು, ಔಪಚಾರಿಕ ಮಾತುಗಳನ್ನಾಡುವ ಜೊತೆಗೆ 'ನಮಗೊಂದು ಅವಕಾಶ ಮಾಡಿಕೊಡಿ' ಎನ್ನುವ ಬೇಡಿಕೆಯನ್ನೂ ಮುಂದಿಡುತ್ತಿದ್ದಾರೆ. ಮನೆ ಮನೆ ಬೇಟೆ ಒಂದೆಡೆಯಾದರೆ, ಇನ್ನೊಂದೆಡೆ ಕರಪತ್ರಗಳನ್ನು ಮುದ್ರಿಸಿ ಕೊಡುತ್ತಿದ್ದಾರೆ. ಇನ್ನು ಕೆಲವರು ಸಾಮಾಜಿಕ ತಾಣಗಳನ್ನು ಬಳಸಿಕೊಂಡು ಪ್ರಚಾರ ಕಾರ್ಯ ಸುಲಭ ಮಾಡಿಕೊಳ್ಳುತ್ತಿರುವ ಚಿತ್ರಣ ಕಂಡುಬರುತ್ತಿದೆ. ಶಿಕ್ಷಕರ ಕ್ಷೇತ್ರದ ಒಟ್ಟು ಆರು ಸ್ಥಾನಗಳಿಗೆ ಚುರುಕಿನ ಪೈಪೋಟಿ ಏರ್ಪಟ್ಟಿದ್ದು ಪ್ರಾಥಮಿಕ ವಿಭಾಗದ ಐದು ಸ್ಥಾನಗಳಿಗೆ ಹತ್ತು ಜನ ಹಾಗೂ ಪದವೀಧರ ಕ್ಷೇತ್ರದ ಒಂದು ಸ್ಥಾನಕ್ಕೆ ಇಬ್ಬರು ನಾಮಪತ್ರ ಸಲ್ಲಿಸಿದ್ದಾರೆ.

> ಕನ್ನಡ ವರ್ಣಮಾಲೆಗೆ ಅನುಗುಣವಾಗಿ ಹೆಸರುಗಳನ್ನು ಕ್ರಮವಾಗಿ ಬ್ಯಾಲೆಟ್ ಪೇಪರ್ ಮೇಲೆ ಮುದ್ರಿಸಿ ಮತದಾನ ಪ್ರಕ್ರಿಯೆ ನಡೆಸಲಾಗುತ್ತದೆ. 16ರಂದು ಮತದಾನ ನಡೆಯಲಿದೆ.
-ಗೋಪಾಲರಾವ್, ಚುನಾವಣಾಧಿಕಾರಿ

ಜನಪರ ಸಮಿತಿಯಿಂದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಆಚರಣೆ ಯಶಸ್ವಿಗೊಳಿಸಿ: ಶಿವಪ್ರಕಾಶ ಕಟ್ಟಿಮನಿ

• ಉದಯವಾಹಿನಿ,ಚಿಂಚೋಳಿ

ಪಟ್ಟಣದಲ್ಲಿ ನವೆಂಬರ್ 15 ರಂದು ಸರಕಾರಿ ಪ್ರಥಮ ದರ್ಜೆ ಮಹಾ ವಿದ್ಯಾಲಯದಲ್ಲಿ ಬೆಳಿಗ್ಗೆ 10.30ಕ್ಕೆ ನವ ಕರ್ನಾಟಕ ಜನಪರ ಸಮಿತಿ ವತಿಯಿಂದ 69ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಣೆ ಮಾಡಲಾಗುತ್ತಿದೆ ಎಂದು ನವ ಕರ್ನಾಟಕ ಜನಪರ ಸಮಿತಿ ಅಧ್ಯಕ್ಷ ಶಿವಪ್ರಕಾಶ ಕಟ್ಟಿಮನಿ ತಿಳಿಸಿದ್ದಾರೆ. ಪತ್ರಿಕಾ ಪ್ರಕಟನೆ ಹೊರಡಿಸಿದ ಅವರು, ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಗಣ್ಯರು, ಹೋರಾಟಗಾರರು, ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಲಿದ್ದಾರೆ.

ಕಾರಣ ಈ ಕಾರ್ಯಕ್ರಮಕ್ಕೆ ತಾಲ್ಲೂಕಿನ ವಿದ್ಯಾರ್ಥಿಗಳು, ಯುವಕರು, ಕನ್ನಡಪರ ಸಂಘಟನೆಗಳು, ಚಿಂತಕರು, ಹೋರಾಟಗಾರರು, ಬುದ್ಧಿಜೀವಿಗಳು ಸೇರಿದಂತೆ ಎಲ್ಲಾ ನಾಗರೀಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದ್ದಾರೆ.

ಕಾರ್ಯಕ್ರಮದ ಕರಪತ್ರಗಳು ಬಿಡುಗಡೆ ಮಾಡಲಾಗಿದ್ದು, ಕಾರ್ಯಕ್ರಮದ ಅಂಗವಾಗಿ ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಿದ್ದು, ಇದರಲ್ಲಿ ವಿಜೇತರಾದ ಮಕ್ಕಳಿಗೆ ಕಾರ್ಯಕ್ರಮದಲ್ಲಿ ಬಹುಮಾನ ವಿತರಣೆ ಮತ್ತು ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ, ಇದೆ 15ರಂದು ಬೆಳಿಗ್ಗೆ 10 ಗಂಟೆಗೆ ಬೈಕ್ ರ್‍ಯಾಲಿಯನ್ನು ಕೂಡ ಹಮ್ಮಿಕೊಂಡಿದ್ದು, ರ್‍ಯಾಲಿಯು ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ರವರ ವೃತ್ತದಿಂದ ಚಂದಾಪುರ ಪಟ್ಟಣದ ಮಹಾತ್ಮ ಗಾಂಧೀಜಿಯವರ ವೃತ್ತ ಮೂಲಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಕ್ಕೆ ಆಗಮಿಸಲಿದೆ.

ಈ ಬೈಕ್ ರ್‍ಯಾಲಿಯಲ್ಲಿ ಆಸಕ್ತರಾದ ಕನ್ನಡ ಪರ ಸಂಘಟನೆಗಳು, ಬುದ್ಧಿಜೀವಿಗಳು ರ್‍ಯಾಲಿಯಲ್ಲಿ ಭಾಗವಹಿಸಿ ವೈಭವವನ್ನು ಹೆಚ್ಚಿಸಿ ಸಂಪೂರ್ಣ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಮನವಿ ಮಾಡಿದ್ದಾರೆ.

ಪರೀಕ್ಷೆಗಾಗಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲು ಸಿದ್ಧ

• ಉದಯವಾಹಿನಿ, ಲಕ್ಷ್ಮೇಶ್ವರ

ಉದಯವಾಹಿನಿ ಚಿತ್ರ

ಬರುವ ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಜರುಗಲಿರುವ ಎಸ್ಸೆಸ್ಸೆಲ್ಸಿ ಪರೀಕ್ಷೆಗಳಲ್ಲಿ ಮಕ್ಕಳನ್ನು ಸರ್ವ ರೀತಿಯಿಂದ ಸಜ್ಜುಗೊಳಿಸಲು ಇಲಾಖೆಯು 20 ಅಂಶಗಳ ಯೋಜನೆ ರೂಪಿಸಿದೆ ಎಂದು ಕ

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	01:30 ರಿಂದ 03:00
ಗುಳಿಕ ಕಾಲ	ಬೆಳಿಗ್ಗೆ	09:00 ರಿಂದ 10:30
ಯಮಗಂಡ ಕಾಲ	ಬೆಳಿಗ್ಗೆ	06:00 ರಿಂದ 07:30

ಮೇಷ ಶ್ರಮಪಡಿ, ಇದು ನಿಮ್ಮ ದಿನವಾದ್ದರಿಂದ ನೀವು ಖಂಡಿತವಾಗಿಯೂ ಅದೃಷ್ಟಶಾಲಿಯಾಗಿರುತ್ತೀರಿ. ಕೆಲಸದಲ್ಲಿ ನಿಮ್ಮ ಮೇಲಿನವರು ಇಂದು ದೇವದೂತರಂತೆ ಕೆಲಸ ಮಾಡುವಂತೆ ಕಾಣುತ್ತದೆ.

ವೃಷಭ ಒಬ್ಬ ಆಧ್ಯಾತ್ಮಿಕ ವ್ಯಕ್ತಿ ಆಶೀರ್ವಾದ ಮಾಡುತ್ತಾರೆ ಮತ್ತು ಮನಸ್ಸಿನ ಶಾಂತಿ ತರುತ್ತಾರೆ. ಕುಟುಂಬದ ಯಾವುದೇ ಸದಸ್ಯರ ಕಾಯಿಲೆ ಬೀಳುವ ಕಾರಣದಿಂದಾಗಿ ನೀವು ಆರ್ಥಿಕ ತೊಂದರೆಗೊಳಗಾಗಬಹುದು.

ಮಿಥುನ ವಯಸ್ಸಾದವರು ತಮ್ಮ ಆರೋಗ್ಯವನ್ನು ನೋಡಿಕೊಳ್ಳಬೇಕು. ನೀವು ಇಂದು ಹಣ ಉಳಿಸುವುದು ಕಷ್ಟ. ನೀವು ಇಂದು ಅತಿಯಾಗಿ ಖರ್ಚು ಮಾಡುವ ಅಥವಾ ನಿಮ್ಮ ಪರ್ಸ್ ಕಳೆದುಕೊಳ್ಳುವ ಸಾಧ್ಯತೆಗಳಿವೆ.

ಕರ್ಕಾಟಕ ವ್ಯಾಪಾರಿಗಳಿಗೆ ಇಂದು ವ್ಯಾಪಾರದಲ್ಲಿ ಹಾನಿ ಉಂಟಾಗಬಹುದು ಮತ್ತು ತಮ್ಮ ವ್ಯಾಪಾರವನ್ನು ಉತ್ತಮಗೊಳಿಸಲು ನೀವು ಹಣವನ್ನು ಖರ್ಚು ಮಾಡಬೇಕಾಗುತ್ತದೆ.

ಸಿಂಹ ನಿಮ್ಮ ನಿರಾಶಾದಾಯಕ ನಡವಳಿಕೆಯಂದಾಗಿ ನೀವು ಯಾವುದೇ ಪ್ರಗತಿಯನ್ನು ಹೊಂದಲು ಸಾಧ್ಯವಾಗುವುದಿಲ್ಲ. ಚಿಂತೆ ನಿಮ್ಮ ಚಿಂತನಾ ಶಕ್ತಿಯನ್ನು ಕುಂಠಿತಗೊಳಿಸಿದೆಯಂದು ಕಂಡುಕೊಳ್ಳಲು ಇದು ಸಕಾಲ.

ಕನ್ಯಾ ನಿಮ್ಮ ನಡುವಳಿಕೆ ಶತ್ರುಗಳ ಪಟ್ಟಿಯನ್ನು ಸುಧೀರ್ಘಗೊಳಿಸುತ್ತದೆ. ನಂತರ ಪಶ್ಚಾತ್ತಾಪಪಡುವಷ್ಟು ಕೆಟ್ಟದಾಗಿ ನೀವೇನಾದರೂ ಮಾಡುವಷ್ಟು ನೀವು ಕೋಪಗೊಳ್ಳುವಂತೆ ಮಾಡಲು ಯಾರಿಗೂ ಅವಕಾಶ ನೀಡಬೇಡಿ.

ತುಲಾ ನೀವು ಜೀವನವನ್ನು ಸಂತೋಷದಿಂದ ಅನುಭವಿಸಲು ಸಿದ್ಧವಾಗುತ್ತಿದ್ದ ಹಾಗೆ ನಿಮಗೆ ಸಂತೋಷ ಹಾಗೂ ಆನಂದ. ಬಾಕಿಯಿರುವ ವಿಷಯಗಳು ರಹಸ್ಯಮಯವಾಗುತ್ತವೆ ಮತ್ತು ವೆಚ್ಚಗಳು ನಿಮ್ಮ ಮನಸ್ಸನ್ನು ಆವರಿಸಿಕೊಳ್ಳುತ್ತವೆ.

ವೃಶ್ಚಿಕ ನೀವು ಇಂದು ಗಣನೀಯ ಪ್ರಮಾಣದ ಹಣವನ್ನು ಸಹ ಹೊಂದಿರುತ್ತೀರಿ ಮತ್ತು ಅದರೊಂದಿಗೆ ಮನಸ್ಸಿನ ಶಾಂತಿ ಇರುತ್ತದೆ. ಇಂದು ಹಾಜರಾಗುವ ಒಂದು ಸಾಮಾಜಿಕ ಸಮಾರಂಭದಲ್ಲಿ ನೀವೇ ಕೇಂದ್ರಬಿಂದುವಾಗಿರುತ್ತೀರಿ.

ಧನಸ್ಸು ಆರೋಗ್ಯ ಚೆನ್ನಾಗಿರುತ್ತದೆ. ಈ ರಾಶಿಚಕ್ರದ ಕೆಲವು ಜನರಿಗೆ ಇಂದು ಮಕ್ಕಳ ಬದಿಯಿಂದ ಆರ್ಥಿಕ ಲಾಭವನ್ನು ಪಡೆಯುವ ಭರವಸೆ ಇದೆ. ಇಂದು ನೀವು ನಿಮ್ಮ ಮಕ್ಕಳ ಮೇಲೆ ಹೆಮ್ಮೆಯನ್ನು ಅನುಭವಿಸುವಿರಿ.

ಮಕರ ಇಂದು ನಿಮ್ಮ ದುಂದುಗಾರಿಕೆಯ ಮೇಲೆ ನಿಮ್ಮ ಸಂಗಾತಿ ನಿಮಗೆ ಮಾತುಗಳು ಹೇಳಬಹುದು. ಕುಟುಂಬದ ಕಾರ್ಯಕ್ರಮದಲ್ಲಿ ಹೊಸ ಸ್ನೇಹಿತರು ಕಾಣುತ್ತಾರೆ. ಆದರೆ ನಿಮ್ಮ ಆಯ್ಕೆಯಲ್ಲಿ ಎಚ್ಚರಿಕೆಯಿಂದಿರಿ.

ಕುಂಭ ಮಕ್ಕಳಿಂದ ಅನಿರೀಕ್ಷಿತ ಸುದ್ದಿ ಸಂತೋಷದ ಕ್ಷಣಗಳನ್ನು ತರುತ್ತದೆ. ಧಾರ್ಮಿಕ ಮತ್ತು ಶುದ್ಧ ಪ್ರೀತಿಯನ್ನು ಅನುಭವಿಸಿ. ಇಂದು ಹೆಚ್ಚಿನ ಸಾಧನೆ ಮತ್ತು ಉನ್ನತ ಪ್ರೊಫೈಲ್‌ಗೆ ಒಂದು ಒಳ್ಳೆಯ ದಿನ.

ಮೀನ ಪ್ರೀತಿಪಾತ್ರರು ಪ್ರಣಯದ ಮೂಡ್‌ನಲ್ಲಿರುತ್ತಾರೆ. ಹೊಸ ವಿಷಯಗಳನ್ನು ಕಲಿಯುವ ನಿಮ್ಮ ಯೋಗ್ಯತೆ ಗಮನಾರ್ಹವಾಗಿದೆ. ಪ್ರವಾಸದ ಅವಕಾಶಗಳನ್ನು ಪರಿಶೋಧಿಸಬೇಕು.

ತೆರವಾಗದ ಬಸ್ ನಿಲ್ದಾಣ: ಕ್ರೀಡಾ ಚಟುವಟಿಕೆಗೆ ಹಿನ್ನಡೆ

ಮೈದಾನದ ಅರ್ಧದಷ್ಟು ಜಾಗವನ್ನು ಸಾರಿಗೆ ಸಂಸ್ಥೆ ಹಾಗೂ ಖಾಸಗಿಯವರ ತಾತ್ಕಾಲಿಕ ಬಸ್ ನಿಲ್ದಾಣಗಳೇ ಆವರಿಸಿಕೊಂಡಿವೆ

• ಉದಯವಾಹಿನಿ, ದಾವಣಗೆರೆ

ಕ್ರೀಡೆ ಹಾಗೂ ಶೈಕ್ಷಣಿಕ ಚಟುವಟಿಕೆಗಳಿಗೆ ಬಳಕೆಯಾಗಬೇಕಿದ್ದ ನಗರದ ಹೈಸ್ಕೂಲ್ ಮೈದಾನವು ಆಟಗಳಿಗಿಂತ ಹೆಚ್ಚಾಗಿ ಬೇರೆ ಬೇರೆ ಕಾರ್ಯಗಳಿಗೆ ಬಳಕೆಯಾಗುತ್ತಿದೆ. ವಿದ್ಯಾರ್ಥಿಗಳು ಸೇರಿದಂತೆ ಕ್ರೀಡಾಪಟುಗಳಿಗೆ ಮೀಸಲಾಗಿರಬೇಕಿದ್ದ ಹೈಸ್ಕೂಲ್ ಮೈದಾನದ ಅರ್ಧದಷ್ಟು ಜಾಗವನ್ನು ಸಾರಿಗೆ ಸಂಸ್ಥೆ ಹಾಗೂ ಖಾಸಗಿಯವರ ತಾತ್ಕಾಲಿಕ ಬಸ್ ನಿಲ್ದಾಣಗಳೇ ಆವರಿಸಿಕೊಂಡಿವೆ. ತಾತ್ಕಾಲಿಕ ಬಸ್ ನಿಲ್ದಾಣಗಳಿಂದ ಸರ್ಕಾರಿ ಹಾಗೂ ಖಾಸಗಿ ಬಸ್‌ಗಳು ಕಾರ್ಯಾಚರಣೆ ನಡೆಸುವುದನ್ನು ಸ್ಥಗಿತಗೊಳಿಸಿ ಒಂದೂವರೆ ತಿಂಗಳು ಕಳೆದರೂ, ನಿಲ್ದಾಣದ ಕಟ್ಟಡಗಳ ತೆರವು ಕಾರ್ಯ ಮಾತ್ರ ನಡೆಯುತ್ತಿಲ್ಲ. ಸದ್ಯಕ್ಕೆ ಬಸ್ ನಿಲ್ದಾಣಗಳ ತೆರವು ಕಾರ್ಯ ನಡೆಯುವ ಲಕ್ಷಣಗಳೂ ಕಾಣುತ್ತಿಲ್ಲ. ಬಸ್ ನಿಲ್ದಾಣವನ್ನು ತೆರವುಗೊಳಿಸಿ ಮೈದಾನವನ್ನು ಸುಸ್ಥಿತಿಗೆ ತರುವ ವಿಚಾರದಲ್ಲಿ ಮಹಾನಗರ ಪಾಲಿಕೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್ಆರ್‌ಟಿಸಿ) ಹಾಗೂ ದಾವಣಗೆರೆ ಸ್ಮಾರ್ಟ್‌ಸಿಟಿ ನಡುವೆ ನಡೆದ ತಿಕ್ಕಾಟ ಸದ್ಯಕ್ಕೆ ಮುಗಿದಿದ್ದರೂ, ನಿಲ್ದಾಣ ತೆರವುಗೊಳಿಸಲು ಮುಹೂರ್ತ ಮಾತ್ರ ನಿಗದಿಯಾಗಿಲ್ಲ.

ಪಾಲಿಕೆಯೇ ತೆರವು ಮಾಡಲಿ

ಹೈಸ್ಕೂಲ್ ಮೈದಾನದಲ್ಲಿ ನಿರ್ಮಿಸಲಾದ ಸರ್ಕಾರಿ ಬಸ್ ನಿಲ್ದಾಣವನ್ನು ಕೆಎಸ್ಆರ್‌ಟಿಸಿಯಿಂದ ಹಾಗೂ ಖಾಸಗಿ ಬಸ್ ನಿಲ್ದಾಣವನ್ನು ಸ್ಮಾರ್ಟ್‌ಸಿಟಿಯಿಂದ ತೆರವುಗೊಳಿಸಲು ನಿರ್ಧರಿಸಲಾಗಿದೆ. ಆದರೆ, ನಾನಾ ಕಾರಣಗಳಿಂದ ತೆರವು ಕಾರ್ಯಾಚರಣೆ ನಡೆಯುವುದು ಮತ್ತಷ್ಟು ವಿಳಂಬವಾಗಲಿದೆ.

ತಾತ್ಕಾಲಿಕ ಬಸ್ ನಿಲ್ದಾಣಗಳನ್ನು ತೆರವುಗೊಳಿಸಿ ಮೈದಾನವನ್ನು ಸುಸ್ಥಿತಿಗೆ ತರುವಂತೆ ನಗರದ ಕ್ರೀಡಾಪಟುಗಳು ನಿರಂತರವಾಗಿ ಆಗ್ರಹಿಸುತ್ತಲೇ ಇದ್ದಾರೆ. ಸರ್ಕಾರಿ ಪಿ.ಯು.ಸಿ ಕಾಲೇಜಿನಿಂದಲೂ ಈ ಬಗ್ಗೆ ಮನವಿ ಮಾಡಲಾಗಿದೆ.

ಸ್ಮಾರ್ಟ್‌ಸಿಟಿಯಿಂದಲೇ ತೆರವು ಕಾರ್ಯ ನಡೆಯಲಿ' ಎಂದು ಮಹಾನಗರ ಪಾಲಿಕೆ ಹೇಳಿದ್ದರೆ, 'ಪಾಲಿಕೆಯೇ ತೆರವು ಮಾಡಲಿ' ಎಂದು ಸ್ಮಾರ್ಟ್‌ಸಿಟಿ ತಿಳಿಸಿತ್ತು. ಈ ಬಗ್ಗೆ ಮಹಾನಗರ ಪಾಲಿಕೆಯ ಆಯುಕ್ತರಿಗೆ ಸ್ಮಾರ್ಟ್‌ಸಿಟಿ ವ್ಯವಸ್ಥಾಪಕರು ಪತ್ರವನ್ನೂ ಬರೆದಿದ್ದರು.

ಪಿ.ಬಿ. ರಸ್ತೆಯಲ್ಲಿ ದಾವಣಗೆರೆ ಸ್ಮಾರ್ಟ್‌ಸಿಟಿ ಅನುದಾನದಲ್ಲಿ ನೂತನವಾಗಿ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣ ಹಾಗೂ ಶಾಮನೂರು ಶಿವಶಂಕರಪ್ಪ ಖಾಸಗಿ ಬಸ್ ನಿಲ್ದಾಣ ನಿರ್ಮಿಸುವ ಉದ್ದೇಶದಿಂದ ಹೈಸ್ಕೂಲ್ ಮೈದಾನದಿಂದ ಬಸ್‌ಗಳ ಕಾರ್ಯಾಚರಣೆಗೆ ನಿರ್ಧರಿಸಲಾಗಿತ್ತು. ಈ ಕಾರಣಕ್ಕೆ 2019ರ ಡಿಸೆಂಬರ್‌ನಲ್ಲಿ ಹೈಸ್ಕೂಲ್ ಮೈದಾನದಲ್ಲಿ ಕೆಎಸ್ಆರ್‌ಟಿಸಿ ಹಾಗೂ ಸ್ಮಾರ್ಟ್‌ಸಿಟಿಯು ಕ್ರಮವಾಗಿ ಸರ್ಕಾರಿ ಹಾಗೂ ಖಾಸಗಿ ಬಸ್ ನಿಲ್ದಾಣಗಳನ್ನು ನಿರ್ಮಿಸಿದ್ದವು. ಇದೇ ಸೆಪ್ಟೆಂಬರ್ 22ರಿಂದ ನೂತನ ಬಸ್ ನಿಲ್ದಾಣದಲ್ಲಿ ಕೆಎಸ್ಆರ್‌ಟಿಸಿ ಬಸ್‌ಗಳು ಕಾರ್ಯಾಚರಣೆ ನಡೆಸುತ್ತಿವೆ. ಅಕ್ಟೋಬರ್ 7ರಿಂದ ಶಾಮನೂರು ಶಿವಶಂಕರಪ್ಪ ಬಸ್ ನಿಲ್ದಾಣದಲ್ಲಿ ಖಾಸಗಿ ಬಸ್‌ಗಳು ಸೇವೆ ಒದಗಿಸುತ್ತಿವೆ. ಸದ್ಯ ಎರಡೂ ತಾತ್ಕಾಲಿಕ ಬಸ್ ನಿಲ್ದಾಣಗಳು ಖಾಲಿಯಿದ್ದರೂ, ಅವುಗಳನ್ನು ತೆರವುಗೊಳಿಸುವ ವಿಚಾರದಲ್ಲಿ ಮಾತ್ರ ವಿಳಂಬ ಧೋರಣೆ ಮುಂದುವರಿದಿದೆ. ಇದರಿಂದಾಗಿ ಕ್ರೀಡಾಪಟುಗಳು, ವಿದ್ಯಾರ್ಥಿಗಳು, ನಗರದ ಯುವಜನತೆಗೆ ಕ್ರೀಡಾಕೂಟಕ್ಕೆ ಸೂಕ್ತ ಜಾಗ ದೊರೆಯದಂತಾಗಿದೆ. ಶೀಘ್ರವೇ ತಾತ್ಕಾಲಿಕ ಬಸ್ ನಿಲ್ದಾಣಗಳನ್ನು ತೆರವು ಮಾಡಿ ಮೈದಾನವನ್ನು ಸುಸ್ಥಿತಿಗೆ ತರುವ ಮೂಲಕ ಕ್ರೀಡಾ ಚಟುವಟಿಕೆಗಳಿಗೆ ಅನುವು ಮಾಡಿಕೊಡಬೇಕು ಎಂದು ಯುವಜನರು ಒತ್ತಾಯಿಸಿದ್ದಾರೆ. ನೀತಿಸಂಹಿತೆ ಮುಗಿಯುವವರೆಗೂ ಟೆಂಡರ್ ಕರೆಯಲಾಗುವುದಿಲ್ಲ. ಆ ಬಳಿಕ ಟೆಂಡರ್ ಕರೆದು 15 ದಿನ ಕಾಲಾವಕಾಶ ನೀಡಲಾಗುವುದು. ಟೆಂಡರ್ ಪಡೆದವರು ಕಟ್ಟಡವನ್ನು ಕೆಡವಿ ಎಲ್ಲಾ ಸಾಮಗ್ರಿಯನ್ನೂ ಅಲ್ಲಿಂದ ಸಾಗಿಸಿ ಮೈದಾನವನ್ನು ಸುಸ್ಥಿತಿಗೆ ತರಬೇಕಾಗುತ್ತದೆ. ಈ ಎಲ್ಲಾ ಪ್ರಕ್ರಿಯೆ ಮುಗಿಯಲು ಕನಿಷ್ಠ ಒಂದೂವರೆಯಿಂದ ಎರಡು ತಿಂಗಳಾದರೂ ಬೇಕಾಗುತ್ತದೆ' ಎಂದು ಕೆಎಸ್ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಸಿದ್ದೇಶ್ವರ ಎನ್.ಹೆಬ್ಬಾಳ ಪ್ರತಿಕ್ರಿಯಿಸಿದರು.

ಉದಯವಾಹಿನಿ ಚಿತ್ರ

ಹೈಸ್ಕೂಲ್ ಮೈದಾನದಲ್ಲಿನ ತಾತ್ಕಾಲಿಕ ಬಸ್ ನಿಲ್ದಾಣಗಳನ್ನು ಕೆಎಸ್ಆರ್‌ಟಿಸಿ ಹಾಗೂ ಸ್ಮಾರ್ಟ್‌ಸಿಟಿಯವರು ತೆರವುಗೊಳಿಸಲು ಒಪ್ಪಿದ್ದಾರೆ. ತೆರವಾದ ಬಳಿಕ ಕ್ರೀಡಾ ಚಟುವಟಿಕೆಗೆ ಯಾವುದೇ ಅಡ್ಡಿ ಇರುವುದಿಲ್ಲ

–ಕೆ.ಚಮನ್‌ಸಾಬ್, ಮೇಯರ್

ತೆರವು ಕಾರ್ಯ ಏಕೆ ವಿಳಂಬ

ತೆರವು ಕಾರ್ಯ ಯಾಕೆ ವಿಳಂಬ, ತಾತ್ಕಾಲಿಕ ಬಸ್ ನಿಲ್ದಾಣದ ಕಟ್ಟಡವನ್ನು ತೆರವುಗೊಳಿಸಲು ಟೆಂಡರ್ ಕರೆಯಲು ಅನುಮತಿ ಕೋರಿ ಕೆಎಸ್ಆರ್‌ಟಿಸಿ ಕೇಂದ್ರ ಕಚೇರಿಗೆ ಇಲ್ಲಿನ ವಿಭಾಗೀಯ ಕಚೇರಿಯಿಂದ ಪತ್ರ ಬರೆಯಲಾಗಿದೆ. ಆದರೆ ಪತ್ರಕ್ಕೆ ಇನ್ನೂ ಉತ್ತರ ಬಂದಿಲ್ಲ. ಆದಷ್ಟು ಶೀಘ್ರ ಅನುಮತಿ ಸಿಗುವ ನಿರೀಕ್ಷೆಯಲ್ಲಿ ಕೆಎಸ್ಆರ್‌ಟಿಸಿ ವಿಭಾಗೀಯ ಕಚೇರಿ ಅಧಿಕಾರಿಗಳಿದ್ದಾರೆ. 'ಕೇಂದ್ರ ಕಚೇರಿಯಿಂದ ಅನುಮತಿ ದೊರೆತ ಬಳಿಕವೇ ಟೆಂಡರ್ ಕರೆಯಬೇಕಾಗುತ್ತದೆ. ಆದರೆ ಟೆಂಡರ್ ಕರೆಯಲು ಸ್ಥಳೀಯ ಸಂಸ್ಥೆಗಳ ಉಪಚುನಾವಣೆ ನೀತಿಸಂಹಿತೆ ಅಡ್ಡಿಯಾಗಿದೆ.

ವಿವಾಹಿತ ಮಹಿಳೆ ಹತ್ಯೆ: ಇಬ್ಬರ ಬಂಧನ

• ಉದಯವಾಹಿನಿ, ಮುದ್ದೇಬಿಹಾಳ

ಪಟ್ಟಣದ ಹೊರವಲಯದ ತಂಗಡಗಿ ರಸ್ತೆ ಪಕ್ಕ ಮಲ್ಲಪ್ಪ ದೊಡಮನಿ ಎನ್ನುವವರ ಹೊಲದಲ್ಲಿ ನವೆಂಬರ್ 2 ರಂದು ಅರೆನಗ್ನಾವಸ್ಥೆಯಲ್ಲಿ ಶವವಾಗಿ ಪತ್ತೇಯಾಗಿದ್ದ ವಿವಾಹಿತೆ ಶೋಭಾ ರೋಹಿತ್ ಲಮಾಣಿ (ನಾಯಕ್) ಇವಳನ್ನು ಕೊಲೆ ಮಾಡಿರುವ ಆರೋಪದ ಮೇಲೆ ಮುದ್ನಾಳ ಗ್ರಾಮದ ಮುತ್ತಪ್ಪ ಶಿವಪ್ಪ ಅಮರಪ್ಪಗೋಳ, ಸುರೇಶ ನಿಂಗಪ್ಪ ದೊಡಮನಿ ಅವರನ್ನು ತನಿಖಾ ತಂಡವು ರವಿವಾರ ಬಂಧಿಸಿ ಜೈಲಿಗೆ ಕಳಿಸಿದೆ.

ತನ್ನ ಮಗಳದ್ದು ಅತ್ಯಾಚಾರ ಮತ್ತು ಕೊಲೆ ಎಂದು ಆರೋಪಿಸಿ ಮೃತಳ ತಾಯಿ ಶಾಂತವ್ವ ಲಮಾಣಿ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಅಂದೇ ಪ್ರಕರಣ ದಾಖಲಿಸಿದ್ದಳು. ಈ ಪ್ರಕರಣವು ಎಸ್ಪಿ, ಎಸ್ಪಿ ಕಾಯ್ದೆಯಡಿ ಬರುವ ಕಾರಣ ಜಿಲ್ಲಾ ವರಿಷ್ಠಾಧಿಕಾರಿ ಪ್ರಸನ್ನ ದೇಸಾಯಿ, ಹೆಚ್ಚುವರಿ ವರಿಷ್ಠಾಧಿಕಾರಿಗಳಾದ ಶಂಕರ ಮಾರಿಹಾಳ, ರಾಮನಗೌಡ ಹಟ್ಟಿ ಇವರ ಮಾರ್ಗದರ್ಶನದಲ್ಲಿ ಬಸವನ ಬಾಗೇವಾಡಿ ಡಿಎಸ್ಪಿ ಬಲ್ಲಪ್ಪ ನಂದಗಾಂವಿ ಅವರ ನೇತೃತ್ವದಲ್ಲಿ ತಂಡ ರಚಿಸಲಾಗಿತ್ತು.

ಸಿಪಿಐ ಮಲ್ಲಿಕಾರ್ಜುನ ತುಳಸೀಗೇರಿ, ಪಿಎಸ್ಐಗಳಾದ ಸಂಜಯ್ ತಿಪ್ಪರಡ್ಡಿ, ಆರ್.ಎಲ್.ಮನ್ನಾಭಾಯಿ ಮತ್ತು ಸಿಬ್ಬಂದಿಗಳಾದ ಆರ್.ಎಸ್ ಪಾಟೀಲ, ಸಲೀಂ ಹತ್ತರಕಿಹಾಳ, ಸಂಗಮೇಶ ಚಲವಾದಿ, ವೀರೇಶ ಹಾಲಗಂಗಾಧರಮಠ, ರಮೇಶ ಮದರಿ, ಚನ್ನು ಬಿರಾದಾರ, ಎಂ.ಬಿ.ಹೂಗಾರ, ಎನ್.ಆರ್.ಚೌಧರಿ, ಮಂಜು ಬುಳ್ಳಾ, ಪ್ರಭು ಠಾಣೇದ, ವಿ.ಎಸ್.ಹಿಪ್ಪರಗಿ, ಗುಂಡು ಗಿರಣಿವಡ್ಡರ ತಂಡದಲ್ಲಿದ್ದರು. ಪ್ರಕರಣ ದಾಖಲಾದ ವಾರದೊಳಗೆ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾದ ತಂಡದ ಕಾರ್ಯವನ್ನು ಶ್ಲಾಘಿಸಿರುವ ಎಸ್ಪಿಯವರು ತಂಡಕ್ಕೆ ಸೂಕ್ತ ಬಹುಮಾನ ಘೋಷಿಸಿದ್ದಾರೆ.

ಈ ಕುರಿತು ಮಾತನಾಡಿದ ಡಿಎಸ್ಪಿ ನಂದಗಾಂವಿ ಅವರು, ಘಟನೆ ಅ.31 ಮತ್ತು ನ.2ರ ಮಧ್ಯೆ ನಡೆದಿತ್ತು. ಕೊಲೆಗೀಡಾದವಳ ತಾಯಿ ಮುದ್ನಾಳ ಗ್ರಾಮದ ಭಾಷಾ ಸುಗಂಧಿ ಮತ್ತು ಇನ್ನಿತರರ ವಿರುದ್ಧ ಅತ್ಯಾಚಾರ, ಕೊಲೆ ಪ್ರಕರಣ ದಾಖಲಿಸಿದ್ದರು. ತನಿಖೆಯಲ್ಲಿ ಸಿಕ್ಕ ಸಾಕ್ಷ್ಯಾಧಾರಗಳಿಂದ ಭಾಷಾಗೂ ಕೊಲೆಗೂ ಸಂಬಂಧ ಇಲ್ಲ ಅನ್ನೋದು ಖಚಿತವಾಯಿತು.

ತನಿಖೆ ಮುಂದುವರಿಸಿದಾಗ ಸಿಕ್ಕ ಸಾಕ್ಷಾಧಾರಗಳ ಪರಿಶೀಲನೆಯಿಂದ ಮುತ್ತಪ್ಪ, ಸುರೇಶ ಆರೋಪಿಗಳು ಅನ್ನೋದು ದೃಢಪಟ್ಟ ಹಿನ್ನೆಲೆ ಇವರನ್ನು ಬಂಧಿಸಲಾಗಿದೆ ಎಂದು ತಿಳಿಸಿದರು.

ತುಂಗಭದ್ರಾ ನದಿ ನೀರು ಬಳಸಲು ಯೋಗ್ಯವಲ್ಲ

• ಉದಯವಾಹಿನಿ, ಚೀಲೂರು

ತುಂಗಭದ್ರಾ ನದಿಯಲ್ಲಿ ರಾಸಾಯನಿಕಯುಕ್ತ ನೀರು ಹರಿಯುತ್ತಿರುವುದರಿಂದ ಬಳಕೆಗೆ ಯೋಗ್ಯವಾಗಿಲ್ಲ ಎಂದು ಬಿಜೆಪಿ ಮುಖಂಡ ರಾಂಪುರದ ಗಿರೀಶ ಪಟೇಲ್ ಹೇಳಿದರು.

ನ್ಯಾಮತಿ ತಾಲ್ಲೂಕಿನ ಚೀಲೂರು ಗ್ರಾಮಕ್ಕೆ ಆಗಮಿಸಿದ ನಿರ್ಮಲ ತುಂಗಭದ್ರಾ ಅಭಿಯಾನದಲ್ಲಿ ಅವರು ಮಾತನಾಡಿದರು.

ನೀರಾವರಿ ಬೆಳೆಗಳು, ಅಡಿಕೆ ತೋಟ ಹಾಗೂ ತರಕಾರಿ ಬೆಳೆಯಲು ಹೆಚ್ಚಿನ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರ, ಔಷಧಿಗಳನ್ನು ಬಳಸಲಾಗುತ್ತಿದೆ. ಪಟ್ಟಣಗಳ ತ್ಯಾಜ್ಯ ನೀರೂ ನದಿಯಲ್ಲಿ ಬೆರೆಯುವುದರಿಂದ ತುಂಗಭದ್ರಾ ಕಲುಷಿತಗೊಂಡಿದ್ದು, ಆ ನೀರನ್ನು ಬಳಸುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮವಾಗಲಿದೆ. ಈ ನಿಟ್ಟಿನಲ್ಲಿ ನದಿಯನ್ನು ಸ್ವಚ್ಛವಾಗಿಡಬೇಕು ಎಂಬ ಉದ್ದೇಶದಿಂದ ಹಮ್ಮಿಕೊಳ್ಳಲಾಗಿದೆ' ಎಂದರು. ಜಲಜಾಗೃತಿ, ಜನಜಾಗೃತಿಗಾಗಿ ನಿರ್ಮಲ ತುಂಗಭದ್ರಾ ಅಭಿಯಾನ ನ.6ರಂದು ಶೃಂಗೇರಿಯಿಂದ ಹೊರಟು ಕಿಷ್ಕಿಂಧೆಯವರೆಗೆ 400 ಕಿ.ಮೀ. ಸಂಚರಿಸಲಿದೆ ಎಂದು ತಂಡದ ನೇತೃತ್ವವಹಿಸಿರುವ ಬಿ.ಎಂ.ಕುಮಾರಸ್ವಾಮಿ ತಿಳಿಸಿದರು.

ಉದಯವಾಹಿನಿ ಚಿತ್ರ

ನಿರ್ಮಲ ತುಂಗಭದ್ರಾ ಅಭಿಯಾನ

ಕಾರ್ಯದರ್ಶಿ, ಮಾಜಿ ಸೈನಿಕ ಎಂ.ವಾಸಪ್ಪ, ಹೊನ್ನಾಳಿ ಬೀರಪ್ಪ, ಆರೀಫ್, ಇ.ಲೋಕೇಶ, ಎಂ.ಆರ್. ಮಹೇಶ, ಕೆ.ವಿ. ಚನ್ನಪ್ಪ, ಎ.ಬಿ.ಹನುಮಂತಪ್ಪ, ಪ್ರವೀಣ, ಶ್ರೀನಿವಾಸ, ರವಿಶಂಕರ, ಶಾಲಾ-ಕಾಲೇಜುಗಳ ಶಿಕ್ಷಕರು, ವಿದ್ಯಾರ್ಥಿಗಳು ಸಾರ್ವಜನಿಕರು ಉಪಸ್ಥಿತರಿದ್ದರು.

ಕೌಶಲ್ಯ ತರಬೇತಿ ಕೇಂದ್ರಗಳಿಗೆ ಭೇಟಿ, ಪರಿಶೀಲನೆ

• ಉದಯವಾಹಿನಿ, ಚಿತ್ರದುರ್ಗ

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶಿವಕಾಂತಮ್ಮ (ಕಾಂತಾ) ನಾಯಕ ಅವರು ಚಿತ್ರದುರ್ಗ ನಗರದ ವಿವಿಧ ಕೌಶಲ್ಯ ತರಬೇತಿ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶಿವಕಾಂತಮ್ಮ (ಕಾಂತಾ) ನಾಯಕ ಅವರು ನೇರವಾಗಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಚೇರಿಗೆ ಭೇಟಿ ನೀಡಿ, ಇಂಡಸ್ಟ್ರೀ ಲಿಂಕೇಜ್ ಸೇಲ್ (ಐಎಲ್‌ಸಿ) ಮತ್ತು ಸ್ಥಳ ನಿಯುಕ್ತಿಗಾಗಿ ಲೆಟರ್ ಆಫ್ ಇಂಡೆಂಟ್‌ನಲ್ಲಿ ನೊಂದಣಿ ಆಗಿರುವ ತರಬೇತಿ ಸಂಸ್ಥೆಗಳ ಮಾಹಿತಿ ಹಾಗೂ ನೊಂದಣಿ ಆಗಿರುವ ಖಾಸಗಿ ತರಬೇತಿ ಸಂಸ್ಥೆಗಳ ಮಾಹಿತಿ ಪಡೆದುಕೊಂಡರು. 2022-23ನೇ ಸಾಲಿನಲ್ಲಿ ಹೊಲಿಗೆ ಯಂತ್ರದಲ್ಲಿ ತರಬೇತಿ ಪಡೆದ ಫಲಾನುಭವಿಗಳಿಗೆ ವಿತರಿಸಲು ಸಂಕಲ್ಪ ಯೋಜನೆಯಡಿಯಲ್ಲಿ ವಿತರಿಸಿರುವ ಹೊಲಿಗೆ ಯಂತ್ರಗಳನ್ನು ಪರಿಶೀಲಿಸಿದರು. ನಂತರ ಸೇವಾ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಸೊಸೈಟಿಯ ತರಬೇತಿ ಸಂಸ್ಥೆ ವೀಕ್ಷಿಸಿ, ತರಬೇತಿ ಪಡೆಯುತ್ತಿರುವ ಫಲಾನುಭವಿಗಳಿಗೆ ಮುಖಾಮುಖಿಯಾಗಿ ಸಂದರ್ಶಿಸಿದರು.

ಉದಯವಾಹಿನಿ ಚಿತ್ರ

ನಂತರ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕ

ಎಲಾನ್ ಮಸ್ಕ್, ವಿವೇಕ್ ರಾಮಸ್ವಾಮಿಯನ್ನು ಸಂಪುಟಕ್ಕೆ ಸೇರಿಸಿಕೊಂಡ ಟ್ರಂಪ್

ಟ್ರಂಪ್ ಕ್ಯಾಬಿನೆಟ್‌ನಲ್ಲಿ ಎಲಾನ್ ಮಸ್ಕ್, ಭಾರತದ ವಿವೇಕ್ ರಾಮಸ್ವಾಮಿಗೆ ಮಹತ್ವದ ಹುದ್ದೆ, ಇಬ್ಬರಿಗೂ ವಹಿಸಿಕೊಟ್ಟ ಮುಂದಿನ ಅಧ್ಯಕ್ಷ

ವಾಷಿಂಗ್ಟನ್: ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸಂಪುಟದಲ್ಲಿ ಖ್ಯಾತ ಉದ್ಯಮಿ ಎಲಾನ್ ಮಸ್ಕ್ ಅವರಿಗೆ ಪ್ರಮುಖ ಹುದ್ದೆ ನೀಡಲು ಉದ್ದೇಶಿಸಲಾಗಿದೆ. ಅಲ್ಲದೆ, ಉಮೇದುವಾರಿಕೆಯಿಂದ ಹಿಂದೆ ಸರಿದು ಟ್ರಂಪ್ ಅವರ ಸ್ಪರ್ಧೆಗೆ ಅನುವು ಮಾಡಿಕೊಟ್ಟು ಬೆಂಬಲಿಸಿದ್ದ ಭಾರತ ಮೂಲದ ಉದ್ಯಮಿ ವಿವೇಕ್ ರಾಮಸ್ವಾಮಿ ಅವರಿಗೂ ಪ್ರಾಮುಖ್ಯ ನೀಡಲಾಗಿದೆ. ಡೊನಾಲ್ಡ್ ಟ್ರಂಪ್ ಅವರು ತಮ್ಮ ಪ್ರಚಾರ ಸಂದರ್ಭದಲ್ಲಿ ಭರವಸೆ ನೀಡಿದ್ದಂತೆ ಸರಕಾರದ ದಕ್ಷತಾ ಇಲಾಖೆಯ ನೇತೃತ್ವ ನೀಡಲಾಗಿದೆ. ವಿವೇಕ್ ರಾಮಸ್ವಾಮಿ ಅವರಿಗೂ ಮಸ್ಕ್ ಜತೆಗೆ ಹೊಣೆಗಾರಿಕೆ ಹಂಚಿಕೆ ಮಾಡಲಾಗಿದೆ.

ಈ ಇಬ್ಬರು ಅಮೆರಿಕನ್ನರು ಜತೆಯಾಗಿ, 'ಸೇವ್ ಅಮೆರಿಕ' ಚಳವಳಿಯನ್ನು ಸಾಕಾರಗೊಳಿಸಲು ಅಗತ್ಯವಾಗಿರುವ ಸರಕಾರಿ ಅಧಿಕಾರಶಾಹಿಯನ್ನು ಭಗ್ನಗೊಳಿಸಲು, ವಿಪರೀತ ನಿಯಂತ್ರಣಗಳನ್ನು ಕಡಿತಗೊಳಿಸಲು, ವ್ಯರ್ಥ ವೆಚ್ಚಗಳಿಗೆ ಕತ್ತರಿ ಹಾಕಲು ಮತ್ತು ಫೆಡರಲ್ ಸಂಸ್ಥೆಗಳನ್ನು ಮರುರಚನೆ ಮಾಡ ಲು ನನ್ನ ಆಡಳಿತಕ್ಕೆ ಹಾದಿ ಸುಗಮಗೊಳಿಸಲಿದ್ದಾರೆ ಎಂದು ಡೊನಾಲ್ಡ್ ಟ್ರಂಪ್ ಹೇಳಿಕೆ ನೀಡಿದ್ದಾರೆ.

ದಕ್ಷತೆ ಮೇಲೆ ಕಣ್ಣಿಟ್ಟು, ಫೆಡರಲ್ ಆಡಳಿತಶಾಹಿಯಲ್ಲಿ ಬದಲಾವಣೆ ಹಾಗೂ ಅದೇ ಸಮಯಕ್ಕೆ ಎಲ್ಲಾ ಅಮೆರಿಕನ್ನರ ಜೀವನ ಉತ್ತಮಗೊಳಿಸುವಂತೆ ಮಾಡುವಲ್ಲಿನ ಎಲಾನ್ ಮಸ್ಕ್ ಮತ್ತು ವಿವೇಕ್ ರಾಮಸ್ವಾಮಿ ಅವರು ತರುವ ಬದಲಾವಣೆಗಳಿಗಾಗಿ ನಾನು ಎದುರು ನೋಡುತ್ತಿದ್ದೇನೆ ಎಂದು ಟ್ರಂಪ್ ಹೇಳಿದ್ದಾರೆ. 'ಬೃಹತ್ ವ್ಯರ್ಥ ಹಾಗೂ ವಂಚನೆ'ಗಳನ್ನು ಸರ್ಕಾರದಿಂದ ಕಿತ್ತು ಹೊರದಬ್ಬುವುದಾಗಿ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಸರಕಾರದ ದಕ್ಷತೆಯ ಕಚೇರಿಯು ವಿಭಜನಾ ನಾಯಕತ್ವದೊಂದಿಗೆ ಅಮೋಘ ಆರಂಭ ಪಡೆದುಕೊಳ್ಳಲಿದೆ. ಒಬ್ಬ ವ್ಯಕ್ತಿಗಾಗಿ ಇಬ್ಬರು ವ್ಯಕ್ತಿಗಳು ಕೆಲಸ ಮಾಡುತ್ತಾರೆ. ಹೌದು, ಇದು ನಿಜಕ್ಕೂ ದಕ್ಷತೆಯಂತೆ ಕಾಣಿಸುತ್ತದೆ ಎಂದು ವಾರೆನ್ ಅವರು ಸಾಮಾಜಿಕ ಜಾಲತಾಣದಲ್ಲಿ ಲೇವಡಿ ಮಾಡಿದ್ದಾರೆ. ಡೊನಾಲ್ಡ್ ಟ್ರಂಪ್ ಅವರ ಆಯ್ಕೆಗಳು ನಮ್ಮ ಸುರಕ್ಷತೆಯನ್ನು ಕಡಿಮೆ ಮಾಡುತ್ತದೆ.

ಹೀಗಾಗಿ ಇದನ್ನು ತಿರಸ್ಕರಿಸಬೇಕು ಎಂದು ಅವರು ಹೇಳಿದ್ದಾರೆ. ಸರಕಾರದ ದಕ್ಷತಾ ಇಲಾಖೆಯು ಹೊಸದಾಗಿ ರೂಪುಗೊಂಡಿದ್ದು, ಇದು ಔಪಚಾರಿಕ ಸರಕಾರಿ ರಚನೆಯಿಂದ ಹೊರಗೆ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಟ್ರಂಪ್ ಹೇಳಿದ್ದರು. ಫೆಡರಲ್ ರಚನೆಯ ಆಡಳಿತದಲ್ಲಿನ ಖರ್ಚು ವೆಚ್ಚಗಳನ್ನು ಕಡಿಮೆ ಮಾಡುವ, ಅನಗತ್ಯ ಕಾರ್ಯಕ್ರಮಗಳನ್ನು ನಿಲ್ಲಿಸುವ ಹಾಗೂ ಬದಲಾವಣೆಗಳನ್ನು ತರುವಂತಹ ಪ್ರಮುಖ ಸಲಹೆಗಳನ್ನು ಈ ಇಲಾಖೆ ನೀಡಲಿದೆ ಎಂದು ಟ್ರಂಪ್ ತಿಳಿಸಿದ್ದಾರೆ.

ಹೊಣೆಗಾರಿಕೆ ಹಂಚಿಕೆ ಮಾಡಲಾಗಿದೆ

ಡೆಮಾಕ್ರಟಿಕ್ ಪಕ್ಷದ ಟೀಕೆ

ಸರಕಾರದ ದಕ್ಷತಾ ಇಲಾಖೆಯ ನೇತೃತ್ವವನ್ನು ಇಬ್ಬರು ಪ್ರಭಾವಿ ವ್ಯಕ್ತಿಗಳ ನಡುವೆ ಹಂಚಿಕೆ ಮಾಡಿರುವ ಡೊನಾಲ್ಡ್ ಟ್ರಂಪ್ ಅವರ ನಡೆಯನ್ನು ಡೆಮಾಕ್ರಟಿಕ್ ಸೆನೆಟರ್ ಎಲಿಜಬೆತ್ ವಾರೆನ್ ವ್ಯಂಗ್ಯವಾಡಿದ್ದಾರೆ. ಇಂತಹ ಮಹತ್ವದ ಹುದ್ದೆಯ ಹೊಣೆಯನ್ನು ಹಂಚಿಕೆ ಮಾಡಿದರೆ ದಕ್ಷತೆ ಎಲ್ಲಿರುತ್ತದೆ ಎಂದು ಅವರು ಟೀಕಿಸಿದ್ದಾರೆ.

ಅಮೆರಿಕ ಅಧ್ಯಕ್ಷರಾಗಿ ಚುನಾಯಿತರಾಗಿರುವ ಡೊನಾಲ್ಡ್ ಟ್ರಂಪ್, ಜನವರಿ 20ರಂದು ಅಧಿಕಾರ ವಹಿಸಿಕೊಳ್ಳುವುದಕ್ಕೂ ಮುನ್ನ ತಮ್ಮ ಸಂಪುಟದ ಆಯಕಟ್ಟಿನ ಹುದ್ದೆಗಳಿಗೆ ಸೂಕ್ತ ನಾಯಕರನ್ನು ನೇಮಿಸಿಕೊಳ್ಳುವ ಕಾರ್ಯದಲ್ಲಿ ತೊಡಗಿದ್ದಾರೆ. ಚುನಾವಣೆಯಲ್ಲಿ ತಮ್ಮನ್ನು ಬೆಂಬಲಿಸಿದ ಉದ್ಯಮಿ ಎಲಾನ್ ಮಸ್ಕ್ ಮತ್ತು ಭಾರತ ಮೂಲದ ವಿವೇಕ್ ರಾಮಸ್ವಾಮಿ ಅವರಿಗೆ ತಮ್ಮ ಸಂಪುಟದಲ್ಲಿ ಟ್ರಂಪ್ ಮಹತ್ವದ ಹುದ್ದೆ ನೀಡಿದ್ದಾರೆ.

ವಯನಾಡು ಪ್ರತಿನಿಧಿಸಲು ಮತದಾರರು ನನಗೆ ಅವಕಾಶ ನೀಡುತ್ತಾರೆ; ಪ್ರಿಯಾಂಕಾ

ವಯನಾಡು: ಕೇರಳದ ವಯನಾಡ್ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಯುಡಿಎಫ್ ಅಭ್ಯರ್ಥಿಯಾಗಿರುವ ಕಾಂಗ್ರೇಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು, ಈ ಕ್ಷೇತ್ರದ ಜನರು ತಮ್ಮನ್ನು ಪ್ರತಿನಿಧಿಸಲು ಮತ್ತು ಅವರು ತೋರಿಸಿದ ಪ್ರೀತಿಗೆ ಪ್ರತಿಫಲ ನೀಡಲು ಅವಕಾಶ ನೀಡುತ್ತಾರೆ ಎಂಬ ಭರವಸೆಯನ್ನು ವ್ಯಕ್ತಪಡಿಸಿದ್ದಾರೆ.

ಪ್ರಸ್ತುತ ಲೋಕಸಭಾ ಉಪಚುನಾವಣೆ ನಡೆಯುತ್ತಿರುವ ವಯನಾಡ್ ನ ಮತಗಟ್ಟೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪ್ರಿಯಾಂಕಾ ಈ ಹೇಳಿಕೆ ನೀಡಿದ್ದಾರೆ. ವಯನಾಡಿನ ಜನರು ನನಗೆ ತೋರಿಸಿದ ಪ್ರೀತಿ ಮತ್ತು ವಾತ್ಸಲ್ಯವನ್ನು ಮರುಪಾವತಿಸಲು ಮತ್ತು ಅವರಿಗಾಗಿ ಕೆಲಸ ಮಾಡಲು ಮತ್ತು ಅವರ ಪ್ರತಿನಿಧಿಯಾಗಲು ನನಗೆ ಅವಕಾಶ ನೀಡುತ್ತಾರೆ ಎಂಬುದು ನನ್ನ ನಿರೀಕ್ಷೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು. ಕೇರಳದಲ್ಲಿ ರಾಜಕೀಯ ಬಿರುಗಾಳಿಯನ್ನು ಸೃಷ್ಟಿಸಿರುವ ವಕ್ಫ್ ಕಾನೂನು ವಿಷಯ ಮತ್ತು ವಯನಾಡಿನ ಭೂಕುಸಿತ ಪೀಡಿತ ಜನರಿಗೆ ಕೇಂದ್ರದ ಸಹಾಯದ ಕೊರತೆಯ ಬಗ್ಗೆ ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದ ಪ್ರಿಯಾಂಕಾ, ಈ ವಿವಾದಗಳ ಬಗ್ಗೆ ಮಾತನಾಡುವ ದಿನ ಎಂದು ನಾನು ಭಾವಿಸುವುದಿಲ್ಲ ಎಂದು ಹೇಳಿದರು.

ಮತದಾನದ ದಿನ. ಪ್ರತಿಯೊಬ್ಬರೂ ತಮ ಪ್ರಜಾಪ್ರಭುತ್ವದ ಹಕ್ಕನ್ನು ಚಲಾಯಿಸುತ್ತಾರೆ ಮತ್ತು ಹೊರಬರುತ್ತಾರೆ ಎಂದು ನಾನು ಭಾವಿಸುತ್ತೇನೆ ಎಂದಿದ್ದಾರೆ.

ಮರದಿಂದ ತಯಾರಿಸಿದ ಲಿಗ್ನೋಸ್ಯಾಟ್ ಉಪಗ್ರಹ ಬಾಹ್ಯಾಕಾಶಕ್ಕೆ ಉಡಾವಣೆ

ಟೋಕಿಯೋ: ಚಂದ್ರ ಮತ್ತು ಮಂಗಳನ ಅಂಗಳದಲ್ಲಿ ಮರ ಬಳಸಿ ಮನೆ ಕಟ್ಟುವ ಯೋಜನೆಯನ್ನು ಹೊಂದಿರುವ ವಿಜ್ಞಾನಿಗಳು, ಇದರ ಸಾಧ್ಯಾಸಾಧ್ಯತೆಯನ್ನು ಅರ್ಥ ಮಾಡಿ ಕೊಳ್ಳಲು ಬಾಹ್ಯಾಕಾಶಕ್ಕೆ ಮರದಿಂದ ತಯಾರಿಸಿದ ಉಪಗ್ರಹ ಲಿಗ್ನೋಸ್ಯಾಟ್ ಉಡಾವಣೆ ಮಾಡಿದ್ದಾರೆ. ಇದು ವಿಶ್ವದಲ್ಲೇ ಮೊದಲ ಮರದ ಉಪಗ್ರಹ ಎಂಬ ಖ್ಯಾತಿ ಪಡೆದುಕೊಂಡಿದೆ.

ಮರ ಎಂಬುದಕ್ಕೆ ಲ್ಯಾಟಿನ್ ಭಾಷೆಯಲ್ಲಿರುವ ಪದವನ್ನು ಬಳಸಿ ಲಿಗ್ನೋಸ್ಯಾಟ್ ಎಂಬ ಹೆಸರನ್ನು ಈ ಉಪಗ್ರಹಕ್ಕೆ ಇಡಲಾಗಿದೆ. ಜಪಾನ್ ಕ್ಯೋಟೋ ವಿವಿ ಮತ್ತು ಸುಮಿಟಾಮೋ ಫಾರೆಸ್ಟ್ರಿ ಸೇರಿ ತಯಾರು ಮಾಡಿರುವ ಈ ಉಪಗ್ರಹವನ್ನು ಅಮೆರಿಕದ ಸ್ಪೇಸ್ ಎಕ್ಸ್‌ನ ರಾಕೆಟ್ ಮೂಲಕ ನವೆಂಬರ್ 5ರಂದು ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ ಉಡಾವಣೆ ಮಾಡಲಾಗಿದೆ. ಬಳಿಕ ಇದನ್ನು ಭೂಮಿಯಿಂದ 400 ಕಿ.ಮೀ. ಎತ್ತರದ ಕಕ್ಷೆಯಲ್ಲಿ ಅಳವಡಿಸಲಾಗುತ್ತದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

ಈ ಉಪಗ್ರಹ ಕೇವಲ ಅಂಗೈ ಅಗಲವಿದೆ. ಬಾಹ್ಯಾಕಾಶಕ್ಕೆ ಕಳುಹಿಸುವ ನವೀಕರಿಸಬಹುದಾದ ವಸ್ತುವಿನ ಮೇಲೆ ಕಾಸಿಕ್ ಪರಿಣಾಮ ಏನಾಗಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಲು ಹಾಗೂ ಇದರ ಮೂಲಕ ಬಾಹ್ಯಾಕಾಶದಲ್ಲಿ ಮನುಷ್ಯದ ಜೀವನ ಕುರಿತ ಅಧ್ಯಯನ ಕೈಗೊಳ್ಳಲಾಗುತ್ತದೆ ಎಂದು ತಜ್ಞರು ಹೇಳಿದ್ದಾರೆ.



ಕ್ಯೋಟೋ ಸಂಸ್ಥೆಯ ಪ್ರಮುಖ ಗುರಿ ಚಂದ್ರ ಮತ್ತು ಮಂಗಳನ ಮೇಲೆ ಮರದಿಂದ ಮನೆ ನಿರ್ಮಾಣ ಮಾಡುವುದಾಗಿದೆ. ಇದಕ್ಕಾಗಿ 50 ವರ್ಷಗಳ ಗುರಿ ಹಾಕಿಕೊಳ್ಳಲಾಗಿದ್ದು, ನಾಸಾ ಪ್ರಮಾಣಿತ ಮರದ ಉಪಗ್ರಹವನ್ನು ತಯಾರು ಮಾಡುವ ಉದ್ದೇಶವಿದೆ. ಪ್ರಸ್ತುತ ಈ ಉಪಗ್ರಹವನ್ನು ಜಪಾನ್ನಲ್ಲಿ ಸಿಗುವ ಮ್ಯಾಗ್ನೊಲಿಯಾ ಹೊನೊಕಿ ಎಂಬ ಮರದಿಂದ ತಯಾರಿಸಲಾಗಿದೆ ಎಂದು ವಿಜ್ಞಾನಿ ಟಾಕೋ ಡಾಯ್ ಹೇಳಿದ್ದಾರೆ. ಮುಂದಿನ 6 ತಿಂಗಳು ಈ ಉಪಗ್ರಹ ಭೂಮಿಯ ಸುತ್ತ ಸುತ್ತುತ್ತದೆ. ಬಾಹ್ಯಾಕಾಶದಲ್ಲಿ ಮರದ ಬಾಳಿಕೆಯನ್ನು ಮೌಲ್ಯಮಾಪನ ಮಾಡಿ ಡೇಟಾವನ್ನು ಸಂಗ್ರಹಿಸುತ್ತದೆ. ಈ ಡೇಟಾವು ಭವಿಷ್ಯದಲ್ಲಿ ಬಾಹ್ಯಾಕಾಶದಲ್ಲಿ ಮರವನ್ನು ಬಳಸುವ ಕಾರ್ಯಸಾಧ್ಯತೆಯನ್ನು ನಿರ್ಧರಿಸಲು ನಿರ್ಣಾಯಕವಾಗಿದೆ.

ಬಾಹ್ಯಾಕಾಶದಲ್ಲಿ ವಿಕಿರಣಗಳು ಉಪಗ್ರಹ ಒಳಗಿರುವ ಸೆಮಿಕಂಡಕ್ಟರ್ ಮೇಲೆ ಯಾವ ಪರಿಣಾಮ ಬೀರುತ್ತದೆ ಎಂಬುದನ್ನು ಲಿಗ್ನೊಸ್ಯಾಟ್ ಅಧ್ಯಯನ ಮಾಡಲಿದೆ. ಇದು ಯಶಸ್ವಿಯಾದರೆ, ಮುಂದಿನ ದಿನಗಳಲ್ಲಿ ಡಾಟಾ ಸೆಂಟರ್‌ಗಳನ್ನು ಮರದಿಂದ ನಿರ್ಮಾಣ ಮಾಡಬಹುದು ಎಂಬುದು ವಿಜ್ಞಾನಿಗಳ ಆಲೋಚನೆ. ಹಿಂದಿನ ಪರೀಕ್ಷೆಗಳ ಸಂದರ್ಭದಲ್ಲಿ, ಮರದ ತುಂಡುಗಳನ್ನು ಐಎಸ್ಎಸ್‌ಲ್ಲಿ ಹತ್ತು ತಿಂಗಳುಗಳ ಕಾಲ ಬಾಹ್ಯಾಕಾಶ ಸನ್ನಿವೇಶಕ್ಕೆ ತೆರೆದಿಡಲಾಯಿತು. ಈ ಪರೀಕ್ಷೆಗಳ ಫಲಿತಾಂಶಗಳು ಆಶಾದಾಯಕವಾಗಿವೆ.

ಈ ಮರದ ವಸ್ತುಗಳು ಅತ್ಯಂತ ಕಡಿಮೆ ಹಾನಿಗೊಳಗಾಗಿದ್ದು, ಬಾಹ್ಯಾಕಾಶದಲ್ಲಿ ಮರ ದೀರ್ಘಕಾಲ ಉಳಿಯಬಹುದು ಎಂಬ ನಂಬಿಕೆ ಮೂಡಲು ಕಾರಣವಾಗಿದೆ.

ಮರದ ಉಪ ಗ್ರಹಗಳನ್ನು ಬಳಸುವುದರಿಂದ ಲಭಿಸುವ ಅತಿದೊಡ್ಡ ಪ್ರಯೋಜನವೆಂದರೆ, ಅವುಗಳ ಕಾರ್ಯಾಚರಣಾ ಅವಧಿ ಮುಕ್ತಾಯಗೊಂಡ ಬಳಿಕ, ಅವುಗಳ ಭೂಮಿಯ ವಾತಾವರಣವನ್ನು ಮರಳಿ ಪ್ರವೇಶಿಸುತ್ತಿದ್ದಂತೆ ಯಾವುದೇ ತ್ಯಾಜ್ಯವೂ ಉಳಿಯದಂತೆ ಸಂಪೂರ್ಣವಾಗಿ ದಹಿಸಿ ಹೋಗುತ್ತವೆ. ಲಿಗ್ನೋಸ್ಯಾಟ್ ನಿರೀಕ್ಷೆಯಂತೆ ಕಾರ್ಯನಿರ್ವಹಿಸಿದರೆ ತಂಡವು ಮರದ ಉಪಗ್ರಹಗಳನ್ನು ಸ್ಪೇಸ್ ಎಕ್ಸ್‌ಗೂ ಪ್ರಯೋಜನವಾಗುವ ಅಥವಾ ಪರಿಚಯಿಸುವ ಸಾಧ್ಯತೆಯಿದೆ. ಎಲಾನ್ ಮಸ್ಕ್ ನೇತೃತ್ವದ ಸ್ಪೇಸ್ ಎಕ್ಸ್ ಸ್ಟಾರ್ ಲಿಂಕ್ ಯೋಜನೆಗೆ ಇದು ನೆರವಾಗ ಬಹುದು. ಉಪಗ್ರಹವು ಪರಿಸರಸ್ನೇಹಿ ವಸ್ತುಗಳೊಂದಿಗೆ ಬಾಹ್ಯಾಕಾಶ ಪರಿಶೋಧನೆಯಲ್ಲಿ ಕ್ರಾಂತಿಯನ್ನು ಉಂಟುಮಾಡಬಹುದು. ಸುಮಿಟಾಮೊ ಫಾರೆಸ್ಟ್ರಿಯ ಕೆಂಜಿ ಕರಿಯಾ ಅವರ ಪ್ರಕಾರ, ಮರದ ಉದ್ಯಮವು ಇತ್ತೀಚಿನ ಆವಿಷ್ಕಾರದಿಂದ ಪ್ರಯೋಜನ ಪಡೆಯುತ್ತದೆ.

100 ಡಿಗ್ರಿ ಸೆಲ್ಸಿಯಸ್ವರೆಗೂ ತಾಪಮಾನ ಬದಲಾವಣೆ

ಲೋಹದ ಉಪಗ್ರಹಗಳು ಮರು-ಪ್ರವೇಶದ ಸಮಯದಲ್ಲಿ ಅಲ್ಯೂಮಿನಿಯಂ ಆಕ್ಸೈಡ್ ಅನ್ನು ಬಿಡುತ್ತವೆ, ಆದರೆ ಮರದ ಉಪಗ್ರಹಗಳ ಸಂದರ್ಭದಲ್ಲಿ ಇದು ಕಡಿಮೆ ಮಾಲಿನ್ಯವನ್ನು ಉಂಟುಮಾಡುತ್ತದೆ ಮತ್ತು ಕಡಿಮೆ ಪರಿಸರದ ಹೆಜ್ಜೆ ಗುರುತನ್ನು ಉಂಟುಮಾಡುತ್ತದೆ. ಬಾಹ್ಯಾಕಾಶದಲ್ಲಿ ಪ್ರತಿ 45 ನಿಮಿಷಗಳಿಗೊಮೆ ಸೂರ್ಯನ ಬೆಳಕು ಹಾಗೂ ಕತ್ತಲು ಆವರಿಸುವುದರಿಂದ ಮೈನಸ್ 100 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶದಿಂದ 100 ಡಿಗ್ರಿ ಸೆಲ್ಸಿಯಸ್ವರೆಗೂ ತಾಪಮಾನ ಬದಲಾಗುತ್ತದೆ. ಕಕ್ಷೆಗೆ ಸೇರಿದ ಬಳಿಕ ಈ ಉಪಗ್ರಹದಲ್ಲಿರುವ ಎಲೆಕ್ಟ್ರಾನಿಕ್ ಉಪಕರಣಗಳು ಅಲ್ಲಿನ ಪರಿಸರದಲ್ಲಿ ಹೇಗೆ ಕಾರ್ಯ ನಿರ್ವಹಿಸುತ್ತವೆ ಎಂಬ ಮಾಹಿತಿಯನ್ನು ನಿರಂತರವಾಗಿ ಭೂಮಿ ಮೇಲಿರುವ ಕೇಂದ್ರಕ್ಕೆ ಕಳುಹಿಸುತ್ತದೆ.

ಮಹಾರಾಷ್ಟ್ರ ವಿಧಾನಸಭಾ ಚುನಾವಣೆ: ಅಷ್ಟಪಕ್ಷಗಳಿಗೆ ಸತ್ವ ಪರೀಕ್ಷೆ

ಮುಂಬೈ: ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗೆ ಒಂದು ವಾರ ಮಾತ್ರ ಬಾಕಿ ಉಳಿದಿರುವ ಈ ಸಂದರ್ಭದಲ್ಲಿ ಮುಂಬೈನ 36 ವಿಧಾನಸಭಾ ಕ್ಷೇತ್ರಗಳಲ್ಲಿ ಎಂಟು ಪ್ರಮುಖ ರಾಜಕೀಯ ಪಕ್ಷಗಳ ಮಧ್ಯೆ ತೀವ್ರ ಹಣಾಹಣಿ ಏರ್ಪಟ್ಟಿದೆ. ಬಿಜೆಪಿ, ಶಿವಸೇನೆ, ಕಾಂಗ್ರೇಸ್, ಶಿವಸೇನೆ, ಎನ್ಸಿಪಿ, ಎನ್ಸಿಪಿ, ಸಮಾಜವಾದಿ ಪಕ್ಷ ಮತ್ತು ಮಹಾರಾಷ್ಟ್ರ ನವನಿರ್ಮಾಣ ಸೇನೆ ಸೇರಿದಂತೆ ಎಂಟು ಪ್ರಮುಖ ಪಕ್ಷಗಳು ಈ 36 ಕ್ಷೇತ್ರಗಳಲ್ಲಿ ತೀವ್ರ ಜಿದ್ದಾಜಿದ್ದಿಯ ಹೋರಾಟ ನಡೆಸುತ್ತಿವೆ. ಮರಾಠಿ ಭಾಷಿಕ ಮತದಾರರು ಮಾತ್ರವಲ್ಲದೇ ಈ ಎಲ್ಲಾ ಪಕ್ಷಗಳು ಮರಾಠಿಯೇತರ ಮತದಾರರನ್ನು ಸೆಳೆಯಲು ತೀವ್ರ ಕಸರತ್ತು ನಡೆಸುತ್ತಿವೆ. ಭಾರಿ ಮಹತ್ವ ಪಡೆದುಕೊಂಡಿರುವ ಮಹಾನಗರ ಪಾಲಿಕೆ ವ್ಯಾಪ್ತಿಯ ಕ್ಷೇತ್ರಗಳು ದೇಶದ ಅತ್ಯಂತ ಶ್ರೀಮಂತ ಪೌರಾಡಳಿತ ಸಂಸ್ಥೆಯಾಗಿರುವ ಬೃಹನ್ಮುಂಬೈ ಮುನ್ಸಿಪಲ್ ಕಾರ್ಪೊರೇಶನ್‌ಗೆ ದೀರ್ಘಕಾಲದಿಂದ

ಚುನಾವಣೆ ನಡೆದಿಲ್ಲ. ಸುಮಾರು 25 ವರ್ಷಗಳ ಕಾಲ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆಯು ಬಿಎಂಸಿಯ ಮೇಲೆ ಆಧಿಪತ್ಯ ಸಾಧಿಸಿತ್ತು. ಮುಂಬರುವ ಬಿಎಂಸಿ ಚುನಾವಣೆಗಳಲ್ಲಿ ಬಿಜೆಪಿ ಶಿವಸೇನೆ ಮೈತ್ರಿಕೂಟವು ಇದರ ಮೇಲೆ ಆಧಿಪತ್ಯ ಸಾಧಿಸಲು ಪ್ರಯತ್ನಿಸಲಿರುವುದರಿಂದ ಕೂಡ ಮುಂಬೈನ 36 ವಿಧಾನಸಭಾ ಕ್ಷೇತ್ರಗಳು ಬಹಳ ಪ್ರಾಮುಖ್ಯ ಪಡೆದುಕೊಂಡಿವೆ. ಶಿವಸೇನೆ ಯುಬಿಟಿಗೆ ಭಾರಿ ಅಗ್ನಿ ಪರೀಕ್ಷೆ ಶಿವಸೇನೆಗೆ, ವಿಶೇಷವಾಗಿ ಜೂನ್ 2022 ರಲ್ಲಿ ವಿಭಜನೆಯ ನಂತರ ವಿಧಾನಸಭಾ ಚುನಾವಣೆಯು ಪುನರುಜ್ಜೀವನ ಮತ್ತು ಪ್ರತಿದಾಳಿ ನಡೆಸಲು ಒಂದು ಅವಕಾಶವಾಗಿದೆ. ಹಾಗೆಯೇ ಬಿಜೆಪಿಗೆ ಇದು ವಿಶೇಷವಾಗಿ 2017ರ ಪೌರ ಸಂಸ್ಥೆ ಚುನಾವಣೆಯಲ್ಲಿ ಮತ್ತು ನಂತರ 2019ರ ವಿಧಾನಸಭಾ ಚುನಾವಣೆಯಲ್ಲಿನ ಯಶಸ್ಸಿನ ನಂತರ ತನ್ನ ಶಕ್ತಿಯನ್ನು ಬಲಪಡಿಸುವ ಹೋರಾಟವಾಗಿದೆ.

ಶಿಂಧೆ ಶಿವಸೇನೆಗೆ ಭರ್ಜರಿ ಅವಕಾಶವೇ?: ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆಗೆ, ಇದು ಶಿವ ಸೇನೆ ಸಂಸ್ಥಾಪಕ ಬಾಳಾಸಾಹೇಬ್ ಠಾಕ್ರೆ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ಹಿಂದುತ್ವ ಚಿಂತನೆಗಳು ಮತ್ತು ವರ್ಚಸ್ಸಿನ ಮೇಲೆ ಸವಾರಿ ಮಾಡುವ, ಮಹಾನಗರದಲ್ಲಿ ತನ್ನ ನೆಲೆಯನ್ನು ವಿಸ್ತರಿಸುವ ಅವಕಾಶವಾಗಿದೆ. ಆದಾಗ್ಯೂ, ಮರಾಠಿ ಭಾಷಿಕ ಮತದಾರರ ಮತಗಳ ವಿಭಜನೆಯ ಮೇಲೆ ಅವಲಂಬಿತವಾಗಿರುವ ರಾಜ್ ಠಾಕ್ರೆ ನೇತೃತ್ವದ ಎಂಎನ್‌ಎಸ್‌ಗೆ, ಶಿವಸೇನೆಗೆ ಬಲವಾದ ಪರ್ಯಾಯವಾಗಿ ಹೊರಹೊಮ್ಮಲು ಇದು ಅಗ್ನಿ ಪರೀಕ್ಷೆಯಾಗಿದೆ.

ಸಮಂತಾ ಹಾರ್ವೆರ 'ಆರ್ಬಿಟಲ್' ಕಾದಂಬರಿಗೆ ಬೂಕರ್ ಪ್ರಶಸ್ತಿ

ಲಂಡನ್: ಬ್ರಿಟಿಷ್ ಲೇಖಕಿ ಸಮಂತಾ ಹಾರ್ವೆ ಅವರು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ ಬಗ್ಗೆ ಬರೆದಿರುವ ಆರ್ಬಿಟಲ್ ಕಾದಂಬರಿಗೆ ಬೂಕರ್ ಪ್ರಶಸ್ತಿ ಲಭಿಸಿದೆ. ಕೋವಿಡ್ -19 ಸಾಂಕ್ರಾಮಿಕ ಲಾಕ್ಡೌನ್ ಸಮಯದಲ್ಲಿ ಅವರು ಬರೆಯಲು ಪ್ರಾರಂಭಿಸಿದ ಆರು ಗಗನಯಾತ್ರಿಗಳ ಬಗ್ಗೆ ಬಾಹ್ಯಾಕಾಶ ಪಶುಪಾಲಕ ಎಂದು ಕರೆದಿದ್ದಕ್ಕಾಗಿ ಹಾರ್ವೆ ಅವರಿಗೆ 50,000 ಪೌಂಡ್ (64,000 ಯುಎಸ್ಡಿ) ಬಹುಮಾನವನ್ನು ನೀಡಲಾಯಿತು. ಸೀಮಿತ ಪಾತ್ರಗಳು ಒಂದು ದಿನದ ಅವಧಿಯಲ್ಲಿ 16 ಸೂರ್ಯೋದಯಗಳು ಮತ್ತು 16 ಸೂರ್ಯಾಸ್ತಗಳ ಮೂಲಕ ಸುತ್ತುತ್ತವೆ, ಪರಸ್ಪರರ ಸಹವಾಸದಲ್ಲಿ ಸಿಲುಕಿಕೊಳ್ಳುತ್ತವೆ ಮತ್ತು ವಿಶ್ವದ ದುರ್ಬಲ ಸೌಂದರ್ಯದಿಂದ ರೂಪಾಂತರಗೊಳ್ಳುತ್ತವೆ. ಐದು ಸದಸ್ಯರ ತೀರ್ಪುಗಾರರ ಸಮಿತಿಯ ಅಧ್ಯಕ್ಷತೆ ವಹಿಸಿದ್ದ

ನಟನ ಕುರಿತು ಹಾಡು ಬರೆದಿದ್ದ ರಾಯಚೂರಿನ ಯುವಕ ಬಂಧನ

ಸಲ್ಮಾನ್‌ಗೆ ಜೀವ ಬೆದರಿಕೆ ಕೇಸ್

ಬಾಲಿವುಡ್ ನಟ ಸಲ್ಮಾನ್ ಖಾನ್‌ಗೆ ಜೀವ ಬೆದರಿಕೆ ಪ್ರಕರಣ ಹಿನ್ನೆಲೆ ರಾಯಚೂರಿನ ಮಾನ್ವಿಯಲ್ಲಿ ಮುಂಬೈ ಪೊಲೀಸರು ಆರೋಪಿ ಯುವಕನನ್ನ ಬಂಧಿಸಿ ಕರೆದೊಯ್ದಿದ್ದಾರೆ. ಮಾನ್ವಿಯಲ್ಲಿ ಟೈಯರ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಸೋಹೆಲ್ ಪಾಷಾ ಬಂಧಿತ ಆರೋಪಿ.

ನವೆಂಬರ್ 11ರಂದು ಆರೋಪಿಯನ್ನ ಬಂಧಿಸಿ ಮುಂಬೈಗೆ ಕರೆದೊಯ್ಯಲಾಗಿದೆ. ಮುಂಬೈ ವರ್ಲಿ ಪೊಲೀಸ್ ಠಾಣೆಯಿಂದ ಆರೋಪಿ ಪೋಷಕರಿಗೆ ಇಂದು ಕರೆ ಬಂದಿದ್ದು ವಿಚಾರಣೆಗೆ ಮುಂಬೈಗೆ ಬರುವಂತೆ ಪೊಲೀಸರು ಸೂಚಿಸಿದ್ದಾರೆ. ಇದೀಗ ಮಗನ ಬಂಧನದಿಂದ ಬಡ ಕುಟುಂಬ ಕಣ್ಣೀರಿಡುತ್ತಿದೆ. ಸಲ್ಮಾನ್ ಖಾನ್ ಅಪ್ಪಟ ಅಭಿಮಾನಿಯಾಗಿದ್ದ ಸೋಹೆಲ್ ಪಾಶಾ, ಬಹುಬೇಗ ಹೆಸರು ಮಾಡಲು ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್ ಹೆಸರಲ್ಲಿ ಬೆದರಿಕೆ ಹಾಕಿದ್ದ. ಮುಂಬೈ ಟ್ರಾಫಿಕ್ ಪೊಲೀಸ್ ಸಹಾಯವಾಣಿ ವಾಟ್ಸ್‌ಆಪ್ ನಂಬರ್‌ಗೆ ನ.7ರಂದು ಕೊಲೆ ಬೆದರಿಕೆ ಮೆಸೇಜ್ ಮಾಡಿದ್ದ, 5 ಕೋಟಿ ಬೇಡಿಕೆ ಇಟ್ಟಿದ್ದ. ಬೇರೆಯವರ ಮೊಬೈಲ್ ನಂಬರ್ ಬಳಸಿ ವಾಟ್ಸ್ ಆಪ್ ಮೆಸೇಜ್ ಮಾಡಿದ್ದ ಸೋಹೆಲ್ ಕೊನೆಗೂ ಸಿಕ್ಕಿಬಿದ್ದಿದ್ದಾನೆ.

ಮಗ ಮಾಡಿದ ತಪ್ಪಿಗೆ ಪೋಷಕರು ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಎಂಟನೇ ತರಗತಿ ಓದಿದ್ದ ಸೋಹೆಲ್ ಪಾಷಾ ಹಿಂದಿ ಹಾಡುಗಳನ್ನ ಬರೆಯುತ್ತಿದ್ದರು.

ಸಲ್ಮಾನ್ ಖಾನ್ ಕುರಿತಾಗಿಯೂ ಹಾಡು ಬರೆದಿದ್ದ ಅವರ ಅಭಿಮಾನಿಯಾಗಿದ್ದ ಇದೀಗ ಕೊಲೆ ಬೆದರಿಕೆ ಆರೋಪದಲ್ಲಿ ಸೋಹೆಲ್ ಪೊಲೀಸರ ಅತಿಥಿಯಾಗಿದ್ದಾನೆ. ಮಾನ್ವಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಎರಡು ದಿನ ಹುಡುಕಾಟ ನಡೆಸಿದ್ದ ಮುಂಬೈ ಪೊಲೀಸರು ಆರೋಪಿಯನ್ನ ಬಂಧಿಸಿ ಕರೆದೊಯ್ದಿದ್ದಾರೆ.

ಪರಶುರಾಮನ ಅವತಾರದಲ್ಲಿ ವಿಕ್ಕಿ ಕೌಶಲ್

ಮಾಸ್ ಆಗಿ ಎಂಟ್ರಿ ಕೊಟ್ಟ ಕಮಲ್ ಹಾಸನ್

ಬಾಲಿವುಡ್ ನಟ ವಿಕ್ಕಿ ಕೌಶಲ್ ಅವರು ಎಂತಹದ್ದೇ ಪಾತ್ರ ಕೊಟ್ಟರೂ ಆ ಪಾತ್ರವೇ ತಾವಾಗಿ ನಟಿಸುತ್ತಾರೆ. ಸದಾ ಲವರ್ ಬಾಯ್ ಪಾತ್ರಗಳಲ್ಲಿ ನಟಿಸುತ್ತಿದ್ದ ವಿಕ್ಕಿ ಈಗ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಪೌರಾಣಿಕ ಚಿತ್ರದಲ್ಲಿ ಪರಶುರಾಮನ ಪಾತ್ರಕ್ಕೆ ಅವರು ಜೀವ ತುಂಬಿದ್ದಾರೆ. ಈ ಪಾತ್ರದ ಮೊದಲ ಲುಕ್ ಅನಾವರಣ ಆಗಿದೆ.

ಅಮರ್ ಕೌಶಿಕ್ ನಿರ್ದೇಶನದ 'ಮಹಾವತಾರ' ಪೌರಾಣಿಕ ಸಿನಿಮಾದಲ್ಲಿ ವಿಕ್ಕಿ ಕೌಶಲ್ ಚಿರಂಜೀವಿ ಪರಶುರಾಮನಾಗಿ ಬಣ್ಣ ಹಚ್ಚಿದ್ದಾರೆ. ಈ ಸಿನಿಮಾದ ಎರಡು ಲುಕ್ ಅನ್ನು ಚಿತ್ರತಂಡ ಅನಾವರಣ ಮಾಡಿದೆ. ಚಿತ್ರದ ಪೋಸ್ಟರ್‌ನಲ್ಲಿ ನಟ ಉಗ್ರ ಅವತಾರ ತಾಳಿದ್ದಾರೆ. ಈ ಸಿನಿಮಾ ಮುಂದಿನ ಕ್ರಿಸ್ಮಸ್ 2026ರ ವೇಳೆ ರಿಲೀಸ್ ಆಗಲಿದೆ. ಈ ಚಿತ್ರವನ್ನು ದಿನೇಶ್ ವಿಜನ್ ನಿರ್ಮಾಣ ಮಾಡಿದ್ದಾರೆ.

ಇನ್ನೂ ಈ ಸಿನಿಮಾದ ಜೊತೆ ಆಲಿಯಾ ಭಟ್ ಜೊತೆ 'ಲವ್ ವಾರ್' ಚಿತ್ರವಿದೆ. ರಶ್ಮಿಕಾ ಜೊತೆ 'ಛಾವಾ' ಚಿತ್ರವಿದೆ. ಡಿ.6ರಂದು ಈ ಸಿನಿಮಾ ರಿಲೀಸ್ ಆಗಲಿದೆ.

ಪ್ಯಾನ್ ಇಂಡಿಯಾ ಸಿನಿಮಾದಲ್ಲಿ ವಸಿಷ್ಠ ಸಿಂಹ!

ವಿಭಿನ್ನ ಪಾತ್ರಗಳಲ್ಲಿ ವಸಿಷ್ಠ ಸಿಂಹ

ಕಂಚಿನ ಕಂಠದಿಂದ ಸಿನಿಮಾರಂಗಲ್ಲಿ ಗುರುತಿಸಿಕೊಂಡಿರುವ ವಸಿಷ್ಠ ಸಿಂಹ ಕನ್ನಡ, ತೆಲುಗು ಸಿನಿಮಾಗಳಲ್ಲಿ ವಿಭಿನ್ನ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ಇದೀಗ ತ್ರಿಬಾಣಧಾರಿ ಬಾರ್ಬರಿಕ್ ಚಿತ್ರದ ಮೋಷನ್ ಪೋಸ್ಟರ್ ಬಿಡುಗಡೆಯಾಗಿದೆ.

ನಟ ವಸಿಷ್ಠ ಸಿಂಹ ಅವರು ತ್ರಿಬಾಣಧಾರಿ ಬಾರ್ಬರಿಕ್ ಸಿನಿಮಾದೊಂದಿಗೆ ಪ್ಯಾನ್-ಇಂಡಿಯಾ ಸಿನಿಮಾ ಮಾಡಲು ಸಿದ್ಧರಾಗಿದ್ದಾರೆ, ಇದು ಬಹು ಭಾಷೆಗಳಲ್ಲಿ ಬಿಡುಗಡೆಗೆ ರೆಡಿಯಾಗಿದೆ.

ಗಮನಾರ್ಹ ಅಭಿನಯಕ್ಕಾಗಿ ಹೆಸರುವಾಸಿಯಾದ ವಸಿಷ್ಠ ಅವರು ತೀವ್ರ ಮತ್ತು ಸೂಕ್ಷ್ಮ ಪಾತ್ರಗಳ ನಡುವೆ ಸಲೀಸಾಗಿ ಪರಿವರ್ತನೆ ಮಾಡುವ ಸಾಮರ್ಥ್ಯಕ್ಕಾಗಿ ಮನ್ನಣೆಯನ್ನು ಗಳಿಸಿದ್ದಾರೆ. ನಾರಪ್ಪ ಮತ್ತು ಒಡೆಲಾ ರೈಲು ನಿಲ್ದಾಣದ ಮೂಲಕ ತೆಲುಗಿನಲ್ಲಿ ತನ್ನ ಛಾಪು ಮೂಡಿಸಿದ ನಂತರ, ವಸಿಷ್ಠ ಈಗ ಪ್ಯಾನ್ ಇಂಡಿಯಾ ಮಟ್ಟಕ್ಕೆ ತಮ್ಮ ವೃತ್ತಿ ಜೀವನ ಕೊಂಡೊಯ್ಯುತ್ತಿದ್ದಾರೆ. ಇದರ ಮೊದಲ ಹಂತವಾಗಿ, ತ್ರಿಬಾಣಧಾರಿ 'ಬಾರ್ಬರಿಕ್' ಸಿನಿಮಾ ರೂಪುಗೊಳ್ಳುತ್ತಿದೆ. ಈ ಚಿತ್ರವನ್ನು ವಿಜಯಪಾಲ್ ರೆಡ್ಡಿ ಅಡಿಧಲ ನಿರ್ಮಿಸಿದರೆ, ಮೋಹನ್ ಶ್ರೀವತ್ಸ ಆಯಕ್ಷನ್ ಕಟ್ ಹೇಳುತ್ತಿದ್ದಾರೆ. ಖ್ಯಾತ ನಿರ್ದೇಶಕ ಮಾರುತಿ ಚಿತ್ರವನ್ನು ಪ್ರೆಸೆಂಟ್ ಮಾಡುತ್ತಿದ್ದಾರೆ. ಪ್ಯಾನ್ ಇಂಡಿಯಾ ಚಿತ್ರದ ಮುಖ್ಯಪಾತ್ರದಲ್ಲಿ ವಸಿಷ್ಠ ಸಿಂಹ ಕಾಣಿಸಿಕೊಳ್ಳಲಿದ್ದಾರೆ. ಕಂಚಿನ ಕಂಠದಿಂದ ಸಿನಿಮಾರಂಗಲ್ಲಿ ಗುರುತಿಸಿಕೊಂಡಿರುವ ವಸಿಷ್ಠ ಸಿಂಹ ಕನ್ನಡ, ತೆಲುಗು ಸಿನಿಮಾಗಳಲ್ಲಿ ವಿಭಿನ್ನ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ಇದೀಗ ತ್ರಿಬಾಣಧಾರಿ ಬಾರ್ಬರಿಕ್ ಚಿತ್ರದ ಮೋಷನ್ ಪೋಸ್ಟರ್ ಬಿಡುಗಡೆಯಾಗಿದ್ದು, ಇದರ ಮೂಲಕ ಚಿತ್ರದ ಕಥಾವಸ್ತುವನ್ನು ಪರಿಚಯಿಸಲಾಗಿದೆ.

ಕುಬೇರ ಹೊಸ ಪೋಸ್ಟರ್ ಔಟ್

ಧನುಷ್ ನಟನೆಯ 'ಕುಬೇರ' ಸಿನಿಮಾದಲ್ಲಿ ಟಾಲಿವುಡ್ ಕಿಂಗ್ ನಾಗಾರ್ಜುನ ಅಕ್ಕಿನೇನಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಚಿತ್ರದಲ್ಲಿನ ಅವರ ಪಾತ್ರದ ವಿಶೇಷ ಪೋಸ್ಟರ್‌ವೊಂದನ್ನು ರಿವೀಲ್ ಮಾಡುವುದರ ಜೊತೆಗೆ ಸಿನಿಮಾದ ಕುರಿತು ಬಿಗ್ ಅಪ್‌ಡೇಟ್‌ವೊಂದನ್ನು ಹಂಚಿಕೊಂಡಿದ್ದಾರೆ.

'ಕುಬೇರ' ಸಿನಿಮಾದಲ್ಲಿ ನಟನೆಗೆ ಸ್ಕೋಪ್ ಇರುವಂತಹ ಪಾತ್ರದಲ್ಲಿ ನಾಗಾರ್ಜುನ ಅಕ್ಕಿನೇನಿ ನಟಿಸಿದ್ದಾರೆ. ಸದ್ಯ ನಟನ ಪೋಸ್ಟರ್‌ವೊಂದನ್ನು ಚಿತ್ರತಂಡ ಹಂಚಿಕೊಂಡಿದೆ. ಜೊತೆಗೆ ನವೆಂಬರ್ 15ರಂದು ಸಿನಿಮಾದ ಮೊದಲ ಗ್ಲಿಂಪ್ಸ್ ಬಿಡುಗಡೆ ಮಾಡೋದಾಗಿ ಚಿತ್ರತಂಡ ಅಪ್‌ಡೇಟ್ ಹಂಚಿಕೊಂಡಿದೆ. ಇನ್ನೂ ಧನುಷ್ ಮತ್ತು ರಶ್ಮಿಕಾ ಮಂದಣ್ಣ ಮೊದಲ ಬಾರಿಗೆ ಜೋಡಿಯಾಗಿ ನಟಿಸಿದ್ದಾರೆ. ಹಾಗಾಗಿ ಸಿನಿಮಾ ಬಗ್ಗೆ ಅಭಿಮಾನಿಗಳಿಗೆ ಭಾರೀ ನಿರೀಕ್ಷೆಯಿದೆ.



ಖಿಡುಲ್ ಮೂಲಕ ಭರ್ಜರಿ ಸಕ್ಸೆಸ್

'ಪುಷ್ಪ 2' ಬಳಿಕ ರಿಲೀಸ್ ಆಗಲಿದೆ

ರಶ್ಮಿಕಾ ನಟನೆಯ ಬ್ಯಾಕ್ ಟು ಬ್ಯಾಕ್ ಚಿತ್ರಗಳು

ಕೊಡಗಿನ ಬೆಡಗಿ ರಶ್ಮಿಕಾ ಮಂದಣ್ಣ ಬೇಡಿಕೆಯ ನಾಯಕಿಯಾಗಿ ಬ್ಯುಸಿಯಾಗಿದ್ದಾರೆ. 'ಪುಷ್ಪ 2' ರಿಲೀಸ್ ಬಳಿಕ ಮುಂದಿನ 10 ತಿಂಗಳಲ್ಲಿ ರಶ್ಮಿಕಾ ನಟನೆಯ ಸಾಲು ಸಾಲು ಸಿನಿಮಾಗಳು ರಿಲೀಸ್‌ಗೆ ಸಜ್ಜಾಗಿದೆ. ರಶ್ಮಿಕಾ ಮಂದಣ್ಣ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟು 8 ವರ್ಷಗಳಾಗಿವೆ. ಕನ್ನಡದ 'ಕಿರಿಕ್ ಪಾರ್ಟಿ'ಯಿಂದ ಶುರುವಾದ ಅವರ ವೃತ್ತಿ ಜೀವನ ಬಾಲಿವುಡ್ ಅಂಗಳಲ್ಲಿ ಕೊಡಗಿನ ಬೆಡಗಿ ಸದ್ದು ಮಾಡುತ್ತಿದ್ದಾರೆ. ಕಳೆದ ವರ್ಷ ಅನಿಮಲ್ ಸಿನಿಮಾ ಮೂಲಕ ಭರ್ಜರಿ ಸಕ್ಸಸ್ ಕಂಡರು. ಆ ನಂತರ ಅವರ ನಟನೆಯ ಯಾವುದೇ ಚಿತ್ರ ರಿಲೀಸ್ ಆಗಿರಲಿಲ್ಲ. ಇದೀಗ ಅವರ ಮುಂಬರುವ ಸಿನಿಮಾಗಳ ಮಾಹಿತಿ ಇಲ್ಲಿದೆ.

ಈ ವರ್ಷದ ಅಂತ್ಯದಲ್ಲಿ ಡಿಸೆಂಬರ್ 5ರಂದು ಬಹುನಿರೀಕ್ಷಿತ 'ಪುಷ್ಪ 2' ಚಿತ್ರ ರಿಲೀಸ್‌ಗೆ ಸಜ್ಜಾಗಿದೆ. ಆ ನಂತರ ಡಿ.6ರಂದು ವಿಕ್ಕಿ ಕೌಶಲ್ ಜೊತೆಗಿನ 'ಛಾವಾ' ತೆರೆಕಾಣಲಿದೆ. ಬಳಿಕ 2025ರ ಈದ್ ಹಬ್ಬದ ವೇಳೆ, ಸಲ್ಮಾನ್ ಖಾನ್ ಜೊತೆಗಿನ ಸಿಖಂದರ್ ಸಿನಿಮಾ ರಿಲೀಸ್ ಆಗಲಿದೆ. ಮುಂದಿನ ವರ್ಷ ದಿ ಗರ್ಲ್‌ಫ್ರೆಂಡ್, ಕುಬೇರ, ರೈನ್‌ಬೋ ಚಿತ್ರಗಳು ರಿಲೀಸ್‌ಗೆ ರೆಡಿಯಾಗಿದೆ. ಇನ್ನೂ ರಶ್ಮಿಕಾ ಅವರು ಸ್ಟಾರ್ ನಟರ ಜೊತೆಗಿನ ಸಿನಿಮಾಗಳನ್ನು ಆಯ್ಕೆ ಮಾಡೋದಕ್ಕಿಂತ ಅವರ ಪಾತ್ರ ಮತ್ತು ಕಥೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಾರೆ.

ಮೊದಲ ಬಾರಿಗೆ ಈ ಸಾಧನೆ ಮಾಡಿದ ಅರ್ಜುನ್

ರಣಜಿಯಲ್ಲಿ ಮರಿ ತೆಂಡೂಲ್ಕರ್ ರೌದ್ರಾವತಾರ

ರಣಜಿ ಟ್ರೋಫಿಯಲ್ಲಿ ನಿರಂತರ ವೈಫಲ್ಯಗಳನ್ನು ಎದುರಿಸುತ್ತಿದ್ದ ಅರ್ಜುನ್ ತೆಂಡೂಲ್ಕರ್ ಅವರು ಗೋವಾ ಪರ ಅರುಣಾಚಲ ಪ್ರದೇಶದ ವಿರುದ್ಧ ಅದ್ಭುತ ಪ್ರದರ್ಶನ ನೀಡಿದ್ದಾರೆ. ಕೇವಲ 9 ಓವರ್‌ಗಳಲ್ಲಿ 25 ರನ್‌ಗಳಿಗೆ 5 ವಿಕೆಟ್ ಪಡೆದು ತಂಡಕ್ಕೆ ನೆರವಾಗಿದ್ದಾರೆ. ಇದು ಅವರ ರಣಜಿ ಟ್ರೋಫಿ ವೃತ್ತಿಜೀವನದ ಮೊದಲ ಐದು ವಿಕೆಟ್‌ಗಳ ಗೊಂಚಲು ಎಂಬುದು ವಿಶೇಷ.

ಪ್ರಸ್ತುತ ನಡೆಯುತ್ತಿರುವ ರಣಜಿ ಟ್ರೋಫಿಯಲ್ಲಿ ವೈಫಲ್ಯಗಳನ್ನೇ ಎದುರಿಸಿದ್ದ ಕ್ರಿಕೆಟ್ ದೇವರು ಸಚಿನ್ ತೆಂಡೂಲ್ಕರ್ ಅವರ ಪುತ್ರ ಅರ್ಜುನ್ ತೆಂಡೂಲ್ಕರ್, ಇದೀಗ ಲಯ ಕಂಡುಕೊಂಡಿದ್ದಾರೆ. ಗೋವಾ ಪರ ಕಣಕ್ಕಿಳಿದಿರುವ ಅರ್ಜುನ್, ಅರುಣಾಚಲ ಪ್ರದೇಶದ ವಿರುದ್ಧ ಅದ್ಭುತ ಪ್ರದರ್ಶನ ನೀಡಿ, ರಣಜಿಯಲ್ಲಿ ಇದೇ ಮೊದಲ ಬಾರಿಗೆ ಐದು ವಿಕೆಟ್‌ಗಳ ಗೊಂಚಲು ಪಡೆದ ಸಾಧನೆ ಮಾಡಿದ್ದಾರೆ. ಇಂದಿನ ಪಂದ್ಯದಲ್ಲಿ ಮ್ಯಾಜಿಕಲ್ ಸ್ಪೆಲ್ ಮಾಡಿದ ಅರ್ಜುನ್, ಕೇವಲ 9 ಓವರ್‌ಗಳಲ್ಲಿ 25 ರನ್ ನೀಡಿ 5 ವಿಕೆಟ್‌ಗಳನ್ನು ಪಡೆದರು. ತಮ್ಮ 17ನೇ ಪ್ರಥಮ ದರ್ಜೆ ಪಂದ್ಯವನ್ನು ಆಡುತ್ತಿರುವ ಅರ್ಜುನ್ ಅವರ ಮಾರಕ ದಾಳಿಯ ನೆರವಿನಿಂದ ಗೋವಾ ತಂಡ, ಅರುಣಾಚಲ ಪ್ರದೇಶವನ್ನು ಕೇವಲ 84 ರನ್‌ಗಳಿಗೆ ಆಲೌಟ್ ಮಾಡಿದೆ.

'ಬೆಂಕಿ' ಚೆಂಡು ಅರ್ಜುನ್

ರಣಜಿ ಟ್ರೋಫಿಯ 5ನೇ ಸುತ್ತಿನ ಪಂದ್ಯಗಳು ಶುರುವಾಗಿದ್ದು, ನವೆಂಬರ್ 13 ಬುಧವಾರದಂದು ಗೋವಾ ಮತ್ತು ಅರುಣಾಚಲ ಪ್ರದೇಶ ನಡುವಿನ ಪಂದ್ಯ ಆರಂಭವಾಗಿದೆ. ಗೋವಾ ಕ್ರಿಕೆಟ್ ಸಂಸ್ಥೆಯ ಮೈದಾನದಲ್ಲಿ ನಡೆಯುತ್ತಿರುವ ಈ ಪಂದ್ಯದಲ್ಲಿ ಅರುಣಾಚಲ ಪ್ರದೇಶ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಲು ನಿರ್ಧರಿಸಿತು. ಆದರೆ ಅರುಣಾಚಲ ಪ್ರದೇಶ ತಂಡದ ಆಯ್ಕೆಯನ್ನು ತಪ್ಪು ಎಂದು ಸಾಬೀತುಪಡಿಸಿದ ಅರ್ಜುನ್ ತೆಂಡೂಲ್ಕರ್, ಬ್ಯಾಟ್ಸ್‌ಮನ್‌ಗಳನ್ನು ಹೆಡೆಮುರಿ ಕಟ್ಟಿದರು. ಅರ್ಜುನ್, ಎರಡನೇ ಓವರ್‌ನಲ್ಲಿಯೇ ಆರಂಭಿಕ ಬ್ಯಾಟ್ಸ್‌ಮನ್ ನೀಬಾಮ್ ಹಚಾಂಗ್ ಅವರನ್ನು ಔಟ್ ಮಾಡುವ ಮೂಲಕ ಅರುಣಾಚಲ ಪ್ರದೇಶಕ್ಕೆ ಮೊದಲ ಹೊಡೆತ ನೀಡಿದರು.

ಕೇವಲ 84 ರನ್‌ಗಳಿಗೆ ಆಲೌಟ್

ಸ್ವಲ್ಪ ಸಮಯದ ನಂತರ ಮತ್ತೆ ದಾಳಿಗಿಳಿದ ಅರ್ಜುನ್, ನೀಲಂ ಓಬಿಯನ್ನು ಮತ್ತು ಜೈ ಭಾವಸರ್ ಅವರನ್ನು ಪೆವಿಲಿಯನ್‌ಗಟ್ಟಿದರು. ಇದಾದ ಬಳಿಕ ಚಿನ್ಮಯ್ ಪಾಟೀಲ್, ಮೋಜಿ ಅಟೆ ಅವರ ಬಲಿ ಪಡೆದು 5ನೇ ವಿಕೆಟ್ ಪೂರೈಸಿದರು. ಅರ್ಜುನ್ ಅವರ ಈ ವಿಕೆಟ್‌ಗಳ ಭೇಟೆಯ ವಿಶೇಷವೆಂದರೆ, ಅವರು ಪಡೆದು ಐದು ವಿಕೆಟ್‌ಗಳು ಮೊದಲ ಐವರು ಬ್ಯಾಟ್ಸ್‌ಮನ್‌ಗಳದ್ದಾಗಿದ್ದವು. ಅದರಲ್ಲೂ ಕೇವಲ 36 ರನ್‌ಗಳಲ್ಲಿ ಔಟ್ ಮಾಡುವ ಮೂಲಕ ಅರುಣಾಚಲ ಪ್ರದೇಶಕ್ಕೆ ಆರಂಭಿಕ ಆಘಾತ ನೀಡಿದರು. ಇದರ ಫಲವಾಗಿ ಅರುಣಾಚಲ ಪ್ರದೇಶ ತಂಡ ಮೊದಲ ಇನ್ನಿಂಗ್ಸ್‌ನಲ್ಲಿ ಕೇವಲ 84 ರನ್ ಗಳಿಸಲಷ್ಟೇ ಶಕ್ತವಾಯಿತು.

ಅರ್ಜುನ್ ಇದಕ್ಕೂ ಮುನ್ನ 16 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದು, ಅದರಲ್ಲಿ 32 ವಿಕೆಟ್‌ಗಳನ್ನು ಉರುಳಿಸಿದ್ದರು. ಈ ಅವಧಿಯಲ್ಲಿ 49 ರನ್‌ಗಳಿಗೆ 4 ವಿಕೆಟ್ ಕಬಳಿಸಿದ್ದು ಅವರ ಅತ್ಯುತ್ತಮ ಪ್ರದರ್ಶನವಾಗಿತ್ತು. ಈ ವೇಳೆ ಬ್ಯಾಟಿಂಗ್‌ನಲ್ಲೂ ಕೊಡುಗೆ ನೀಡಿರುವ ಅವರು 16 ಪಂದ್ಯಗಳಲ್ಲಿ 23 ರ ಸರಾಸರಿಯಲ್ಲಿ 531 ರನ್ ಗಳಿಸಿದ್ದಾರೆ.

ಬಿಸಿಸಿಐಗೆ ಬಳೆ ತೊಡಿಸಿ: ಪಾಕ್ ಕ್ರಿಕೆಟಿಗನಿಂದ ನಿಂದನೆ..!

ಚಾಂಪಿಯನ್ಸ್ ಟ್ರೋಫಿ 2025 ರಲ್ಲಿ ಒಟ್ಟು 8 ತಂಡಗಳು ಕಣಕ್ಕಿಳಿಯಲಿದೆ. ಅದರಂತೆ ಭಾರತ, ಪಾಕಿಸ್ತಾನ್, ಸೌತ್ ಆಫ್ರಿಕಾ, ನ್ಯೂಝಿಲೆಂಡ್, ಅಫ್ಘಾನಿಸ್ತಾನ್, ಇಂಗ್ಲೆಂಡ್, ಬಾಂಗ್ಲಾದೇಶ್ ಮತ್ತು ಆಸ್ಟ್ರೇಲಿಯಾ ತಂಡಗಳು ಸೆಣಸಲಿದೆ. ಇನ್ನು 2025ರ ಚಾಂಪಿಯನ್ಸ್ ಟ್ರೋಫಿ ಆಯೋಜನೆಯ ಹಕ್ಕು ಪಾಕಿಸ್ತಾನ್ ಕ್ರಿಕೆಟ್ ಬೋರ್ಡ್ ಕೈಯಲ್ಲಿದ್ದು, ಹೀಗಾಗಿ ಭಾರತ ತಂಡ ಪಾಕ್‌ಗೆ ತೆರಳಲು ಹಿಂದೇಟು ಹಾಕಿದೆ.

2025ರ ಚಾಂಪಿಯನ್ಸ್ ಟ್ರೋಫಿಗೆ ಭಾರತ ತಂಡವನ್ನು ಪಾಕಿಸ್ತಾನಕ್ಕೆ ಕಳುಹಿಸಲು ಬಿಸಿಸಿಐ ನಿರಾಕರಿಸಿದೆ. ಈ ಟೂರ್ನಿಗೆ ಸಂಬಂಧಿಸಿದಂತೆ ಭಾರತೀಯ ಕ್ರಿಕೆಟ್ ಮಂಡಳಿ ತನ್ನ ನಿರ್ಧಾರವನ್ನು ಪ್ರಕಟಿಸಿದಾಗಿನಿಂದ, ಹೊಸ ಚರ್ಚೆ ಶುರುವಾಗಿದೆ. ಈ ಚರ್ಚೆಯ ನಡುವೆ ಪಾಕಿಸ್ತಾನದ ಮಾಜಿ ಕ್ರಿಕೆಟಿಗ ತನ್ವೀರ್ ಅಹ್ಮದ್ ಎಲ್ಲಾ ಮಿತಿಗಳನ್ನು ದಾಟಿ ನಿಂದನಾತ್ಮಕ ಪದಗಳನ್ನು ಬಳಸಿದ್ದಾರೆ.

ತನ್ವೀರ್ ಅಹಮದ್ ಹೇಳಿದ್ದೇನು

ಕಳೆದ ಕೆಲವು ದಿನಗಳಿಂದ ಭಾರತ ಪಾಕಿಸ್ತಾನಕ್ಕೆ ಹೋಗುವುದಿಲ್ಲ ಎಂದು ಹೇಳಿಕೆಗಳನ್ನು ನೀಡುತ್ತಿದ್ದಾರೆ. ಬಿಸಿಸಿಐ ನೀವು ಬಳೆಗಳನ್ನು ಧರಿಸುವುದು ಉತ್ತಮ ಎಂದು ತನ್ವೀರ್ ಸೋಷಿಯಲ್ ಮೀಡಿಯಾದಲ್ಲಿ ಬರೆದುಕೊಂಡಿದ್ದಾರೆ. ಇಷ್ಟಕ್ಕೇ ನಿಲ್ಲದೆ ಭಾರತೀಯ ಕ್ರಿಕೆಟ್ ಮಂಡಳಿಗೆ ಸುಳ್ಳುಗಾರ, ಕೊಳಕು, ದುಷ್ಟ, ದ್ವಂದ್ವ ನೀತಿಯಂತಹ ಆಕ್ಷೇಪಾರ್ಹ ಪದಗಳನ್ನೂ ಬಳಸಿದ್ದಾರೆ. ಬಿಸಿಸಿಐ ಅನ್ನು ನಂಬುವ ಬದಲು ಮೋಸ ಮಾಡದ ಕತ್ತೆಯನ್ನು ನಂಬುವುದು ಉತ್ತಮ ಎಂದು ತನ್ವೀರ್ ಹೇಳಿದ್ದಾರೆ.

ಐಸಿಸಿ ಅಂಗಳದಲ್ಲಿ ಚಾಂಪಿಯನ್ಸ್ ಟ್ರೋಫಿ ಚೆಂಡು:

ಬಿಸಿಸಿಐ ನಿರ್ಧಾರದ ನಂತರ, ಪಾಕಿಸ್ತಾನ್ ಕ್ರಿಕೆಟ್ ಮಂಡಳಿಯು ಯಾವುದೇ ಪಂದ್ಯಾವಳಿಯಲ್ಲಿ ಭಾರತದ ಜೊತೆ ಆಡುವುದಿಲ್ಲ ಎಂದು ಬೆದರಿಕೆಯೊಡ್ಡಿದೆ. ಅಲ್ಲದೆ ಚಾಂಪಿಯನ್ಸ್ ಟ್ರೋಫಿ ಆತಿಥ್ಯವನ್ನು ಕಸಿದುಕೊಂಡರೆ ಟೂರ್ನಿಯಿಂದ ಹಿಂದೆ ಸರಿಯುವುದಾಗಿ ತಿಳಿಸಿದೆ.

ಈ ಬಗ್ಗೆ ಪಾಕಿಸ್ತಾನ್ ಕ್ರಿಕೆಟ್ ಬೋರ್ಡ್ ನವೆಂಬರ್ 12, ಮಂಗಳವಾರ ಐಸಿಸಿಗೆ ಇಮೇಲ್ ಕಳುಹಿಸಲಾಗಿದ್ದು, ಅದರಲ್ಲಿ ಟೀಮ್ ಇಂಡಿಯಾವನ್ನು ಕಳುಹಿಸದಿರಲು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ಸ್ಪಷ್ಟ ಕಾರಣಗಳನ್ನು ನೀಡುವಂತೆ ಒತ್ತಾಯಿಸಲಾಗಿದೆ. ಅದೇ ಸಮಯದಲ್ಲಿ, ಐಸಿಸಿ ಎಲ್ಲಾ ತಂಡಗಳೊಂದಿಗೆ ನಿರಂತರವಾಗಿ ಮಾತುಕತೆ ನಡೆಸುತ್ತಿದ್ದು, ಪಂದ್ಯಾವಳಿಯ ವೇಳಾಪಟ್ಟಿಯ ಬಗ್ಗೆ ಕೂಡ ಚರ್ಚೆಗಳು ನಡೆಯುತ್ತಿವೆ.

ಅಂದರೆ ಚಾಂಪಿಯನ್ಸ್ ಟ್ರೋಫಿ ಆಯೋಜನೆಯ ಅಂತಿಮ ನಿರ್ಧಾರ ಇದೀಗ ಐಸಿಸಿ ಮುಂದಿದ್ದು, ಒಂದು ವೇಳೆ ಪಾಕಿಸ್ತಾನ್‌ಕ್ರಿಕೆಟ್ ಬೋರ್ಡ್ ಟೂರ್ನಿಯನ್ನು ಹೈಬ್ರಿಡ್ ಮಾದರಿಯಲ್ಲಿ ಆಯೋಜಿಸಲು ಸಿದ್ಧವಿಲ್ಲದರೆ, ಚಾಂಪಿಯನ್ಸ್ ಟ್ರೋಫಿಯು ಸೌತ್ ಆಫ್ರಿಕಾಗೆ ಸ್ಥಳಾಂತರ